ಜನಶಕ್ತಿ

ಕನ್ನಡ ವಾರಪತ್ರಿಕೆ


Blog :janashakthi.wordpress.com e-mail : js_weekly@yahoo.com


ಸಂಪುಟ 7 ಸಂಚಿಕೆ 23
ಜೂನ್ 9, 2013

ಪುಟ 16

ರೂ. 10/-








ಕೋಮುವಾದ ಸೋತಿದೆ; ಸತ್ತಿಲ್ಲ





ಮಾವೋವಾದಿ ಹಿಂಸಾಚಾರ:
ರಾಜಕೀಯವಾಗಿ, ಸೈದ್ಧಾಂತಿಕವಾಗಿ
ಎದುರಿಸಬೇಕು

ಶಾಸನ ಸಭೆ ಕೋಟ್ಯಾಧಿಪತಿಗಳ ಕೋಟೆಯಾಗುತ್ತಿದೆಯೇ ?




ನರೇಂದ್ರ ಮೋದಿಗೆ
ನ.ಮೋ. ನಮೋ
ಎನ್ನುವುದು ಯಾಕೆ ?

ನೇರ ನಗದು ವರ್ಗಾವಣೆ !
ಅಲ್ಲಲ್ಲ, ನೇರ ವಿನಾಶದ
ಯೋಜನೆ



ಕಲ್ಲಿದ್ದಲು ಹಗರಣ-
ಕೆ.ಜಿ.ಬೇಸಿನ್ ಹಗರಣಗಳು
ಮತ್ತು ಆಂಧ್ರ ಪ್ರದೇಶದ
ವಿದ್ಯುತ್ ಬಿಕ್ಕಟ್ಟು



ವೆನೆಜುವೆಲಾ:
ಮದುರೋ ಸರ್ಕಾರದ
ಬುಡಮೇಲಿಗೆ ಅಮೆರಿಕದ ಶತಪ್ರಯತ್ನ

ಪುರುಷ ಪ್ರಧಾನ ಮೌಲ್ಯಗಳಿಗೆ ಸವಾಲೆಸೆಯಿರಿ... ಬದುಕಿನ ನಿಯಮಗಳನ್ನು ಮತ್ತೆ ಬರೆಯಿರಿ...

ಡಿವೈಎಫ್ಐ ಮುಂಬೈ ಅ.ಭಾ. ಯುವತಿಯರ ಸಮಾವೇಶದ ಕರೆ

ಮಹಾರಾಷ್ಟ್ರದ ರಾಜಧಾನಿ ಮುಂಬೈ ಮಹಾನಗರದಲ್ಲಿ ಮೇ 25–26, 2013 ರಂದು ಡಿವೈಎಫ್ಐ ಸಂಘಟನೆಯು ಅಖಿಲ ಭಾರತ ಯುವತಿಯರ ಸಮಾವೇಶವೊಂದನ್ನು ಸಂಘಟಿಸಿತ್ತು. ಅಲ್ಲಿ ನಡೆದ ಚರ್ಚೆ ಏನು ? ಕೈಗೊಂಡ ತೀರ್ಮಾನಗಳೇನು ? ಓದಿ.

ಬಿ.ರಾಜಶೇಖರಮೂರ್ತಿ

ದೇಶಾದ್ಯಂತ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಅಮಾನುಷ ದೌರ್ಜನ್ಯ-ದಬ್ಬಾಳಿಕೆಗಳಿಗೆ ಮುಖ್ಯವಾಗಿ ನಮ್ಮ ಸಾಮಾಜಿಕ-ಆರ್ಥಿಕ ವ್ಯವಸ್ಥೆಯೇ ಕಾರಣ. ಕಳೆದ 20 ವರ್ಷಗಳಿಂದ ನಮ್ಮನ್ನಾಳುವ ಸರ್ಕಾರಗಳು ಜಾರಿಗೆ ತರುತ್ತಿರುವ ನವ ಉದಾರೀಕರಣ ನೀತಿಗಳಿಂದ ಮಹಿಳೆಯರ ಅದರಲ್ಲೂ ಕೃಷಿಕೂಲಿಕಾರ ಮತ್ತು ದಲಿತ ಮಹಿಳೆಯರ ಬದುಕು ಚಿಂತಾಜನಕವಾಗಿದೆ ಎಂದು ಖ್ಯಾತ ಆರ್ಥಿಕ ತಜ್ಞರಾದ ಉತ್ಸಾ ಪಟ್ನಾಯಕ್ ಹೇಳಿದರು.

ಅವರು ಮುಂಬೈನಲ್ಲಿ ಮೇ 25–26, 2013



ರಂದು ಡಿವೈಎಫ್ಐ ಸಂಘಟಿಸಿದ್ದ ಅಖಿಲ ಭಾರತ ಯುವತಿಯರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ನಮ್ಮನ್ನಾಳುವ ಸರ್ಕಾರಗಳು, ನಮ್ಮ ದೇಶದ ಆರ್ಥಿಕವು ಅಭಿವೃದ್ಧಿಯ ಪಥದಲ್ಲಿದೆ ಎಂದು ಮಾಧ್ಯಮಗಳ ಮುಖಾಂತರ ಹುಸಿ ಪ್ರಚಾರವನ್ನು ಹರಿಯಬಿಟ್ಟಿವೆ. ಆದರೆ ವಾಸ್ತವ ಪರಿಸ್ಥಿತಿ ಬೇರೆಯೇ ಇದೆ. ಇಂದಿಗೂ ಗ್ರಾಮೀಣ ಭಾರತದ ಶೇ.48. ಮಹಿಳೆಯರು ಅಪೌಷ್ಠಿಕತೆಯಿಂದ ನರಳುತ್ತಿದ್ದಾರೆ. ಒಟ್ಟು ಭಾರತದ ಜನ ಸಂಖ್ಯೆಯಲ್ಲಿ ಕೇವಲ ಶೇ.5ರಷ್ಟು ಜನರ ಆರ್ಥಿಕ ಅಭಿವೃದ್ಧಿ ಇಡೀ ದೇಶದ ಜನರ ಅಭಿವೃದ್ಧಿಯ ಮಾನದಂಡವಾಗದು. ಇದನ್ನು ಕಾಂಗ್ರೆಸ್ ಅರಿಯಬೇಕೆಂದರು.

ಉಳ್ಳವರಿಗೆ ಐಶಾರಾಮಿ ವಸ್ತುಗಳು ಅಗ್ಗ

ಆಧುನಿಕ ಯುಗದಲ್ಲಿ ಉಳ್ಳವರಿಗೆ ಮಾತ್ರ ಅನುಕೂಲವಾಗುವಂತೆ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಐಶಾರಾಮಿ ಜೀವನಕ್ಕೆ ಅಗತ್ಯವಾದವುಗಳನ್ನು ಶ್ರೀಮಂತರಿಗೆ ಸಾಕಷ್ಟು ಅಗ್ಗವಾಗಿ ಒದಗಿಸಲಾಗುತ್ತಿದೆ. ಉದಾ: ಕಾರು, ಟಿವಿ, ವಾಷಿಂಗ್ ಮೆಷಿನ್, ಹವಾನಿಯಂತ್ರಣ ಸಾಧನ ಮುಂತಾದ ವಸ್ತುಗಳಿಗೆ ಅತ್ಯಲ್ಪ ಹಣ ಸಂದಾಯಿಸಿ ವಸ್ತುಗಳನ್ನು ಪಡೆಯಬಹುದು. ಇಂತಹವುಗಳನ್ನು ಶ್ರೀಮಂತರು ಮತ್ತು ಅನುಕೂಲಸ್ಥರು ಮಾತ್ರ ಕೊಳ್ಳಬಹುದು. ನಮ್ಮ ದೇಶದಲ್ಲಿ ಹಾಗೇ ಉಳಿದಿರುವ ಪುರುಷ ಪ್ರಧಾನ ಪಾಳೇಗಾರಿ ಮತ್ತು ಭೂಮಾಲಿಕ ವ್ಯವಸ್ಥೆಯ ಮೇಲೆಯೇ ನವ ಉದರೀಕರಣದ ನೀತಿಗಳನ್ನು ಜಾರಿಗೆ ತರುವುದರಿಂದ ಶೇ.70 ರಷ್ಟು ಜನತೆ ಬಡತನದಿಂದ ನರಳುತ್ತಿದ್ದಾರೆ. ಇಂತಹ ದುಡಿಯುವ ಜನರ ಸಂಕಷ್ಟಗಳನ್ನು ಬಗೆಹರಿಸುವ ಕಾಳಜಿ ಆಳುವ ಸರ್ಕಾರಗಳಿಗಿಲ್ಲ. ಈ ಬಗ್ಗೆ ಬದ್ದತೆಯಿಲ್ಲ. ಹೀಗಾಗಿ ನಮ್ಮ ದೇಶದಲ್ಲಿನ ಆರ್ಥಿಕ ಸಾಮಾಜಿಕ ಪರಿಸ್ಥಿತಿ ಬದಲಾಗದೆ ಮಹಿಳೆಯರ ಮೇಲಿನ ದೌರ್ಜನ್ಯಗಳು ನಿಲ್ಲಲು ಸಾಧ್ಯವಿಲ್ಲ. ಹೀಗಾಗಿ ವಿಶಾಲವಾಗಿ ಪ್ರಜಾಸತ್ತಾತ್ಮಕವಾದ ಯುವ ಮಹಿಳಾ ಚಳುವಳಿಯನ್ನು ರೂಪಿಸುವ ಅಗತ್ಯವಿದೆ. ಇಂತಹ ಪ್ರಜಾಸತ್ತಾತ್ಮಕ ಚಳುವಳಿಯನ್ನು ಕಟ್ಟುವ ಜವಾಬ್ದಾರಿ ಡಿವೈಎಫ್ಐ ಮೇಲಿದೆ ಎಂದು ಉತ್ಸಾ ಹೇಳಿದರು.

ಮತ್ತೆ ಬರೆಯಿರಿ.....


ಪುರುಷ ಪ್ರಧಾನ ಮೌಲ್ಯಗಳಿಗೆ ಸವಾಲೆಸೆಯಿರಿ....

ಬದುಕಿನ ನಿಯಮಗಳನ್ನು ಮತ್ತೆ ಬರೆಯಿರಿ... ಎಂಬ ಘೋಷಣೆಯಡಿಯಲ್ಲಿ ಜರುಗಿದ ಉದ್ಘಾಟನಾ ಸಮಾರಂಭದಲ್ಲಿ ಕೋಮುವಾದದ ವಿರುದ್ದದ ಖ್ಯಾತ ಹೋರಾಟಗಾರ್ತಿ ಡಾ. ತೀಸ್ತಾ ಸೆತಲ್ವಾಡ್ ಮತ್ತು ಜನವಾದಿ ಮಹಿಳಾ ಸಂಘಟನೆಯ ಕಾಂ. ಜಗಮತಿ ಹಾಗೂ ಪ್ರಜಾಸತ್ತಾತ್ಮಕ ಚಳುವಳಿಯ ಮುಖಂಡರಾದ ಅಶೋಕ್ ದವಳೆ ಹಾಗೂ ಡಿವೈಎಫ್ಐನ ಅಖಿಲ ಭಾರತ ಅಧ್ಯಕ್ಷರಾದ ಎಂ.ಬಿ.ರಾಜೇಶ್, ಕಾರ್ಯದರ್ಶಿ ಅಭಯ್ ಮುಖರ್ಜಿ ಹಾಗೂ ಮಹಾರಾಷ್ಟ್ರದ ಡಿವೈಎಫ್ಐನ ರಾಜ್ಯ ಕಾರ್ಯದರ್ಶಿಯಾದ ಪ್ರೀತಿ ಶೇಖರ್‌ರವರು ವೇದಿಕೆ ಮೇಲಿದ್ದರು. ಡಿವೈಎಫ್ಐನ ಕೇಂದ್ರ ಸಮಿತಿ ಸದಸ್ಯರು ಪಾಲ್ಗೊಂಡಿದ್ದರು. ದೇಶದಾದ್ಯಂತ ವಿವಿಧ ರಾಜ್ಯಗಳನ್ನು ಪ್ರತಿನಿಧಿಸಿ ಆಯ್ಕೆಯಾಗಿದ್ದ 150ಕ್ಕೂ ಮೀರಿ ಯುವತಿಯರು ಸಮಾವೇಶದಲ್ಲಿ ಭಾಗವಹಿಸಿದ್ದರು.

ಆಸ್ತಿ ಹಕ್ಕಿನ ವಂಚನೆ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯಗಳು:

ಪ್ರಸ್ತುತ ಯುವತಿಯರ ಸಾಮಾಜಿಕ ಆರ್ಥಿಕ ಮತ್ತು ಸಂಘಟನಾ ಪರಿಸ್ಥಿತಿ ಕುರಿತು ಡಿವೈಎಫ್ಐನ ಕಾರ್ಯದರ್ಶಿ ಕಾಂ. ಅಭಯ್ ಮುಖರ್ಜಿ ಕರಡು ವರದಿಯನ್ನು ಮಂಡಿಸಿದರು. ಇದರ ಆಧಾರದ ಮೇಲೆ ವಿಭಾಗವಾರು ನಾಲ್ಕು ಸಮಿತಿಗಳನ್ನು ರಚಿಸಿ ಚರ್ಚಿಸಲಾಯಿತಲ್ಲದೆ, ರಾಜ್ಯವಾರು ಕೂಡ ಚರ್ಚಿಸಿ ಪ್ರತಿನಿಧಿಗಳು ಮಾತನಾಡಿದರು.

ಮುಖ್ಯವಾಗಿ ಪ್ರತಿನಿಧಿಗಳ ಚರ್ಚೆಯಲ್ಲಿ ಬಂದ ಅಂಶಗಳೆಂದರೆ, ಭ್ರೂಣಾವಸ್ಥೆಯಲ್ಲಿಯೇ ಹೆಣ್ಣು ಭ್ರೂಣಗಳನ್ನು ಕೊಲ್ಲುತ್ತಿರುವುದು, ಎಳೆಯ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೂ ಅತ್ಯಾಚಾರ, ಕೊಲೆಗಳು, ಯುವತಿಯರ ಮೇಲೆ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯಗಳು. ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳು, ಕೊಲೆಗಳು ಬೆಳಕಿಗೇ ಬರದೆ ಹಾಗೆ ಮುಚ್ಚಿ ಹಾಕಲಾಗುತ್ತಿರುವ ಪರಿಸ್ಥಿತಿ. ಇಂತಹ ಪರಿಸ್ಥಿತಿಗೆ ಮುಖ್ಯ ಕಾರಣ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನೊಂದ ಮಹಿಳೆಗೆ ಅಥವಾ ಆಕೆಯ ಪರ ದನಿ



ಎತ್ತಬೇಕಾದ ಮಹಿಳೆಗೆ ಸ್ವಂತ ತೀರ್ಮಾನ ಕೈಗೊಳ್ಳುವ ಅವಕಾಶ ಇಲ್ಲ. ಆಕೆಯ ದನಿಗೆ ಬಲ ಸಾಲದು. ಆಸ್ತಿ-ಪಾಸ್ತಿಗಳ ಮಾಲಿಕತ್ವ ಪುರುಷರ ಕೈವಶದಲ್ಲಿದ್ದು ಮಹಿಳೆಯರನ್ನು ಎರಡನೆಯ ದರ್ಜೆಯ ಪ್ರಜೆಗಳಂತೆ ನೋಡಿಕೊಳ್ಳಲಾಗುತ್ತಿದೆ. ಮಹಿಳೆಯರ ದುಡಿಮೆಯನ್ನು ಆರ್ಥಿಕ ಪರಿಭಾಷೆಯಲ್ಲಿ ದುಡಿಮೆ ಎಂದು ಪರಿಗಣಿಸಲಾಗುತ್ತಿಲ್ಲ. ಅವರ ಭಾವನೆಗಳಿಗೆ ಯಾವುದೇ ಸ್ಪಂದನೆಗಳಿಲ್ಲ- ಹೆಣ್ಣಿಗೆ ಸ್ವಾತಂತ್ರ್ಯವಿಲ್ಲ. ಆಕೆ ಪೋಷಕರ, ಗಂಡನ ಮತ್ತು ಮಕ್ಕಳ ಹಿಡಿತದಲ್ಲಿಯೆ ಇರಬೇಕು. ಮಾನವ ಸಮಾಜದಲ್ಲಿ ಅವಿಭಾಜ್ಯ ಅಂಗವಾಗಿರುವ ಮಹಿಳೆಯನ್ನು ಇಂತಹ ಹೀನಾಯ ಮಟ್ಟಕ್ಕೆ ತಳ್ಳಿರುವುದು ನಮ್ಮ ಸಮಾಜದಲ್ಲಿರುವ ಲಿಂಗತಾರತಮ್ಯದ ಮೌಲ್ಯಗಳು ಮತ್ತು ಮೂಲಭೂತವಾದದ ಪ್ರತೀಕವಾಗಿದೆ. ಹೀಗಾಗಿ ಮೂಲಭೂತವಾಗಿ ಅವರಿಗೆ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಹಾಗೂ ಎಲ್ಲಾ ರಂಗಗಳಲ್ಲೂ ಸಮಾನ ಅವಕಾಶ ನೀಡಿದಾಗ ಮಾತ್ರ ಅವರ ಮೇಲಿನ ದೌರ್ಜನ್ಯ-ದಬ್ಬಾಳಿಕೆಗಳನ್ನು ತಡೆಗಟ್ಟಲು ಸಾಧ್ಯ.

ಇಂತಹ ಹಲವಾರು ಸೈದ್ಧಾಂತಿಕ ಮತ್ತು ಸಂಘಟನಾ ವಿಷಯಗಳನ್ನು ಮುಕ್ತವಾಗಿ ಪ್ರತಿನಿಧಿಗಳು ಚರ್ಚಿಸಿದರು. ಕೊನೆಯದಾಗಿ ಲಿಂಗ ಸಮಾನತೆ ಯುವ ಚಳುವಳಿಯನ್ನು ಕಟ್ಟಲು ಸಮಾವೇಶ ತೀರ್ಮಾನಿಸಿತು.

ಲಿಂಗ ಸಮಾನ ಯುವಜನ ಸಂಘಟನೆಯಾಗಿ ಡಿವೈಎಫ್ಐ

ಲಿಂಗ ಸಮಾನ ಸಮಾಜ ನಿರ್ಮಾಣಕ್ಕೆ ಅಗತ್ಯವಾದ ಬದಲಾವಣೆಯ ಧೋರಣೆಯನ್ನು ಹೊಂದಿರುವುದು ಡಿವೈಎಫ್ಐನಂತಹ ಪ್ರಜಾಸತ್ತಾತ್ಮಕ ಸಂಘಟನೆಗಳು ಮಾತ್ರ. ಹೀಗಾಗಿ ಮುಂದಿನ ದಿನಗಳಲ್ಲಿ ಡಿವೈಎಫ್ಐನ ಸಂಘಟನಾ ಧೋರಣೆಯಂತೆ ಸದಸ್ಯತ್ವದಲ್ಲಿ ಶೇ. 30 ರಷ್ಟು ಯುವತಿಯರನ್ನು ಸದಸ್ಯರನ್ನಾಗಿಸುವುದು. ಎಲ್ಲಾ ಹಂತದಲ್ಲೂ ಯುವತಿಯರ ಚಳುವಳಿಯನ್ನು ಬಲಪಡಿಸಲು ಪ್ರಜ್ಞಾಪೂರ್ವಕವಾಗಿ ಗಮನ ನೀಡುವುದು. ವಿಶೇಷವಾಗಿ ಸದಸ್ಯತ್ವ ನೋಂದಣಿ ಪ್ರಕ್ರಿಯೆಯಲ್ಲಿ, ಎಲ್ಲಾ ಹಂತದ ಸಮಿತಿಗಳ ರಚನೆಯಲ್ಲಿ ಒಬ್ಬರು ಪದಾಧಿಕಾರಿಯಾಗಿ ಕಡ್ಡಾಯವಾಗಿ ಯುವತಿ ಇರಬೇಕು. ಸಾಧ್ಯವಾದಲ್ಲಿ ಘಟಕ ಸಮಿತಿಗಳ ಅಧ್ಯಕರು ಅಥವಾ ಕಾರ್ಯದರ್ಶಿಯನ್ನಾಗಿ ಯುವತಿಯರನ್ನು ಆಯ್ಕೆ ಮಾಡುವಂತಾಗಬೇಕು. ಯುವತಿಯರ ಚಳುವಳಿಯ ಬಗ್ಗೆ ಚರ್ಚಿಸುವುದು. ತೀರ್ಮಾನ ಜಾರಿಯಾಗಿದೆಯೇ ಎಂದು ವಿಮರ್ಶಿಸುವುದು. ಯುವತಿಯರು ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ಮಧ್ಯ ಪ್ರವೇಶ ಮಾಡುವುದು ಪರಿಣಾಮಕಾರಿಯಾಗಿ ಆಗಬೇಕು. ಸ್ಥಳೀಯವಾಗಿ ಅವರ ಸಮಸ್ಯೆಗಳ ಬಗ್ಗೆ ಗಮನ ಕೇಂದ್ರೀಕರಿಸಿ ಅವರ ಸಮಸ್ಯೆಗಳನ್ನು ಬಗೆಹರಿಸುವಂತಾಗಬೇಕು. ಆ ಮೂಲಕ ಅವರಲ್ಲಿ ವಿಶ್ವಾಸ ಮೂಡಿಸಿ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಹಾಸ್ಟೆಲ್ ದಿನಗೂಲಿ ನೌಕರರ ಸುಲಿಗೆ ನಿಲ್ಲಲಿ

ರಾಜ್ಯದ ಸಮಾಜಕಲ್ಯಾಣ ಇಲಾಖೆಯ ಅಡಿಯಲ್ಲಿ ಇರುವ ಎಸ್.ಸಿ., ಎಸ್.ಟಿ., ಬಿ.ಸಿ.ಎಂ. ಹಾಸ್ಟೆಲ್‌ಗಳಲ್ಲಿ ಮತ್ತು ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಅಡುಗೆ, ಸ್ವಚ್ಛತೆ, ಕಾವಲು ಮುಂತಾದ ಕೆಲಸಗಳನ್ನು ಮಾಡುತ್ತಿರುವ ಗುತ್ತಿಗೆ, ದಿನಗೂಲಿ ನೌಕರರು ತೀವ್ರ ಶೋಷಣೆಗೆ ಒಳಗಾಗಿದ್ದಾರೆ. ಕಾಯಂ ಸ್ವರೂಪದ ಕೆಲಸಕ್ಕಾಗಿ ಅವರನ್ನು ನಿಯೋಜಿಸಲಾಗಿದ್ದರೂ ಅವರ ಸೇವೆಯನ್ನು ಕಾಯಂಗೊಳಿಸಿ, ಅವರಿಗೆ ಕಾನೂನು ಪ್ರಕಾರ ಕೊಡಬೇಕಾದ ವೇತನವನ್ನು ಮತ್ತು ಇತರ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ. ಇದೇ ಕೆಲಸಗಳನ್ನು ಮಾಡುತ್ತಿರುವ ಕಾಯಂ ನೌಕರರಿಗೆ ಕಾನೂನು ಬದ್ಧ ಕನಿಷ್ಠ ಕೂಲಿ ಸಿಗುತ್ತದೆ ಮಾತ್ರವಲ್ಲದೆ ಕಾರ್ಮಿಕ ಕಾನೂನುಗಳ ಸೌಲಭ್ಯ ದೊರೆಯುತ್ತದೆ. ಆದರೆ ಗುತ್ತಿಗೆ/ದಿನಗೂಲಿ ಎಂದು ಕರೆಯಲಾಗುತ್ತಿರುವ ನೌಕರರಿಗೆ ಕಾನೂನುಬದ್ಧ ಯಾವ ಸೌಲಭ್ಯಗಳನ್ನು ನೀಡದೆ ತಾರತಮ್ಯವೆಸಗಲಾಗುತ್ತಿದೆ.

ಕಳೆದ ಹತ್ತು ಹದಿನೈದು ವರ್ಷಗಳಿಂದ ಕೆಲಸಮಾಡುತ್ತಿರುವ ಇವರನ್ನು ಗುತ್ತಿಗೆದಾರರ ಮೂಲಕ, ಎನ್.ಜಿ.ಓ.ಗಳ ಮೂಲಕ ಗುತ್ತಿಗೆ ಆಧಾರದಲ್ಲಿ ದುಡಿಸಲಾಗುತ್ತದೆ. ಗುತ್ತಿಗೆದಾರರು ತಿಂಗಳುಗಟ್ಟಲೆ ನೌಕರರಿಗೆ ಸಂಬಳವನ್ನೇ ಕೊಟ್ಟಿರುವುದಿಲ್ಲ. ಪ್ರಶ್ನೆ ಮಾಡಿದರೆ ಕೆಲಸದಿಂದ ಕಿತ್ತುಹಾಕುವ ಬೆದರಿಕೆ ಹಾಕುತ್ತಾರೆ. ಈ ಗುತ್ತಿಗೆದಾರರು, ಎನ್.ಜಿ.ಓ.ಗಳು ಇಲಾಖೆಯಿಂದಲೂ ಕಮಿಶನ್ ಪಡೆಯುತ್ತಾರೆ, ನೌಕರರ ವೇತನದಿಂದಲೂ ಕಡಿತ ಮಾಡಿ ಲಾಭ ಮಾಡಿಕೊಳ್ಳುತ್ತಾರೆ. ನೌಕರರ ವೇತನದಿಂದ ಕಡಿತ ಮಾಡಲಾದ ಇ.ಎಸ್.ಐ. ಮತ್ತು ಇ.ಪಿ.ಎಫ್. ಹಣವನ್ನು ಸಂಬಂಧಪಟ್ಟ ಇಲಾಖೆಗೆ ಸರಿಯಾಗಿ ಜಮಾ ಮಾಡದೆ ವಂಚನೆ ಮಾಡುತ್ತಿರುತ್ತಾರೆ. ನೌಕರರಿಗೆ ಇ.ಎಸ್.ಐ. ಮತ್ತು ಇ.ಪಿ.ಎಫ್. ದಾಖಲೆಗಳನ್ನು ಒದಗಿಸುವುದಿಲ್ಲ. ಇದನ್ನು ಕಂಡೂ ಕಾಣದವರಂತೆ ವರ್ತಿಸುತ್ತಾರೆ ಇಲಾಖೆಯ ಅಧಿಕಾರಿಗಳು. ನೌಕರರ ಮಾಸಿಕ ವೇತನದ ಚೆಕ್ಕುಗಳಿಗೆ ಸಹಿ ಮಾಡಬೇಕಾದರೂ ಅಧಿಕಾರಿಗಳು ಈ ಬಡ ನೌಕರರಿಂದ ಲಂಚ ಅಪೇಕ್ಷಿಸುತ್ತಾರೆ.

2009 ರ ಸರ್ಕಾರದ ಗಜೆಟ್ ನೋಟಿಫಿಕೇಷನ್ ಪ್ರಕಾರ ಮುಖ್ಯ ಅಡುಗೆಯವನಿಗೆ ರೂ.5,000 ರೂ ಸಹಾಯಕ ಅಡುಗೆಯವನಿಗೆ ರೂ.4,900, ಸ್ವಚ್ಛತೆ ಹಾಗೂ ಕಾವಲು ಕೆಲಸ ಮಾಡುವವರಿಗೆ ರೂ.4,800 ಕನಿಷ್ಠ ವೇತನ ಕೊಡಬೇಕಾಗಿದೆ. ಆದರೆ ಗುತ್ತಿಗೆದಾರರು ಅರ್ಧದಷ್ಟನ್ನು ಕಡಿತ ಮಾಡಿ ಉಳಿದ ಅರ್ಧಭಾಗವನ್ನು ಮಾತ್ರ ಕೊಡುತ್ತಿರುತ್ತಾರೆ. ಇದೇ ಕೆಲಸ ಮಾಡುವ ಕಾಯಂ ಕೆಲಸಗಾರರಿಗೆ ಈ ವೇತನ ಸಿಗುತ್ತದೆ. ಆದರೆ ಅದೇ ಕೆಲಸ ಮಾಡುತ್ತಿರುವ ಗುತ್ತಿಗೆ/ದಿನಗೂಲಿ ನೌಕರರಿಗೆ ಅದು ಸಿಗುವುದಿಲ್ಲ. 'ಸಮಾನ ಕೆಲಸಕ್ಕೆ ಸಮಾನ ವೇತನ' ಎಂಬ ಕಾನೂನು ನಿರ್ದೇಶನವನ್ನು ಬಹಿರಂಗವಾಗಿ ಉಲ್ಲಂಘಿಸಲಾಗುತ್ತದೆ.


ಹಾಸ್ಟೆಲುಗಳಲ್ಲಿ ಕೆಲಸ ಮಾಡುತ್ತಿರುವ ಈ ದಿನಗೂಲಿ ನೌಕರರು ದಲಿತ ಸಮುದಾಯಗಳಿಗೆ ಸೇರಿದವರಾಗಿರುತ್ತಾರೆ. ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮಹಿಳಾ ನೌಕರರಿಗೆ [illegible]ಂಗೆ ರಜೆ ಮತ್ತು ಹೆರಿಗೆ ಭತ್ಯೆಯನ್ನು ಸಹ ಕೊಡುವುದಿಲ್ಲ. 'ಬೇಕಾದ್ರೆ ಮಾಡ್ರಿ, ಇಲ್ದಿದ್ರೆ ಬಿಟ್ಟು ಹೋಗ್ರಿ' ಎಂದು ಅಧಿಕಾರಿಗಳು ಗದರಿಸುತ್ತಾರೆ. ಇವತ್ತಲ್ಲ ನಾಳೆ, ಸರ್ಕಾರ ತಮ್ಮನ್ನು ಖಾಯಂ ಮಾಡಬಹುದು ಎಂಬ ಆಸೆ ಇಟ್ಟುಕೊಂಡು ಇವರು ದುಡಿಯುತ್ತಿದ್ದಾರೆ.

ಬಿಜೆಪಿ ಸರ್ಕಾರ ವಿಧಾನ ಸಭಾ ಚುನಾವಣೆಗಳು ಹತ್ತಿರ ಬರುತ್ತಿರುವುದನ್ನು ಗಮನಿಸಿ ವಿವಿಧ ಇಲಾಖೆಗಳಲ್ಲಿ ದುಡಿಯುತ್ತಿರುವ 20 ಸಾವಿರಕ್ಕೂ ಹೆಚ್ಚು ದಿನಗೂಲಿ ನೌಕರರನ್ನು ಕಾಯಂಗೊಳಿಸಲು ತೀರ್ಮಾನಿಸಿತು. ಚುನಾವಣೆಗಳ ಮೇಲೆ ಕಣ್ಣಿಟ್ಟು ಬಿಜೆಪಿ ಸರ್ಕಾರ ಈ ಕ್ರಮಕ್ಕೆ ಮುಂದಾಗಿದ್ದರೂ ಅದೊಂದು ಸ್ವಾಗತಾರ್ಹ ಕ್ರಮವೇ ಆಗಿತ್ತು. ಆದರೆ ಸರ್ಕಾರಿ ಹಾಸ್ಟೆಲುಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಅದೆಷ್ಟೋ ವರ್ಷಗಳಿಂದ ಕೆಲಸ ಮಾಡುತ್ತಿರುವ ಬಡ ದಲಿತ ನೌಕರರು ಬಿಜೆಪಿ ಸರ್ಕಾರದ ಗಮನಕ್ಕೆ ಬರಲೇ ಇಲ್ಲ. ಹಾಸ್ಟೆಲ್ ದಿನಗೂಲಿ ನೌಕರರು ಅನೇಕ ಬಾರಿ ಹಿಂದಿನ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದರೂ ಪ್ರಯೋಜನವಾಗಿರಲಿಲ್ಲ.

ರಾಜ್ಯದಲ್ಲಿ ಈಗ ಬಿಜೆಪಿ ಸರ್ಕಾರ ಹೋಗಿ ಕಾಂಗ್ರೆಸ್ ಸರ್ಕಾರ ಬಂದಿದೆ. ಅಹಿಂದ ಹಿನ್ನೆಲೆಯ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾರೆ. ಅತ್ಯಂತ ನಿರ್ಲಕ್ಷಕ್ಕೆ ಮತ್ತು ಗುತ್ತಿಗೆದಾರರ ಸುಲಿಗೆಗೆ ಒಳಗಾಗಿರುವ ಹಾಸ್ಟೆಲ್ ದಿನಗೂಲಿ ನೌಕರರ ಕೂಗು ರಾಜ್ಯದ ಹೊಸ ಸರ್ಕಾರದ ಕಿವಿಗಳಿಗೆ ಮುಟ್ಟಬಹುದಾ? ಕಾದು ನೋಡಬೇಕು.

ತಮ್ಮ ಸೇವೆಯನ್ನು ಕಾಯಂಗೊಳಿಸಿ ತಮಗೆ ತಿಂಗಳಿಗೆ 10 ಸಾವಿರ ರೂಪಾಯಿ ಕನಿಷ್ಠ ವೇತನ ನೀಡಬೇಕೆಂಬುದು ಈ ಅಸಹಾಯಕ ನೌಕರರ ಮುಖ್ಯ ಬೇಡಿಕೆಯಾಗಿದೆ. ಲಾಭಕೋರ ಗುತ್ತಿಗೆದಾರರ ಹಿಡಿತದಿಂದ ತಮ್ಮನ್ನು ಮುಕ್ತರನ್ನಾಗಿ ಮಾಡಿ ಸರ್ಕಾರ ನಿಗದಿಪಡಿಸುವ ಕನಿಷ್ಠ ವೇತನವನ್ನು ಪ್ರತಿ ತಿಂಗಳು ತಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕೆಂಬುದು ಅವರ ಇನ್ನೊಂದು ಮುಖ್ಯ ಬೇಡಿಕೆ. ಇದೇ ಜೂನ್ 3 ರಂದು ರಾಜಧಾನಿ ಬೆಂಗಳೂರಿಗೆ ಬಂದು, ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಿರುವ ಹಾಸ್ಟೆಲ್ ದಿನಗೂಲಿ ನೌಕರರ ಹೋರಾಟ ಯಶಸ್ವಿಯಾಗಲೆಂದು ಹಾರೈಸೋಣ.

ನೇರ ನಗದು! ಅಲ್ಲಲ್ಲ, ನೇರ ನಾಶದ ಯೋಜನೆ!



ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ ಕಾಂಗ್ರೆಸ್ ನ 'ಪೋಸ್ಟರ್ ಬಾಯ್' ಆಗಲಿದ್ದಾರೆಯೇ? ಅವರನ್ನು ಗುಜರಾತ್ ನ ಮೋದಿಗೆ ಪ್ರತಿಯಾಗಿ ಬಳಸಲು ಯೋಚಿಸಲಾಗುತ್ತಿದೆಯೇ? ಎಂಬಿತ್ಯಾದಿ ಸುದ್ದಿಗಳು ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಅದರ ಸತ್ಯಾಸತ್ಯೆಗಳು, ಸಾಧ್ಯತೆಗಳು ಏನೇ ಇರಲಿ, ಕಾಂಗ್ರೆಸ್ ಮುಂಬರುವ ಲೋಕಸಭಾ ಚುನಾವಣೆಗೆ ತಾಲೀಮನ್ನು ಆರಂಭಿಸಿದೆ. ಆದ್ದರಿಂದಲೇ ಬಿಜೆಪಿಯ ದುರಾಡಳಿತದಿಂದ ರೋಸಿ ಹೋದ ಕರ್ನಾಟಕದ ಜನತೆ ಸರಿಯಾದ ಪರ್ಯಾಯ ಕಾಣದೇ ಅನಿವಾರ್ಯವಾಗಿ ಕಾಂಗ್ರೆಸ್ ನ್ನು ಅಧಿಕಾರಕ್ಕೆ ತಂದರು. ಆದರೆ ದೊರೆತ ಅಧಿಕಾರ ತಮ್ಮ ಅಮೋಘ ಸಾಧನೆಗಳಿಗೆ ಜನತೆ ನೀಡಿದ ಮನ್ನಣೆ ಎಂದೇ ಅವರು ವ್ಯಾಖ್ಯಾನಿಸಿ ಕೊಳ್ಳುತ್ತಿದ್ದಾರೆ. ಅದು ಅವರ ಜಾಯಮಾನ. ಅದೇ ಹೊತ್ತಿನಲ್ಲಿ ಒಳ್ಳೇ ಆಡಳಿತವನ್ನು ಕೊಡುತ್ತಿದ್ದೇವೆ ಎಂಬ ಪೋಜನ್ನು ಕೊಡಲೂ ಯತ್ನಿಸುತ್ತಿದ್ದಾರೆ. ಇವು ಕೊಂಚ ಭ್ರಮೆಯನ್ನು ಮೂಡಿಸಲೂಬಹುದು.


ಆದರೆ ವಾಸ್ತವದಲ್ಲಿ ಕಾಂಗ್ರೆಸ್ ತನ್ನ ವಿನಾಶಕಾರಿ, ಜನದ್ರೋಹಿ ನೀತಿಗಳನ್ನು ಕೈ ಬಿಟ್ಟಿಲ್ಲ. ಜನಸಾಮಾ ನ್ಯರ ಬದುಕಿಗೆ ಕೊಂಚವಾದರೂ ಉಸಿರು ನೀಡುತ್ತಿದ್ದ ರೇಷನ್, ಅಡುಗೆ ಅನಿಲ ಗ್ಯಾಸ್, ಸೀಮೆ ಎಣ್ಣೆ ಮತ್ತು ಹಲವಾರು ಸಾಮಾಜಿಕ ಕಲ್ಯಾಣದ ಕಾರ್ಯಕ್ರಮಗಳಿಗೆ ನೀಡುತ್ತಿದ್ದ ಸಹಾಯಧನ ಅಥವಾ ಸಬ್ಸಿಡಿಯನ್ನು ಕಾರ್ಯತಃ ಹಂತ ಹಂತವಾಗಿ ಕಡಿತ ಮಾಡುತ್ತಾ ಕೊನೆಗೆ ರದ್ದುಪಡಿಸುವ ಕ್ರಮಕ್ಕೆ ಮುಂದಾಗುತ್ತಿದೆ. ಹಲವು ರಾಜ್ಯಗಳ ಚುನಾವಣೆಗಳು ಕಾರಣಕ್ಕೆ ಮುಂದೂಡಿದ್ದ ನೇರ ನಗದು ವರ್ಗಾವಣೆ ಯೋಜನೆಯನ್ನು ಇದೇ ಜೂನ್ 1ರಿಂದ ಜಾರಿಗೆ ತರಲು ಹೊರಟಿದೆ.ಅದರಂತೆ ಮೊದಲ ಹಂತದಲ್ಲಿ ದೇಶದಲ್ಲಿ 18 ಜಿಲ್ಲೆಗಳಲ್ಲಿ ಚಾಲನೆ ದೊರೆಯಲಿದೆ.

ರಾಜ್ಯದಲ್ಲಿ ತುಮಕೂರು ಜಿಲ್ಲೆಯಲ್ಲಿ ಕೇಂದ್ರದ ಪಟ್ರೋಲಿಯಂ ಸಚಿವ ವೀರಪ್ಪ ಮೊಯ್ಲಿ ಉಧ್ಘಾಟಿಸಲಿದ್ದಾರೆ.

ಇದೀಗ ಮಾರುಕಟ್ಟೆಯಲ್ಲಿ ಏನೇ ವ್ಯತ್ಯಾಸಗಳಿದ್ದರೂ ಸಬ್ಸಿಡಿ ಧರದಲ್ಲಿ ಅಡುಗೆ ಅನಿಲ ಗ್ಯಾಸ್ ಸಿಲಿಂಡರನ್ನು ಸರಕಾರ ನೀಡುತ್ತಿತ್ತು. ಇನ್ನು ಮುಂದೆ ಗ್ರಾಹಕರು ಪೂರೈಕೆದಾರರಿಗೆ ಪೂರ್ಣ ಮೊತ್ತವನ್ನು ಮೊದಲು (ಹಾಲಿಯಾಗಿ ರೂ.821) ನೀಡಬೇಕು . ಕೇಂದ್ರ ಸರಕಾರ ಅವರ ಬ್ಯಾಂಕ್ ಖಾತೆಗೆ ರೂ.435 ಗಳನ್ನು ನೇರವಾಗಿ ಜಮಾ ಮಾಡಲಿದೆ ಎಂಬುದು. ಅಂದರೆ ಗ್ಯಾಸ್ ಸಿಲಿಂಡರ್ ಬುಕ್, ಪೂರೈಕೆ ಆದ ಕೂಡಲೇ ಗ್ರಾಹಕರ ಜೇಬಿಗೆ ಹಣ ಜಮಾ!.ವಾಹ್ ಎಷ್ಟು ಸುಲಭ, ಹೈಟೆಕ್ ಆಡಳಿತದ ಸುಖ ಅಲ್ಲವೇ?

ಕೆಲವು ಟೆಕ್ಕಿಗಳು ಹಾಗೆ ಭಾವಿಸಬಹುದು. ಆದರೆ ಭಾರತದ ಇಂದಿನ ಸ್ಥಿತಿಯಲ್ಲಿ ಇದು ನಿಜಕ್ಕೂ ಹೇಗಿರುತ್ತದೆ?

ಪುಟ 11 ಕ್ಕೆ



'ಆರ್‌ಟಿಇ ಕಾಯ್ದೆ ಜಾರಿಗೊಳಿಸಲು ಸರ್ಕಾರ ರಾಜಕೀಯ ಇಚ್ಛಾಶಕ್ತಿ ತೋರಲಿ' ಎಸ್‌ಎಫ್‌ಐ ಆಗ್ರಹ

ಜೂನ್ 6ರಂದು ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ



'ರಾಜ್ಯದಲ್ಲಿ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ-2009' ಅನ್ನು ಸಮರ್ಪಕವಾಗಿ ಜಾರಿಗೊಳಿಸಲು ರಾಜ್ಯ ಸರ್ಕಾರ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕೆಂದು ಶಿಕ್ಷಣ ತಜ್ಞರು, ಸಾಹಿತಿಗಳು, ಪ್ರಗತಿಪರರು ಸರ್ಕಾರವನ್ನು ಒಕ್ಕೊರಲಿನಿಂದ ಒತ್ತಾಯಿಸಿದರು. ನಗರದ ಶಾಸಕರ ಭವನದಲ್ಲಿ ಮೇ 28 ರಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಆರ್‌ಟಿಇ ಕಾಯ್ದೆಯ ಸಮರ್ಪಕ ಜಾರಿಯ ಕುರಿತು ಚರ್ಚಿಸಲು ಆಯೋಜಿಸಿದ್ದ ಸಮಾಲೋಚನಾ ಸಭೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು.

ಸಭೆಯಲ್ಲಿ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್‌ರವರು ಮಾತನಾಡುತ್ತಾ ಸಂವಿಧಾನ ಬದ್ಧ ಶೈಕ್ಷಣಿಕ ಹಕ್ಕಿಗಾಗಿ ದೇಶವ್ಯಾಪಿ ನಡೆದ ಪ್ರಬಲ ಹೋರಾಟಗಳ ಪ್ರತಿಫಲವಾಗಿ 'ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ-2009' ರೂಪುಗೊಂಡಿದೆ. 14ನೇ ವಯಸ್ಸಿನವರೆಯಿಯಿಯಿಯಿಗೆ ಎಲ್ಲಾ ಮಕ್ಕಳು ನೆರೆಹೊರೆಯ ಶಾಲೆಯಲ್ಲಿಯೇ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಬೇಕೆನ್ನುವುದು ಕಾಯ್ದೆಯ ಉದ್ದೇಶವಾಗಿದ್ದು ಈ ಕಾಯ್ದೆಯ ಅನುಷ್ಠಾನಕ್ಕೆ ಅಗತ್ಯವಾದ ಹಣಕಾಸನ್ನು ಒದಗಿಸಲು ಕೇಂದ್ರ ಮತ್ತ ರಾಜ್ಯ ಸರ್ಕಾರಗಳು ಜವಾಬ್ದಾರಿಯನ್ನು ಹೊಂದಿವೆ. ಅವಕಾಶ ವಂಚಿತ ವರ್ಗ(ಎಸ್.ಸಿ., ಎಸ್.ಟಿ. ಹಾಗೂ ಒಬಿಸಿ)ಗಳಿಗೆ ಸೇರಿದ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪಡೆಯುವಲ್ಲಿ, ಪೂರ್ಣಗೊಳಿಸುವಲ್ಲಿ ಯಾವುದೇ ರೀತಿಯ ತಾರತಮ್ಯಕ್ಕೆ ಒಳಗಾಗದಂತೆ ಖಾತ್ರಿಪಡಿಸಲು ಸರ್ಕಾರ ಬದ್ಧವಾಗಿರಬೇಕೆಂದರು.


ರಾಜ್ಯದಲ್ಲಿ ಶಾಲಾ ಪೂರ್ವ ಶಿಕ್ಷಣಕ್ಕಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಅವಲಂಭಿಸಬೇಕಿದೆ. ಅಂಗನವಾಡಿ ಕೇಂದ್ರಗಳು ನಿರ್ಲಕ್ಷ್ಯಕ್ಕೆ ಒಳಪಟ್ಟಿವೆ. ಎಲ್‌ಕೆಜಿ, ಯುಕೆಜಿ ಇತ್ಯಾದಿ ಹೆಸರಲ್ಲಿ ಶಿಕ್ಷಣದ ವ್ಯಾಪಾರ ನಡೆಯುತ್ತಿದೆ. ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ಶೇ.25ರಷ್ಟು ಸೀಟುಗಳನ್ನು ಮೀಸಲಾತಿ ಕೋಟಾದಡಿ ದಾಖಲು ಮಾಡಿಕೊಳ್ಳಬೇಕಿರುವ ಖಾಸಗಿ ಶಾಲೆಗಳು ಬಡ, ದಲಿತ, ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸುತ್ತಿವೆ. ಅಂತಹ ಶಿಕ್ಷಣ ಸಂಸ್ಥೆಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ಜರುಗಿಸಬೇಕೆಂದು 'ಸೆಂಟರ್ ಫಾರ್ ಬಜೆಟರಿ ಪಾಲಿಸಿ ಅಂಡ್ ಸ್ಟಡೀಸ್'ನ ಜೋತ್ಸ್ನಾ ಝಾ ರವರು ಅಭಿಪ್ರಾಯಪಟ್ಟರು.

ಆರ್‌ಟಿಇ ಕಾಯ್ದೆ ಜಾರಿಗೊಳಿಸುವಲ್ಲಿ ಶಿಕ್ಷಕರ ಪಾತ್ರವೂ ಮಹತ್ವದ್ದಾಗಿದ್ದು ಅವರಿಗೆ ಸೂಕ್ತ ತರಬೇತಿ ನೀಡಬೇಕೆಂದು ಶಿಕ್ಷಕರ ಸಂಘಟನೆಯ ಮಂಜುನಾಥ್ ಹೇಳಿದರು.

ಇಂದಿಗೂ ಶಾಲೆಗಳಿಗೆ ಕುಡಿಯುವ ನೀರು, ಶೌಚಾಲಯ, ಗ್ರಂಥಾಲಯ, ಆಟದ ಮೈದಾನ ಒದಗಿಸಿಲ್ಲ. ಶಿಕ್ಷಕರಿಗೊಂದು ಕೊಠಡಿ, ಕೊಠಡಿಗೊಬ್ಬ ಶಿಕ್ಷಕ ನಿಯಮ ಜಾರಿಯಾಗಿಲ್ಲ. ಸುಮಾರು 38 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಖಾಯಂ ಶಿಕ್ಷಕರ ಬದಲಾಗಿ ಅತಿಥಿ, ಹೊರಗುತ್ತಿಗೆ ಮೂಲಕ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುತ್ತಿದ್ದು ಕಾಯ್ದೆಯನ್ನು ಜಾರಿಗೊಳಿಸಲು ಸರ್ಕಾರಿ ಶಾಲೆಗಳಿಗೆ ಸಮರ್ಪಕ ಮೂಲ ಸೌಕರ್ಯಗಳನ್ನು ಒದಗಿಸಬೇಕೆಂದು ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ ಒತ್ತಾಯಿಸಿದರು.

ರಾಜ್ಯದಲ್ಲಿ ಈ ಕಾಯ್ದೆಯನ್ನು ಜಾರಿಗೊಳಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದು ಜನರ ನಿರೀಕ್ಷೆಗಳಿಗೆ ತಕ್ಕಂತೆ ಇನ್ನಷ್ಟು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಬೇರೆ ಎಲ್ಲಾ ಇಲಾಖೆಗಳ ಸಹಕಾರ ಅಗತ್ಯವಾಗಿದೆ. ಅಲ್ಲದೇ ಯಾವ ಖಾಸಗಿ ಶಿಕ್ಷಣ ಸಂಸ್ಥೆಗಳು ಈ ಕಾಯ್ದೆಯನ್ನು ಜಾರಿಗೊಳಿಸುವಲ್ಲಿ ನಿರಾಕರಿಸಿದರೆ ತಕ್ಷಣ ದೂರು ನೀಡಿದಲ್ಲಿ ಅಂತಹ ಸಂಸ್ಥೆ ವಿರುದ್ಧ ಕ್ಷಮ ಕೈಗೊಳ್ಳಲಾಗುತ್ತದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಆರ್‌ಟಿಇ ಕೋಶಾಧಿಕಾರಿ ಫಾಲಾಕ್ಷಯ್ಯ ಹೇಳಿದರು.

ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿ ರಚಿಸಿ, ಭೌತಿಕ ಸೌಲಭ್ಯಗಳ ಪೂರೈಕೆ ಮತ್ತು ಶೈಕ್ಷಣಿಕ ಗುಣಮಟ್ಟ ಸುಧಾ ರಣೆಗೆ ಯೋಜನೆಗಳನ್ನು ತಯಾರಿಸುವ ಕಾರ್ಯ ನಿರೀಕ್ಷೆ ಮಟ್ಟದಲ್ಲಿ ನಡೆಯುತ್ತಿಲ್ಲ. ಅದನ್ನು ಇನ್ನಷ್ಟು ತೀವ್ರಗತಿಯಲ್ಲಿ ಮಾಡುವ ಮೂಲಕ ಕಾಯ್ದೆಯನ್ನು ಜಾರಿಗೊಳಿಸಬೇಕಿದೆ ಎಂದು ಎಸ್‌ಡಿಎಂಸಿ ಸದಸ್ಯರ ಒಕ್ಕೂಟದ ಗೋವಿಂದರಾಜ್ ಅಭಿಪ್ರಾಯ ವ್ಯಕ್ತಪಡಿಸಿದರು.



ರಾಜ್ಯದಲ್ಲಿ ಶಿಕ್ಷಣ ಇಲಾಖೆಯಲ್ಲಿ ಐಎಎಸ್ ಅಧಿಕಾರಿಗಳನ್ನು ನೇಮಿಸುವಾಗ ಶಿಕ್ಷಣ ಕ್ಷೇತ್ರದ ಆಡಳಿತದ ಅನುಭವ ಹಾಗೂ ತಿಳುವಳಿಕೆ ಇರುವವರನ್ನು ನೇಮಿಸುವುದು ಒಳಿತೆಂದು ಶಿಕ್ಷಣ ಚಿಂತಕರಾದ ಪ್ರದೀಪ್ ರಾಮಾವತ್ ಅಭಿಪ್ರಾಯ ಮಂಡಿಸಿದರು.

ಅಲ್ಲದೆ ಬಿಜಿವಿಎಸ್‌ನ ಗುರುಶಾಂತಪ್ಪ, ಮಗು ಮತ್ತು ರಾಷ್ಟ್ರೀಯ ಕಾನೂನು ಶಾಲೆಯ ಕುಮಾರ್ ಶೃಂಗೇರಿ, ಸರ್ಕಾರಿ ನೌಕರರ ಒಕ್ಕೂಟದ ಮಹದೇವಯ್ಯ ಮಠಪತಿ, ಕರ್ನಾಟಕ ಜನಾಂದೋಲನ ಸಂಘಟನೆಯ ಮರಿಸ್ವಾಮಿ, ಬಾಲಕೃಷ್ಣ, ಕ.ರಾ.ಬಿಸಿಯೂಟ ನೌಕರರ ಸಂಘಟನೆ ಮುಖಂಡರಾದ ಮಾಲಿನಿ ಮೇಸ್ತಾ, ಜೆಎಂಎಸ್‌ನ ಶಾರದ ಮುಂತಾದವರು ಮಾತನಾಡಿದರು. ಸಾಹಿತಿಗಳಾದ ಪ್ರೊ.ಎನ್.ವಿ.ನರಸಿಂಹಯ್ಯ, ವಿದ್ಯಾರ್ಥಿ ಜನತಾದಳ ರಾಜ್ಯಾಧ್ಯಕ್ಷರಾದ ದಾ.ಕೃ.ದೇವರಾಜ್, ಡಿ.ಎಸ್.ಎಫ್‌ನ ರಾಜಗೋಪಾಲ್, ಅಂಗನವಾಡಿ ನೌಕರರ ಸಂಘಟನೆಯ ಸುನಂದ, ಎಸ್‌ಎಫ್‌ಐನ ಮುನಿರಾಜು, ಚಿಕ್ಕರಾಜು, ವೆಂಕಟೇಶ್, ಹನುಮಂತ ಭಾಗವಹಿಸಿದ್ದರು.

ಸಭೆಯ ಅಧ್ಯಕ್ಷತೆಯನ್ನು ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಅನಂತನಾಯ್ಕ್ ವಹಿಸಿದ್ದರು. ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಗುರುರಾಜ್ ಸ್ವಾಗತಿಸಿದರು.

ನಿರ್ಣಯಗಳು:

ಆರ್‌ಟಿಇ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸುವಂತೆ ಒತ್ತಾಯಿಸಿ ಜೂನ್ 6 ರಂದು ರಾಜ್ಯಾದ್ಯಂತ ಪ್ರತಿಭಟನೆ ನಡೆಸುವುದು, ಸಮಾಲೋಚನಾ ಸಭೆಯಲ್ಲಿ ಬಂದಿರುವ ಅಭಿಪ್ರಾಯಗಳನ್ನು ಮುಖ್ಯಮಂತ್ರಿಗಳು ಹಾಗೂ ಶಿಕ್ಷಣ ಸಚಿವರಿಗೆ ಸಲ್ಲಿಸುವುದು., ಆರ್‌ಟಿಇ ಜಾರಿ ಕುರಿತು ಇಲ್ಲಿಯವರೆಗೆ ಸರಕಾರಿ ಆದೇಶಗಳನ್ನು ಉಲ್ಲಂಘಿಸಿರುವ ಸಂಸ್ಥೆಗಳು/ವ್ಯಕ್ತಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುವುದು ಸೇರಿದಂತೆ ಹಲವು ನಿರ್ಣಯಗಳನ್ನು ಸಮಾವೇಶ ಕೈಗೊಂಡಿತು.

ಜನಪ್ರಾತಿನಿಧ್ಯದ ಶಾಸನಸಭೆ ಕೋಟ್ಯಾಧೀಶರ ಕೋಟೆಯಾಗುತ್ತಿದೆಯೇ?

ಶಾಸನ ಸಭೆಗಳಿಗೆ ಆಯ್ಕೆಯಾಗುತ್ತಿರುವ ಶಾಸಕರ ಹಿನ್ನೆಲೆಗಳನ್ನು ನೋಡಿದಾ;, ಪ್ರಜಾಪ್ರಭುತ್ವ ಪ್ರೇಮಿಗಳಿಗೆ ನಿಜಕ್ಕೂ ಆತಂಕವಾಗುತ್ತದೆ. ಕ್ರಿಮಿನಲ್ ಅಪರಾಧಗಳ ಹಿನ್ನೆಲೆಯುಳ್ಳವರು, ಕೋಟಿ ಕೋಟಿಗಳ ಸಂಖ್ಯೆಯಲ್ಲಿ ಆಸ್ತಿಪಾಸ್ತಿ ಹೆಚ್ಚಿಸಿಕೊಂಡ ವರು ಯಾರು ಯಾರು. ಯಾವ ಪಕ್ಷ ಇದರಲ್ಲಿ ಮುಂದೆ? ಓದಿ.

ಎಸ್. ವೈ. ಗುರುಶಾಂತ್


ಸಂಸದೀಯ ಪ್ರಜಾಪ್ರಭುತ್ವದಲ್ಲಿ ವಿಧಾನಸಭೆ ಹಾಗೂ ಸಂಸತ್‌ಗಳು ಜನತೆಯ ಪ್ರಾತಿನಿಧ್ಯತೆಯ ಒಂದು ಉನ್ನತ ವೇದಿಕೆಯಾಗಿವೆ. 'ನಮಗೇ ನಾವು ಕೊಟ್ಟುಕೊಂಡಿರುವ' ಭಾರತದ ಸಂವಿಧಾನದಂತೆ ಶಾಸನ ಮಾಡುವ ಪರಮಾಧಿಕಾರ ಈ ಪ್ರಾತಿನಿಧಿಕ ಸಂಸ್ಥೆಗಳಿಗೆ ಇರುವುದು. ಆದ್ದರಿಂದಲೇ ವಿಧಾನಸಭೆಗೆ ಜನರಿಂದ ಚುನಾಯಿತರಾದ ಪ್ರತಿನಿಧಿಗಳನ್ನು 'ಶಾಸಕರು' ಎಂದು ಕರೆಯುವುದು. ಸಂವಿಧಾನದ ಚೌಕಟ್ಟಿನಲ್ಲಿ ನಮ್ಮ ಸಾರ್ವಭೌಮ ಜನತೆಗೆ, ಸಮಾಜಕ್ಕೆ ಅಗತ್ಯವಾದ ಹೊಸ ಶಾಸನಗಳನ್ನು ಮಾಡುವ, ಅಗತ್ಯ ತಿದ್ದುಪಡಿಗೊಳಿಸುವ ಗುರುತರವಾದ ಜವಾಬ್ದಾರಿ, ಅದರ ಹಕ್ಕು ಇರುವುದು ಅವರಿಗೇ. ಹೀಗಾಗಿಯೇ ಶಾಸನಸಭೆಗಳಲ್ಲಿ ಅಂತಹ ಪ್ರತಿ ಸಂದರ್ಭವೂ ಪ್ರತಿಯೊಬ್ಬ ಶಾಸಕನಿಂದ ಎಚ್ಚರ, ಆಳವಾದ ತಿಳುವಳಿಕೆ, ಜನತೆಗಾಗಿ ಸಮರ್ಪಿಸಿಕೊಳ್ಳುವ ಮನೋಭಾವ – ಬದ್ಧತೆಯಂತಹ ಮೂಲ ಅಗತ್ಯಗಳನ್ನು ಬೇಡುತ್ತದೆ. ಜನತೆಯ ವಿಶಾಲ ಹಿತಾಸಕ್ತಿಗಳನ್ನು ಲಕ್ಷ್ಯದಲ್ಲಿರಿಸಿ ಆ ವೇದಿಕೆಯಲ್ಲಿ ಮುಕ್ತ ಚರ್ಚೆಗಳನ್ನು ನಡೆಸಿ ಮೌಲ್ಯಯುತ ಅಭಿಪ್ರಾಯಗಳನ್ನು ಪಡೆದು ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿನ ನಿರ್ಧಾರಗಳೇ ಜಾರಿಯ ನಿರ್ದೇಶನಗಾಗುತ್ತವೆ. ಜನತೆಯ ಇಂತಹ ಜೀವನ್ಮರಣದ ಪ್ರಶ್ನೆಯನ್ನು ನಿಭಾಯಿಸುವಲ್ಲಿ ನಮ್ಮ ಶಾಸಕರ ಇಂದಿನ ಸ್ಥಿತಿಯೇನು?

ಹತ್ತಿಕ್ಕುವ ಆಯುಧ!

ಕಳೆದ ವಿಧಾನಸಭೆಯಲ್ಲಿ ಪರಿಸ್ಥಿತಿ ಏನಿತ್ತು? ವಿಧಾನಸಭೆಯ ಕಲಾಪಗಳು ವರುಷದಲ್ಲಿ ಕನಿಷ್ಠ ನೂರು ದಿನಗಳಾದರೂ ನಡೆಯಬೇಕು ಎಂಬ ನಿರ್ಧಾರವನ್ನು ಪಾಲಿಸಲಾಯಿತೇ?. ನಡೆದದ್ದು 60–70 ದಿನಗಳು. ಅತ್ಯಂತ ಗಂಭೀರ ಪರಿಣಾಮದ ಜಾನುವಾರು ಹತ್ಯೆ ನಿಷೇಧದ ಮಸೂದೆ, ಹಣಕಾಸು ಮಸೂದೆ, ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳ ವಾರ್ಷಿಕ ಆಯ-ವ್ಯಯ ಅಂಗೀಕಾರ, ಭೂಸ್ವಾಧೀನ ಮಸೂದೆ, ಕೈಗಾರಿಕಾ–ಕೃಷಿ ನೀತಿ, ಅಕ್ರಮ ಗಣಿಗಾರಿಕೆ, ಅದಿರು ಸಾಗಾಣಿಕೆ ವಿಚಾರ, ಲೋಕಾಯುಕ್ತ ವರದಿ, ಖಾಸಗಿ ವಿಶ್ವವಿದ್ಯಾಲಯಗಳ ಮಸೂದೆ, ಶಿಕ್ಷಣ ಶುಲ್ಕ ವಿಚಾರ ಮುಂತಾದ ಮಹತ್ವದ ವಿಷಯಗಳ ಬಗ್ಗೆ ಏನಾದರೂ ಗಮನಾರ್ಹ ಚರ್ಚೆಗಳು ನಡೆದವೇ? ಪ್ರತೀ ಬಾರಿ ಇಂತಹ ವಿಷಯಗಳು ಬಂದಾಗ ಆಡಳಿತ–ವಿರೋಧ ಪಕ್ಷಗಳಿಂದ ಗದ್ದಲದ ಸನ್ನಿವೇಶ ಸೃಷ್ಟಿಗೊಂಡು ಚರ್ಚೆಯೇ ಇಲ್ಲದೇ ಅಂಗೀಕಾರ ಆಗಿ ಹೋದವಲ್ಲ. ಇಲ್ಲಿ ಯಾರು ಯಾವುದೇ ಪಕ್ಷಗಳಿಗೆ ಸೇರಿರಲಿ ಆಸ್ತಿವಂತ ವರ್ಗಗಳ ಹಿತಾಸಕ್ತಿಗಳೇ ಅಂತಿಮವಾಗಿ ಮೇಲುಗೈ ಪಡೆಯುತ್ತವೆ. ಆಹಾರದ ಹಕ್ಕಾಗಲೀ, ಪ್ರಗತಿಪರ ಭೂ ಸುಧಾರಣೆಯ ಪ್ರಶ್ನೆಗಳೇ ಇರಲಿ ಸಾಮಾನ್ಯ ಜನರ, ದುಡಿಯುವ ವರ್ಗಗಳ ಪ್ರಶ್ನೆ, ಅವರ ದುಗುಡ ದುಮ್ಮಾನಗಳಿಗೆ ಶಾಸನಸಭೆ ಒಂದು ವೇದಿಕೆಯಾಗದೇ ಅವುಗಳನ್ನು ಹತ್ತಿಕ್ಕುವ ಆಯುಧವಾಗುತ್ತಿರುವುದು ದುರಂತವಾಗಿದೆ.

ಅಂದರೆ ಕೋಟ್ಯಾಂತರ ಬಡ ಜನರು, ಕೂಲಿಕಾರರು, ರೈತರು, ಮಧ್ಯಮವರ್ಗದ ಜನರ ಓಟಿನಿಂದಲೇ ಆರಿಸಿ ಹೋದವರು, ನಮ್ಮದು ಬಡವರ ಪಕ್ಷವೆಂದೇ ಹೇಳಿಕೊಂಡವರು ಯಾರ ಹಿತ ಕಾಯುತ್ತಾರೆ? ಜನಪ್ರತಿನಿಧಿಗಳೆಂಬ ಅವರು ಕನಿಷ್ಠ ಮಾನವ ಸಂವೇದನೆಯನ್ನೂ ಉಳಿಸಿಕೊಂಡಿಲ್ಲವೇ? ಎಂದು ಕೇಳಬಹುದು. ಆದರೆ ನಿಜಕ್ಕೂ ಅವರು ಯಾವ ವರ್ಗಗಳಿಂದ ಬಂದಿದ್ದಾರೆ ಮತ್ತು ಯಾವ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿಪಾದಿಸುತ್ತಾರೆ ಎಂಬುದೇ ಮುಖ್ಯವಾಗುತ್ತದೆ. ಇತ್ತೀಚೆಗಿನ ವಿಧಾನಸಭೆಗಳಲ್ಲಿ ಶಾಸಕರಾಗಿ ಚುನಾಯಿತರಾಗುತ್ತಿರುವವರ ಹಿನ್ನೆಲೆ ಮತ್ತು ಅವರ ಪಾತ್ರವನ್ನು ಗಮನಿಸಿದರೆ ಆತಂಕ ಹೆಚ್ಚಾಗುತ್ತದೆ.

ರಾಜಕೀಯವೆಂಬ ಹುಲುಸಾದ ಕ್ಷೇತ್ರ



ಶ್ರೀರಾಮುಲು, ಡಿ.ಕೆ. ಶಿವಕುಮಾರ, ಆಶೋಕ ಖೇಣಿ.

ಕೋಟಿ ಕೋಟ್ಯಾಧೀಶರ ಬೆಳೆ

ಎಲ್ಲೆಡೆ ಬಡವರ ಸಂಖ್ಯೆ ಬೆಳೆಯುತ್ತಲಿದ್ದರೆ ಅವರ 'ಪ್ರಾತಿನಿಧಿಕ ಸಂಸ್ಥೆ'ಯಾದ ಕರ್ನಾಟಕ ವಿಧಾನಸಭೆಯಲ್ಲಿ ಕೋಟ್ಯಾಧೀಶರ ಸಂಖ್ಯೆ ಹೆಚ್ಚುತ್ತಲೇ ನಡೆದಿದೆ. 224 ಶಾಸಕರ ಸದನದಲ್ಲಿ 203 ಜನ ಕೋಟ್ಯಾಧೀಶರಿದ್ದಾರೆ! ಕಳೆದ ಸಲ 179 ಇದ್ದರು. 2008ನೇ ಇಸ್ವಿಯಲ್ಲಿ ಶಾಸಕರ ಸರಾಸರಿ ಆಸ್ತಿ ರೂ.10.59 ಕೋಟಿ. 2013 ರಲ್ಲಿ ಅದು 19.87 ಕೋಟಿ ! ಅಂದರೆ ಆಸ್ತಿಯ ಬೆಳವಣಿಗೆ ಶೇ.88 ರಷ್ಟು ಎನ್ನುತ್ತದೆ 'ಕರ್ನಾಟಕ ಎಲೆಕ್ಷನ್ ವಾಚ್' ಎಂಬ ಸಂಸ್ಥೆಯು ಚುನಾವಣೆಗೆ ಸ್ಪರ್ಧಿಸುವಾಗ ಅಭ್ಯರ್ಥಿಗಳು ನೀಡಿದ ಪ್ರಮಾಣಪತ್ರಗಳನ್ನು ವಿಶ್ಲೇಷಿಸಿದ ವರದಿ. (2008ರಲ್ಲಿ ಇದು ಶೇ.63 ಇತ್ತು). ಆರು ಪ್ರಮುಖ ಪಕ್ಷಗಳ 'ಟಿಕೇಟ್' ಗಳಿಂದ ಸ್ಪರ್ಧಿಸಿದ್ದ 1052 ಅಭ್ಯರ್ಥಿಗಳಲ್ಲಿ 681 ಕೋಟ್ಯಾಧೀಶರಿದ್ದರು. ಅಂದರೆ ಶೇ.65! ಅವರ ಸರಾಸರಿ ಆಸ್ತಿ 9.07 ಕೋ.

ಬಿಜೆಪಿ 218 ಕೋಟ್ಯಾಧಿಪತಿ ಅಭ್ಯರ್ಥಿಗಳನ್ನು ಹೊಂದಿದು ಮೊದಲ ಸ್ಥಾನದಲ್ಲಿದ್ದರೆ (ಆಸ್ತಿ ಸರಾಸರಿ 21.99ಕೋ),
ಕಾಂಗ್ರೆಸ್ ಪಕ್ಷ 217 (7ಕೋ), ಜೆಡಿ(ಎಸ್)–215 (10ಕೋ), ಕೆಜೆಪಿ–197 (2.76ಕೋ),

ಬಿಎಸ್ಸಾರ್ 171 (1.84). ಇದರಲ್ಲಿ 8 ಶಾಸಕರ ಆಸ್ತಿ ಕಡಿಮೆಯಾಗಿದೆಯಂತೆ. ಅದರಲ್ಲಿ ಭದ್ರಾವತಿ ಶಾಸಕರಾಗಿದ್ದ ಕಾಂಗ್ರೆಸ್‌ನ ಸಂಗಮೇಶ್ ಒಬ್ಬರು. ಅವರ ಆಸ್ತಿ 5.38 ಕೋಟಿಯಿಂದ 1.66 ಕೋಟಿಗೆ ಇಳಿದಿದೆ. ಆಸಕ್ತಿದಾಯಕ ಅಂಶವೆಂದರೆ ಈ ಬಾರಿ ಇವರಿಗೆ ಟಿಕೇಟ್ ಸಿಗಲಿಲ್ಲವಂತೆ!.


ಅತ್ಯಧಿಕ ಆಸ್ತಿ ಹೊಂದಿರುವ ಮೊದಲ ಐದು ಜನರೆಂದರೆ ಶಾಸಕರಾದ ಪ್ರಿಯಾಕೃಷ್ಣ, ಡಿ.ಕೆ.ಶಿವಕುಮಾರ್, ಸಂತೋಷ್‌ಲಾಡ್ ಮುಂತಾದವರು. 2008ರಲ್ಲಿ ಪ್ರಿಯಾಕೃಷ್ಣ ಘೋಷಿಸಿಕೊಂಡಂತೆ 767.61 ಕೋ. 2013ರಲ್ಲಿ ಅದು 910.98 (143.46 ಕೋ. ಹೆಚ್ಚಳ,) ಡಿಕೆಶಿ. 75.59 ಕೋಟಿಯಿಂದ 251.50 ಕೋ.(175.91ಕೋ.ಹೆಚ್ಚಳ), ಸಂತೋಷ್ ಲಾಡ್ 61.54 ಕೋಟಿಯಿಂದ 186.40 ಕೋ. ಇನ್ನು ಮುರುಗೇಶ ನಿರಾಣಿ, ನಂದೀಶರೆಡ್ಡಿ, ಸತೀಶರೆಡ್ಡಿ, ಅನಿತಾಕುಮಾರಸ್ವಾಮಿ, ಕಟ್ಟಾ, ಖೇಣಿ, ಗಾಲಿ ರೆಡ್ಡಿಗಳು, ಶ್ರೀರಾಮುಲು ಮುಂತಾದವರ ಇಂತಹ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇವೆಲ್ಲಾ ಬರಹದಲ್ಲಿ ನೀಡಿದ ಬಿಳಿ ಲೆಕ್ಕ . ಈ ಕೋಟ್ಯಾಧೀಶರಲ್ಲಿ ಬಹುತೇಕ ರಿಯಲ್ ಎಸ್ಟೇಟ್, ಗಣಿಗಾರಿಕೆ ಕುಳಗಳೇ ಅತ್ಯಧಿಕ ಎಂಬುದೂ ಗಮನಾರ್ಹ. ಆದ್ದರಿಂದಲೇ ಈ ಉದ್ಯಮಿಗಳು ರಾಜಕೀಯ, ದಿಢೀರನೇ ಬೆಳೆದ ಬಂಡವಾಳಗಾರರು ರಾಜಕೀಯ ಪ್ರವೇಶಿಸಲು 'ಸಮಾಜಸೇವೆ'ಗೆ ತೊಡಗಿ ನಂತರ ಯಾವುದಾದರೂ ಪಕ್ಷಗಳ ಟಿಕೇಟ್‌ಗೆ ಕೈ ಒಡ್ಡಿ ಅದಕ್ಕೆ ಹತ್ತಾರು ಕೋಟಿ ಕಪ್ಪ ತೆತ್ತು, ನಂತರ ಹತ್ತೈವತ್ತು ಅಥವಾ ನೂರಾರು ಕೋಟಿಗಳನ್ನು ಚೆಲ್ಲಿ ಗೆದ್ದು ಬರುವುದು, ನಂತರ ರಾಜಕೀಯವನ್ನೇ ರಿಯಲ್ ಎಸ್ಟೇಟ್ ದಂಧೆಯಾಗಿಸುವುದು! ಸರಕಾರ–ಆಡಳಿತದ ಯಂತ್ರವನ್ನು, ಅವಕಾಶಗಳನ್ನು ಬಳಸಿಕೊಂಡು ತಮ್ಮ ಉದ್ದಿಮೆಯನ್ನು ವಿಸ್ತರಿಸಿಕೊಳ್ಳಲಾಗುತ್ತಿದೆ. ಕರ್ನಾಟಕದಲ್ಲಿ ಆಸ್ತಿ ಬೆಳೆಸಿಕೊಳ್ಳಲು ರಾಜಕೀಯ ಕ್ಷೇತ್ರ ಹುಲುಸಾದ ಒಂದು ಉದ್ಯಮವಾಗುತ್ತಿದೆ ಎನ್ನುವುದು ಉತ್ಪ್ರೇಕ್ಷೆಯೇನಲ್ಲ.



ಬಿ. ಎಸ್. ಯಡಿಯೂರಪ್ಪ, ಆರ್.ವಿ. ದೇಶಪಾಂಡೆ, ಹೆಚ್.ಡಿ. ಕುಮಾರ ಸ್ವಾಮಿ, ಪ್ರಿಯಕೃಷ್ಣ, ಕೃಷ್ಣಪ್ಪ

ಪುಟ 15 ಕ್ಕೆ

ಮಹಿಳಾ ಪೋಲೀಸ್ ಅಧಿಕಾರಿಗೇ ಲೈಂಗಿಕ ಕಿರುಕುಳ : ಡಿವೈಎಫ್‌ಐ ಪ್ರತಿಭಟನೆ



ವಾ.ಉ

ಎಎಸ್‌ಐ ಹುದ್ದೆಯ ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರಿಗೆ ಮಂಗಳೂರಿನಲ್ಲಿ ಅದೇ ಇಲಾಖೆಯ ಮೇಲಾಧಿಕಾರಿ (ಎಸಿಪಿ) ಟಿ.ಆರ್.ಜಗನ್ನಾಥ್ ಎಂಬುವರು ಲೈಂಗಿಕ ಕಿರುಕುಳ ನೀಡಿದುದ-ಕ್ಕೆ ಮೇ 24 ರಂದು ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆಯೊಂದಿಗೆ ಮಹಿಳಾ ಸಂಗಾತಿಗಳು, ವಿವಿಧ ಪ್ರಗತಿಪರ ಸಂಘಟನೆಗಳು ಪಾಲ್ಗೊಂಡವು.

ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಯಲಾರದೆ ಆಡಳಿತವನ್ನು ಐದು ವರ್ಷ ನಡೆಸಿದ ಬಿಜೆಪಿ ರಾಜ್ಯ ಸರಕಾರವನ್ನು ನಾವು ಕಿತ್ತೊಗೆದೆವು; ಆದರೆ ಪುರುಷ ಮೇಲಾಧಿಕಾರಿಯೊಬ್ಬರು ಅಧೀನ ಮಹಿಳಾ ಅಧಿಕಾರಿಯ ಜೊತೆ ನಡೆದುಕೊಂಡ ರೀತಿ ಅತ್ಯಂತ ಅಸಹ್ಯಕರ ಮಾತ್ರವಲ್ಲ ಮತ್ತು ಮಹಿಳೆಯರ ಮೇಲೆ ನಡೆಯುತ್ತಿರುವ ಕಿರುಕುಳದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂಬುದನ್ನು ತೋರಿಸುತ್ತದೆ. ಒಬ್ಬ ಅಧಿಕಾರಿ ಅಧೀನ ಸಿಬ್ಬಂದಿಯೊಂದಿಗೆ

ಹೀಗೆ ವರ್ತಿಸುವುದಾದರೆ, ಮಹಿಳೆಯರಿಗೆ ಆತನಿಂದ ರಕ್ಷಣೆ ಸಿಗಬಹುದೆಂದು ನಾವು ಹೇಗೆ ನಿರೀಕ್ಷಿಸಬಹುದು; ಅಂಥ ಅಧಿಕಾರಿಗಳು ಸರ್ಕಾರಿ ಸೇವೆಯಲ್ಲಿ ಇರಕೂಡದು ಎಂಬುದಾಗಿ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಖ್ಯಾತ ಸಾಹಿತಿ ಸಾರಾ ಅಬೂಬಕರ್ ಆಕ್ರೋಶ ವ್ಯಕ್ತಪಡಿಸಿದರು.

ಏನೇ ದೌರ್ಜನ್ಯ ನಡೆದರೂ ಜನ ಮೊದಲು ಮೊರೆ ಹೋಗುವುದು ಪೊಲೀಸ್ ಠಾಣೆಗೆ. ಮಹಿಳೆಗೆ ರಕ್ಷಣೆ ನೀಡಬೇಕೆಂದು ಸಂವಿಧಾನ ಹೇಳುತ್ತದೆ. ಆದುದರಿಂದ ಪೊಲೀಸ್ ಇಲಾಖೆಗೆ ನೇಮಿಸಿಕೊಳ್ಳುವ ಮುನ್ನ ನ್ಯಾಯ ಕಾನೂನುಗಳ ಪಾಠ ಹೇಳಬೇಕು. ಆರೋಪಿ ಎಸಿಪಿ ವಿರುದ್ಧ ಕ್ರಮ ಕೈಗೊಳ್ಳುವವರೆಗೆ ಪ್ರತಿಭಟನೆಯನ್ನು ನಿಲ್ಲಿಸುವುದಿಲ್ಲ ಎಂದು ಸಾರಾ ಅಬೂಬಕರ್ ಎಚ್ಚರಿಸಿದರು.

ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, ಎಸಿಪಿ ಟಿ.ಆರ್.ಜಗನ್ನಾಥ್ ವಿರುದ್ಧ ಹಲವಾರು ಆರೋಪಗಳಿದ್ದರೂ, ಹಿಂದಿನ ಬಿಜೆಪಿ ಸರಕಾರ ಅವರನ್ನು ರಕ್ಷಿಸಿತ್ತು. ಈ ಹಿಂದೆ ಸುರತ್ಕಲ್ ಠಾಣೆಯಲ್ಲಿ ಮಹಿಳಾ ಸಿಬ್ಬಂದಿಗೆ ಅಶ್ಲೀಲ ಎಸ್‌ಎಂಎಸ್ ಕಳುಹಿಸಿದ ಸಿಬ್ಬಂದಿಯನ್ನು ಯಾವುದೇ ತನಿಖೆ ನಡೆಸದೆಯೇ ಪೊಲೀಸ್ ಆಯುಕ್ತರು ಅಮಾನತು ಮಾಡಿದ್ದರು. ಎಸಿಪಿ ಜಗನ್ನಾಥ್ ವಿರುದ್ಧವೂ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಮಂಗಳೂರು ನಗರದ ಪಾಂಡೇಶ್ವರ ಪೋಲೀಸ್ ಠಾಣೆಯ ಮಹಿಳಾ ಅಧಿಕಾರಿಗೆ ಮೇಲಾಧಿಕಾರಿ ನೀಡಿದ ಕಿರುಕುಳ ಪತ್ರಿಕೆಗಳಲ್ಲಿ ಮೊದಲೇ ವರದಿಯಾಗಿತ್ತು. ವಿಷಯವನ್ನು ದೃಢಪಡಿಸಿಕೊಂಡು ಡಿವೈಎಫ್‌ಐ ದ.ಕ. ಜಿಲ್ಲಾ ಸಮಿತಿಯು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ವಿಷಯ ತಿಳಿದು ತಾವೂ ಭಾಗವಹಿಸುವುದಾಗಿ ನಗರದ ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಎಸ್‌ಎಫ್‌ಐ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಜತೆಗೂಡಿದ್ದರು.

ಪ್ರತಿಭಟನೆಯನ್ನುದ್ದೇಶಿಸಿ ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆಯ ಸಂಚಾಲಕರಾದ ವಿದ್ಯಾ ದಿನಕರ್, ಮರ್ಲಿನ್ ಮಾರ್ಟಿಸ್ ಕೂಡಾ ಮಾತನಾಡಿದರು. ನಗರ ಪಾಲಿಕೆ ಸದಸ್ಯ ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿ, ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಮಹಿಳಾ ಮುಖಂಡರಾದ ಪ್ರಮಿಳಾ, ಮಲ್ಲಿಕಾ, ಸೌಮ್ಯ, ಎಸ್‌ಎಫ್‌ಐ ದ.ಕ.ಜಿಲ್ಲಾ ಮುಖಂಡರಾದ ಜೀವನ್‌ರಾಜ್, ಚರಣ್ ಪಂಜಿಮೊಗರು ಮೊದಲಾದವರು ಭಾಗವಹಿಸಿದ್ದರು.




ಲೈಂಗಿಕ್ ದೌರ್ಜನ್ಯ ವಿರೋಧಿಸಿ ಡಿ.ವೈ.ಎಫ್.ಐ. ಪ್ರತಿಭಟನೆ

ಈ ಪ್ರತಿಭಟನೆ ನಡೆದ ಬಳಿಕ ಪೊಲೀಸ್ ಇಲಾಖೆ ಕ್ರಮ ತೆಗೆದು-ಕೊಂಡ ಬಗ್ಗೆ ವರದಿಯಾಗಿದೆ. ಎಸಿಪಿ ಜಗನ್ನಾಥರನ್ನು 10 ದಿನ ರಜೆಯಲ್ಲಿ ತೆರಳಲು ಇಲಾಖೆ ತಿಳಿಸಿದ್ದು, ತನಿಖೆ ನಡೆಸುವ ಸಲುವಾಗಿ ಸಮಿತಿಯೊಂದನ್ನು ನೇಮಿಸಿದ ಬಗ್ಗೆ ತಿಳಿದು ಬಂದಿದೆ.

ಮೆಸ್ಕಾಂ ನಿಷ್ಕ್ರಿಯತೆ ಖಂಡಿಸಿ ಡಿವೈಎಫ್‌ಐ ಪ್ರತಿಭಟನೆ:

ರಾಜ್ಯ ವಿಧಾನ ಸಭಾ ಚುನಾವಣೆಯ ಅಬ್ಬರ ಮುಗಿದು, ಸೋತು ಗೆದ್ದ ಪಕ್ಷಗಳು ಸೋಲು ಗೆಲುವಿನ ಮಂಪರಿನಲ್ಲೇ ಮಲಗಿರುವ ಹೊತ್ತಿನಲ್ಲಿ ಮಂಗಳೂರಿನ ಕಾವೂರಿನಲ್ಲಿ ಡಿವೈಎಫ್‌ಐ





ಪ್ರತಿಭಟನೆಯೊಂದನ್ನು ಏರ್ಪಡಿಸಿ, ಮಂಪರಿನಲ್ಲಿ ಮಲಗಿದ್ದವರನ್ನು ಎಚ್ಚರಗೊಳ್ಳುವಂತೆ ಮಾಡಿತು.

ವಿದ್ಯುತ್ ತಂತಿಗಳು ಜೋತು ಬಿದ್ದು ಅಪಾಯಕಾರಿ ಸ್ಥಿತಿಯಲ್ಲಿದ್ದರೂ ಸರಿಪಡಿಸದ ಮೆಸ್ಕಾಂ ಕಾರ್ಯವೈಖರಿಯನ್ನು ಖಂಡಿಸಿ ಡಿವೈಎಫ್‌ಐ ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ಮೇ 17 ರಂದು ಕಾವೂರಿನ ಮೆಸ್ಕಾಂ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಪಾಲಿಕೆ ಸದಸ್ಯ ಹಾಗೂ ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ ಮಾತನಾಡಿ, ಮೆಸ್ಕಾಂ ಸಿಬ್ಬಂದಿಯ ಅಸಮರ್ಪಕ ಕಾರ್ಯ ನಿರ್ವಹಣೆ ಬಗ್ಗೆ ದೂರು ನೀಡಿ ತಿಂಗಳು ಉರುಳಿದರೂ ಮೇಲಾಧಿಕಾರಿಗಳಿಂದ ಸೂಕ್ತ ಸ್ಪಂದನೆ ಸಿಕ್ಕಿಲ್ಲ. ಸಾಕಷ್ಟು ಸಿಬ್ಬಂದಿ ಇಲ್ಲವೆಂದು ಮೆಸ್ಕಾಂ ಸಬೂಬು ಹೇಳುತ್ತದೆ. ಖಾಲಿ ಇರುವ ಹುದ್ದೆಗಳನ್ನು ಶೀಘ್ರ ತುಂಬಬೇಕು. ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳನ್ನು ಮಳೆಗಾಲಕ್ಕೆ ಮುನ್ನವೇ ಬಗೆಹರಿಸಬೇಕು ಎಂದು ಅವರು ಆಗ್ರಹಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಡಿವೈಎಫ್‌ಐ ಪಂಜಿಮೊಗರು ಘಟಕ ಕಾರ್ಯದರ್ಶಿ ಇಬ್ರಾಹಿಂ ಖಲೀದ್ ಮಾತನಾಡಿದರು. ಡಿವೈಎಫ್‌ಐ ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಸದಸ್ಯರಾದ ನೌಷಾದ್ ಬೆಂಗ್ರೆ, ಜಾನ್ ಕಾವೂರು, ಲತಾ ಕೂಳೂರು, ಅನಿಲ್ ಡಿಸೋಜ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.


ಡಿವೈಎಫ್‌ಐ ನೇತೃತ್ವದಲ್ಲಿ ಅಲ್ಲಲ್ಲಿ ಬೇಸಿಗೆ ಮಕ್ಕಳ ಶಿಬಿರಗಳು:

ಮಂಗಳೂರು ತಾಲೂಕಿನ ಕೆಲವು ಡಿವೈಎಫ್‌ಐ ಘಟಕಗಳು ಕಳೆದ ಕೆಲವು ವರ್ಷಗಳಿಂದ ಸ್ಥಳೀಯ ಶಾಲಾ ಮಕ್ಕಳಿಗಾಗಿ ಬೇಸಿಗೆ ಶಿಬಿರಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ವರ್ಷವೂ ಅಲ್ಲಲ್ಲಿ ಬೇಸಿಗೆ ಶಿಬಿರ, ಬಾಲಮೇಳಗಳು ನಡೆಯುತ್ತಿರುವ ವರದಿ ಬರುತ್ತಿದೆ.

ಬಜಾಲು ಘಟಕವು ಪಕಲಡ್ಕ ಯುವಕ ಮಂಡಲ ಹಾಗೂ ಜಿಲ್ಲಾ ಬಾಲ ಭವನ ಸಮಿತಿ ಸಹಭಾಗಿತ್ವದಲ್ಲಿ ಮೇ 12 ರಿಂದ 20 ರ ವರೆಗೆ ವೈವಿಧ್ಯಮಯ ಚಟುವಟಿಕೆಗಳನ್ನೊಳಗೊಂಡ ಮಕ್ಕಳ ಶಿಬಿರವನ್ನು ನಡೆಸಿತು. ಜಾನಪದ ವಿದ್ವಾಂಸರಾದ ಡಾ। ವಾಮನ ನಂದಾವರ ಶಿಬಿರದ ಸಮಾರೋಪದಲ್ಲಿ ಭಾಗವಹಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಉಳ್ಳಾಲ ವಲಯದ ಮುನ್ನೂರು ಡಿವೈಎಫ್‌ಐ ಘಟಕದ ನೇತೃತ್ವದಲ್ಲಿ ಸ್ಥಳೀಯ ಸೌಹಾರ್ದ ಕಲಾವಿದರು ಕುತ್ತಾರು ಇವರ ಆಶ್ರಯದಲ್ಲಿ ಮಕ್ಕಳ ಬೇಸಿಗೆ ಶಿಬಿರವು ಆರಂಭಗೊಂಡು ಮುಂದುವರೆಯುತ್ತಿದೆ. ಬಾರ್ಕೂರು ಪ್ರಥಮ ದರ್ಜೆ ಕಾಲೇಜಿನ ಅಧ್ಯಾಪಕರಾದ ಹೈದರಾಲಿ ಅವರು ಚಿಣ್ಣರ ಮೇಳವನ್ನು ಉದ್ಘಾಟಿಸಿದರು.

ಪಂಜಿಮೊಗರು ಡಿವೈಎಫ್‌ಐ, ಎಸ್‌ಎಫ್‌ಐ ಘಟಕಗಳ ಆಶ್ರಯದಲ್ಲಿ ಮಕ್ಕಳ ಸ್ವರ ವತಿಯಿಂದ 5 ದಿನಗಳ ಚಿಣ್ಣರ ಮೇಳ ನಡೆಯಿತು. ಜಾದೂಗಾರ ಕುದ್ರೋಳಿ ಗಣೇಶ್ ಶಿಬಿರವನ್ನು ಉದ್ಘಾಟಿಸಿದರು. ಸಮಾರೋಪ ಸಮಾರಂಭದಲ್ಲಿ ಡಾಕ್ಟರ್ ರವೀಂದ್ರ ಐತಾಳ ಅವರಿಂದ ಹಾವುಗಳ ಪ್ರಾತ್ಯಕ್ಷತೆ ನಡೆಯಿತು.



ಆಂಧ್ರ ಗಂಭೀರ ವಿದ್ಯುತ್ ಬಿಕ್ಕಟ್ಟು ಮತ್ತು ಕೆ.ಜಿ.ಬೇಸಿನ್ ಅನಿಲ ನಿಕ್ಷೇಪ ಹಗರಣ–ಕಲ್ಲಿದ್ದಲು ಹಗರಣದ ಸಂಬಂಧಗಳು

ಆಂಧ್ರ ಪ್ರದೇಶವು ಗಂಭೀರ ವಿದ್ಯುತ್ ಬಿಕ್ಕಟ್ಟಿಗೆ ಸಿಲುಕಿದೆ. ಲೆಕ್ಕವಿಲ್ಲದ ವಿದ್ಯುತ್ ಕಡಿತ ದಿನನಿತ್ಯದ ಕತೆ–ಯಾಗಿದೆ. ಇದಲ್ಲದೆ ಜನರ ತಲೆಯ ಮೇಲೆ ತೀವ್ರ ವಿದ್ಯುತ್ ದರ ಏರಿಕೆ–ಯ ಕತ್ತಿ ತೂಗುತ್ತಿದೆ. ಜಾಗತೀಕರಣ–ಖಾಸಗೀಕರಣದ ಆರ್ಥಿಕ ನೀತಿಗಳು ಮತ್ತು ಈ ನೀತಿಗಳು ಸೃಷ್ಟಿಸಿರುವ ಕೆ.ಜಿ.ಬೇಸಿನ್ ಹಗರಣ ಮತ್ತು ಕಲ್ಲಿದ್ದಲು ಹಗರಣದಂತಹ ಹಗರಣಗಳು ಆಂಧ್ರ ಪ್ರದೇಶದ ವಿದ್ಯುತ್ ರಂಗದ ಈ ದುಸ್ಥಿತಿಗೆ ಕಾರಣವಾಗಿವೆ ಎಂಬುದನ್ನು ಗಮನಿಸಬೇಕಿದೆ.

ಜಿ.ಎಸ್. ಮಣಿ

ಆಂಧ್ರ ಪ್ರದೇಶದಲ್ಲಿ ಪ್ರಸ್ತುತ ದಿನಕ್ಕೆ ಸುಮಾರು 40–50 ದಶಲಕ್ಷ ಯೂನಿಟ್‌ಗಳ ವಿದ್ಯುತ್ ಕೊರತೆ ಉಂಟಾಗಿದೆ ಎಂಬ ಅಂದಾಜು ಮಾಡಲಾಗಿದೆ. ಈ ತೀವ್ರ ವಿದ್ಯುತ್ ಕೊರತೆ ಮತ್ತು ಗಂಭೀರ ಬಿಕ್ಕಟ್ಟಿಗೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಒಂದು ಮುಖ್ಯ ಕಾರಣ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೈಸರ್ಗಿಕ ಅನಿಲದ ಸರಬರಾಜಿನಲ್ಲಿನ ನಿರಂತರತೆಯನ್ನು ಕಾಯ್ದುಕೊಳ್ಳುವಲ್ಲಿ ವಿಫಲವಾಗಿರುವುದು. ಅಲ್ಲದೆ ಸರಕಾರಗಳು ದೇಶಿ ಕಲ್ಲಿದ್ದಲಿನ ಸರಬರಾಜನ್ನು ಸತತವಾಗಿರುವಂತೆ ನೋಡಿಕೊಳ್ಳಲು ವಿಫಲವಾಗಿರುವುದು. ಇದರಿಂದಾಗಿ 3,000 ಮೆಗಾವ್ಯಾಟ್‌ಗಳ ವಿದ್ಯುತ್ ಉತ್ಪಾದನೆ ಏರುಪೇರಾಗಿದೆ.



ಸಿಪಿಐ(ಎಂ) ಆಂಧ್ರಪ್ರದೇಶ ಕಾರ್ಯದರ್ಶಿ ಬಿ.ವಿ. ರಾಘವುಲು ಅವರನ್ನು ಪೊಲೀಸರು ಬಂಧಿಸುತ್ತಿರುವುದು

ಆಕಸ್ಮಿಕವಲ್ಲ

ಇವೆಲ್ಲಾ ಆಕಸ್ಮಿಕವಾಗಿ ಆಗಿರುವುದಲ್ಲ. ಕೇಂದ್ರ ಯುಪಿಎ ಸರ್ಕಾರದ ಹಗರಣಗಳು ಮತ್ತು ಈ ನಾನಾ ಹಗರಣಗಳಿಗೆ ಕಾರಣವಾಗಿರುವ ಖಾಸಗೀಕರಣದ ನೀತಿಗಳು ಈ ಸಮಸ್ಯೆಯ ಹಿಂದಿವೆ.

ಹಗರಣಗಳ ಸಂಬಂಧಗಳು

ಈ ವಿದ್ಯುತ್ ಬಿಕ್ಕಟ್ಟಿಗೆ ದೀರ್ಘಕಾಲಿನ ಮತ್ತು ಅಲ್ಪಕಾಲೀನ ಎರಡೂ ಕಾರಣಗಳಿವೆ. ನೈಸರ್ಗಿಕ ಅನಿಲದ ಸರಬರಾಜನ್ನು ನಿಗದಿತ ಪ್ರಮಾಣದಲ್ಲಿ ಭಾರತ ಸರ್ಕಾರ ಮಾಡದೆ ಇರುವುದರಿಂದ ಈ ಮೂಲದಿಂದ 2,770 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಬೇಕಾದ ಕಡೆ ಬರಿ 1,170 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾತ್ರ ಸಾಧ್ಯವಾಗುತ್ತಿದೆ. ನೈಸರ್ಗಿಕ ಅನಿಲ ಯಾಕೆ ಪೂರೈಕೆಯಾಗಲಿಲ್ಲ ? ಇದು ಇಲ್ಲಿ ಬಹಳ ಮುಖ್ಯವಾದ ಪ್ರಶ್ನೆ.

ದೇಶದಲ್ಲಿ ಭೂಗರ್ಭದಲ್ಲಿ ದೊರೆಯುವ ನೈಸರ್ಗಿಕ ಅನಿಲವನ್ನು ಹೊರತೆಗೆದು ವಿದ್ಯುತ್ ಉತ್ಪಾದನೆ ಸೇರಿದಂತೆ ನಾನಾ ಸಾರ್ವಜನಿಕ ಬಳಕೆಗೆ ದೊರಕುವಂತೆ ಮಾಡಬೇಕಾದ ಕರ್ತವ್ಯ ಕೇಂದ್ರ ಸರ್ಕಾರಕ್ಕಿದೆ. ಆದರೆ ಅಮೇರಿಕ ನಿರ್ದೇಶಿತ ಜಾಗತೀಕರಣ–ಐಎಂಎಫ್–ವಿಶ್ವಬ್ಯಾಂಕ್ ನಿರ್ದೇಶಿತ ಖಾಸಗೀಕರಣ ಮತ್ತು ಉದಾರೀಕರಣದ ನೀತಿಗಳಿಗೆ ಜೋತು ಬಿದ್ದಿರುವ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ದೇಶದ ಅಮೂಲ್ಯ ನೈಸರ್ಗಿಕ ಸಂಪತ್ತನ್ನು ದೊಡ್ಡ ಬಂಡವಾಳಗಾರರ ಲೂಟಿಗೆ ಹೇಗೆ ತೆರೆದಿಟ್ಟಿದೆ–ಕೊಟ್ಟುಬಿಟ್ಟಿದೆ ಎಂಬುದನ್ನು ಈಗಾಗಲೇ 'ಪತ್ರಿಕೆ'ಯ ಬೇರೆ ಬೇರೆ ಬರಹ ಮತ್ತು ಅಂಕಣಗಳಲ್ಲಿ ತಾವು ಓದಿದ್ದೀರಿ.

ಕೆ.ಜಿ.ಬೇಸಿನ್ ಅನಿಲ ನಿಕ್ಷೇಪ ಹಗರಣ

ಅದರಲ್ಲಿ ಕೃಷ್ಣ–ಗೋದಾವರಿ ತೀರದ ನೈಸರ್ಗಿಕ ಅನಿಲ ನಿಕ್ಷೇಪವು ಅಂಬಾನಿ ಒಡೆತನದ 'ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್'ನ ಪಾಲಾಗಿರುವುದು ತಮಗೆಲ್ಲಾ ತಿಳಿದಿದೆ. ಈ ಕೃಷ್ಣಗೋದಾವರಿ (ಕೆ.ಜಿ.ಬೇಸಿನ್) ಡಿ–6 ಕ್ಷೇತ್ರದಲ್ಲಿ ಉತ್ಪಾದನೆಯಾಗುವ ಅನಿಲವನ್ನು ಆಂಧ್ರ ಪ್ರದೇಶದ ಈ ವಿದ್ಯುತ್ ಯೋಜನೆಗಳಿಗೆ ಜೋಡಿಸಿ ಹಂಚಿಕೆ ಮಾಡಲಾಗಿತ್ತು. ಆಗಬೇಕಾದ ಅವಶ್ಯಕ ನೈಸರ್ಗಿಕ ಅನಿಲ ಪೂರೈಕೆಯಾಗಿದ್ದಿದ್ದರೆ ದಿನಕ್ಕೆ 38.4 ದಶಲಕ್ಷ ಯೂನಿಟ್‌ಗಳ ವಿದ್ಯುತ್ ಉತ್ಪಾದನೆ ಇದರಂದ ಸಾಧ್ಯವಿತ್ತು. ಆದರೆ ಆಂದ್ರ ಪ್ರದೇಶದಲ್ಲಿ ಈ ಸಾಮರ್ಥ್ಯದ ಬರೀ ಶೇ. 47.11 ರಷ್ಟನ್ನು ವಿದ್ಯುತ್ ಮಾತ್ರ ಉತ್ಪಾದಿಸಲಾಗುತ್ತಿದೆ. ರಿಲಯನ್ಸ್ ಇಂಡಸ್ಟ್ರೀಸ್ ಅನಿಲದ ಉತ್ಪಾದನೆಯನ್ನು ಹೆಚ್ಚಿಸುವ ಬದಲು ಕಡಿತ ಗೊಳಿಸುತ್ತಿದೆ. ಈ ಅನಿಲ ಉತ್ಪಾದನಾ ಕ್ಷೇತ್ರವನ್ನೇ ಮುಚ್ಚುವ ಸಾಧ್ಯತೆಯೂ ಇದೆ. ಇದೇ ಒಂದು ದೊಡ್ಡ ಹಗರಣ. ಅನಿಲ ಉತ್ಪಾದನೆಯ ವೆಚ್ಚವನ್ನು ಇರುವುದಕ್ಕಿಂತ ಬಾರಿ ಹೆಚ್ಚಾಗಿ ತೋರಿಸಿ ದೇಶದ ಸಂಪತ್ತು ಕೊಳ್ಳೆಹೊಡೆಯಲು ರಿಲಯನ್ಸ್ ಕಂಪನಿ ನಡೆಸುತ್ತಿರುವ ನಾನಾ ಮಸಲತ್ತುಗಳನ್ನು ವಿಷಯ ತಜ್ಞರು ಈಗಾಗಲೇ ಬಯಲು ಮಾಡಿದ್ದಾರೆ. ತಾನು ಬಲೂನಿನಂತೆ ಹಿಗ್ಗಿಸಿದ ವೆಚ್ಚದ ಲೆಕ್ಕದಲ್ಲಿ ಅನಿಲ ಬೆಲೆ ಏರಿಸಲು ಅನಿಲ ಉತ್ಪಾದನೆಯನ್ನೇ ಕಡಿಮೆ ಮಾಡುವುದು ರಿಲಯನ್ಸ್ ಕಂಪನಿಯ ಕುತಂತ್ರ. ಇಂತಹ ಕುತಂತ್ರದ ಪರಿಣಾಮಗಳಿಗೆ ಸಿಲುಕಿ ಈಗ ಆಂಧ್ರ ಪ್ರದೇಶ ಎಂಬ ರಾಜ್ಯದ ಜನರು, ದೇಶದ ಜನರು ಸಹ ನರಳುವಂತಾಗಿದೆ. ಏಕೆಂದರೆ ನೈಸರ್ಗಿಕ ಅನಿಲ ಪೂರೈಕೆ ಕೊರತೆಯಿಂದ ಇಲ್ಲಿನ ವಿದ್ಯುತ್ ಘಟಕಗಳು ದುಬಾರಿಯಾದ 'ಪುನರ್ ದ್ರವೀಕೃತ ನೈಸರ್ಗಿಕ ಅನಿಲ' (ಆರ್‌ಎಲ್‌ಎನ್‌ಎಲ್) ವನ್ನು ಮತ್ತು ನಾಫ್ತಾ ಎಂಬ ದುಬಾರಿ ಪೆಟ್ರೋಲಿಯಂ ಉತ್ಪನ್ನವನ್ನು ಬಳಸಬೇಕಾಗಿ ಬಂದಿದೆ. ಇದರಿಂದ ಉಂಟಾಗುವ ಬಿಕ್ಕಟ್ಟಿನ ಹೊರೆಯನ್ನು ಜನರ ತಲೆಯ ಮೇಲೆ ಎತ್ತಿಹಾಕಲು ಕೇಂದ್ರದ ಮತ್ತು ರಾಜ್ಯದ ಸರ್ಕಾರಗಳು ಕಾದು ಕುಳಿತಿವೆ.



ಮೇ 15 ರಾಜ್ಯ ವ್ಯಾಪಿ [illegible]

ಯುಪಿಎ ಹಗರಣಗಳು ಮತ್ತು ಆಂಧ್ರಪ್ರದೇಶದ ವಿದ್ಯುತ್ ಬಿಕ್ಕಟ್ಟಿನ ನಂಟು ಇಲ್ಲಿಗೆ ಮುಗಿಯುವುದಿಲ್ಲ.

ಕಲ್ಲಿದ್ದಲು ಹಗರಣದ ನಂಟು

ಸಾರ್ವಜನಿಕ ಖಜಾನೆಗೆ 1.86 ಲಕ್ಷ ಕೋಟಿ ರೂಪಾಯಿಗಳ ನಷ್ಟ ಉಂಟು ಮಾಡಿರುವ ಕಲ್ಲಿದ್ದಲು ಹಗರಣದಲ್ಲಿ ಪ್ರಧಾನಿ, ಪ್ರಧಾನಿಗಳ ಕಾರ್ಯಾಲಯ, ಕಾನೂನು ಮಂತ್ರಿಗಳು ಮುಖಕ್ಕೆ ಮಸಿ ಮೆತ್ತಿಕೊಂಡಿರುವುದು ಈಗ ಜಗಜ್ಜಾಹೀರು.

ಯುಪಿಎ ಸರ್ಕಾರದ ವಕ್ತಾರರು, ಬಂಡವಾಳಗಾರರು ಕಲ್ಲಿದ್ದಲು ಹಗರಣ ಎಂಬುದು ಒಂದು ಹಗರಣವೇ ಅಲ್ಲ. ಅದು ಸಿಎಜಿ ಮಾಡಿ ತೋರಿಸಿರುವ ತಪ್ಪು ಲೆಕ್ಕ ಎಂದೆಲ್ಲಾ ವಾದಿಸಿದ್ದಾರೆ. ಕಲ್ಲಿದ್ದಲು ಗಣಿಗಳನ್ನು ಗುತ್ತಿಗೆಗೆ ಪಡೆದ ಹಲವಾರು ಗುತ್ತಿಗೆದಾರ ಬಂಡವಾಳಿಗರು ಕೂಡ ಒಂದು ಬಗೆಯ ವಾದ ಮಂಡಿಸಿದ್ದಾರೆ. ಅದೇನೆಂದರೆ

ಕಲ್ಲಿದ್ದಲು ಗಣಿಗಳ ಹಂಚಿಕೆಯಾಗಿ ಹಲವಾರು ವರ್ಷಗಳಾಗಿವೆ. ಆದರೆ ನಾವಿನ್ನೂ ಗಣಿಗಾರಿಕೆಯನ್ನೇ ಆರಂಭಿಸಿಲ್ಲ. ಗಣಿಗಾರಿಕೆಯನ್ನೇ ಆರಂಭಿಸದಿರುವಾಗ ಹಗರಣ ಹೇಗೆ ಆಗಲು ಸಾಧ್ಯ ? ದೇಶಕ್ಕೆ ನಷ್ಟವಾಗಲು ಹೇಗೆ ಸಾಧ್ಯ ?? ಅಂತಲೂ ಅವರು ವಾದ ಮಾಡುತ್ತಿದ್ದಾರೆ.

ನಿಗದಿತ ಅವಧಿಯಲ್ಲಿ ಕಲ್ಲಿದ್ದಲು ಉತ್ಪಾದನೆ ಮಾಡದೇ ವಿಳಂಬ ಮಾಡಿರುವುದೂ ಕೂಡ ಒಂದು ಗಂಭೀರ ಹಗರಣ. ಹೀಗೆ ಕಲ್ಲಿದ್ದಲು ಗಣಿಗಾರಿಕೆ ಉದ್ದೇಶಕ್ಕೆ ಗಣಿ ಪಡೆದು ಕಲ್ಲಿದ್ದಲು ಉತ್ಪಾದನೆ ಮಾಡದಿರುವುದರಿಂದ ದೇಶದಲ್ಲಿ ಕಲ್ಲಿದ್ದಲು ಕೊರತೆ ಉಂಟಾಗಿ ಅದರಿಂದ ದೇಶದ ವಿದ್ಯುತ್ ವಲಯ ಸೇರಿದಂತೆ ನಾನಾ ವಲಯಗಳು ಸಂಕಷ್ಟಕ್ಕೆ ಸಿಲುಕಿವೆ.

ನಿರ್ದಿಷ್ಟವಾಗಿ ಆಂಧ್ರಪ್ರದೇಶದ ಉದಾಹರಣೆಯನ್ನೇ ನೋಡಿದರೆ ಇಲ್ಲಿನ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಿಗೆ ಉತ್ತಮ ಗುಣಮಟ್ಟದ ಕಲ್ಲಿದ್ದಲು ದೊರೆಯದೇ ಅವು ವಿದೇಶಗಳಿಂದ ಕಲ್ಲಿದ್ದಲನ್ನು ದುಬಾರಿ ಬೆಲೆಕೊಟ್ಟು ಆಮದು ಮಾಡಿಕೊಂಡಿವೆ. ಮತ್ತು ಈಗ ಗಂಭೀರ ಹಣಕಾಸು ಬಿಕ್ಕಟ್ಟಿಗೆ ಸಿಕ್ಕಿ ಹಾಕಿಕೊಂಡಿವೆ.

ಖಾಸಗೀಕರಣದ ಚೌಕಟ್ಟು

ಅದು ಎನ್‌ಡಿಎ ಸರ್ಕಾರವಿರಲಿ ಅಥವಾ ಯುಪಿಎ ಸರ್ಕಾರವಿರಲಿ ನವ ಉದಾರವಾದಿ ನೀತಿಗಳೇ ಇಲ್ಲಿ 'ಖಳನಾಯಕ'. ರಿಲಯನ್ಸ್‌ನಂತಹ ಗುತ್ತೇದಾರಿ ಕಂಪನಿಗಳು ತಮ್ಮ ಲಾಭಕ್ಕಾಗಿ ಬಂಡವಾಳ ಹೂಡಿಕೆಯನ್ನು ಉಬ್ಬರಿಸಿ ಅಂದರೆ ಖರ್ಚಿನ ಲೆಕ್ಕವನ್ನು ಹೆಚ್ಚಾಗಿ ತೋರಿಸಿ ಅನಿಲದ ಬೆಲೆಯನ್ನು ಕೃತಿಮವಾಗಿ ಅತಿಯಾಗಿ ಹೆಚ್ಚಿಸುತ್ತವೆ. ಅಲ್ಲದೆ

ಪುಟ 12 ಕ್ಕೆ

ಕೋಮುವಾದ ಸೋತಿದೆ; ಸತ್ತಿಲ್ಲ.

ರಾಜ್ಯದಲ್ಲಿ ಬಿಜೆಪಿ ಸೋತಿದೆ. ಅದು ಸಂತೋಷದ ವಿಷಯ. ಆದರೆ ಅಷ್ಟರಿಂದಲೇ ಕೋಮುವಾದದ ಅಪಾಯ ನಿವಾರಣೆ ಆಗಿದೆಯೆಂದು ಸಂಭ್ರಮಿಸುವಂತಿಲ್ಲ.

ನಿತ್ಯಾನಂದಸ್ವಾಮಿ

ರಾಜ್ಯದ 14ನೇ ವಿಧಾನಸಭೆಗಾಗಿ ಇದೇ ಮೇ 5ರಂದು ನಡೆದ ಚುನಾವಣೆಯಲ್ಲಿ ಮತದಾನ ನಡೆದ ಒಟ್ಟು 223 ಸ್ಥಾನಗಳ ಪೈಕಿ 121 ಸ್ಥಾನಗಳನ್ನು ಗೆದ್ದ ಕಾಂಗ್ರೆಸ್ ಪಕ್ಷ ಸರಳ ಬಹುಮತ ಪಡೆದು ಸರ್ಕಾರವನ್ನು ರಚಿಸಿದೆ. ಮುಂದೂಡಲ್ಪಟ್ಟ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿಯೂ ನಿರೀಕ್ಷೆಯಂತೆ ಕಾಂಗ್ರೆಸ್ ಜಯಗಳಿಸಿದೆ.

2013ರ ಫಲಿತಾಂಶ

ಪಕ್ಷ	2013
ಕಾಂಗ್ರೆಸ್	122
ಬಿಜೆಪಿ	40
ಜೆಡಿಎಸ್	40
ಪಕ್ಷೇತರರು	09
ಕರ್ನಾಟಕ ಜನತಾ ಪಕ್ಷ	06
ಬಿಎಸ್‌ಆರ್ ಕಾಂಗ್ರೆಸ್ ಪಕ್ಷ	04
ಸಮಾಜವಾದಿ ಪಕ್ಷ	01
ಸರ್ವೋದಯ ಪಕ್ಷ	01
ಕರ್ನಾಟಕ ಮಕ್ಕಳ ಪಕ್ಷ	01

5 ವರ್ಷಗಳ ಹಿಂದಿನ ಚುನಾವಣೆಯಲ್ಲಿ 110 ಸ್ಥಾನಗಳನ್ನು ಗೆದ್ದು, 6 ಜನ ಪಕ್ಷೇತರರ ಬೆಂಬಲಗಿಟ್ಟಿಸಿಕೊಂಡು ದಕ್ಷಿಣ ಭಾರತದಲ್ಲೇ ಮೊಟ್ಟ ಮೊದಲ ಬಾರಿಗೆ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬಂದಿದ್ದ ಬಿಜೆಪಿ ಕಳೆದ ಬಾರಿ ಗೆದ್ದ ಸ್ಥಾನಗಳ ಅರ್ಧದಷ್ಟನ್ನೂ ಗೆಲ್ಲಲಾಗದೆ ಹೀನಾಯ ಸೋಲನ್ನು ಅನುಭವಿಸಿದೆ. ಈ ಬಾರಿ ಬಿಜೆಪಿ 70 ಸ್ಥಾನಗಳನ್ನು ಕಳೆದುಕೊಂಡಿದೆ. 2008ರ ಚುನಾವಣೆಯಲ್ಲಿ ಬಿಜೆಪಿ 88.57 ಲಕ್ಷ ಮತಗಳನ್ನು ಗಳಿಸಿತ್ತು. ಆ ಮತದಾರರ ಪೈಕಿ ಈ ಬಾರಿ 26.25 ಲಕ್ಷ ಮತದಾರರು ಬಿಜೆಪಿಯನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಬಿಜೆಪಿ ಈ ಬಾರಿ ಶೇ. 13.96ರಷ್ಟು ಮತಗಳನ್ನು ಕಳೆದುಕೊಂಡಿದೆ. ಬಿಜೆಪಿ ಸ್ಪರ್ಧೆಗಿಳಿಸಿದ 221 ಅಭ್ಯರ್ಥಿಗಳಲ್ಲಿ ಸುಮಾರು 110 ಅಭ್ಯರ್ಥಿಗಳು ಚಲಾವಣೆಯಾದ ಮತಗಳಲ್ಲಿ ಆರನೇ ಒಂದು ಭಾಗಕ್ಕಿಂತಲೂ ಕಡಿಮೆ ಮತಗಳನ್ನು ಗಳಿಸಿ ಠೇವಣಿ ಕಳೆದುಕೊಂಡಿದ್ದಾರೆ. ಠೇವಣಿ ಕಳೆದುಕೊಂಡವರಲ್ಲಿ ಕಳೆದ ಬಾರಿ ಗೆದ್ದಿದ್ದ ಧಾರವಾಡದ ಸೀಮಾ ಮಸೂತಿ, ಗದಗದ ಶ್ರೀಶೈಲಪ್ಪ ಬಿದನೂರ, ಜಮಖಂಡಿಯ ಶ್ರೀಕಾಂತ ಕುಲಕರ್ಣಿ ಮತ್ತು ಹಡಗಲಿ ಕ್ಷೇತ್ರದ ಬಿ. ಚಂದ್ರನಾಯ್ಕ ಸೇರಿದ್ದಾರೆ. ಮೈಸೂರು, ಮಂಡ್ಯ, ತುಮಕೂರು ಜಿಲ್ಲೆಗಳ 29 ಕ್ಷೇತ್ರಗಳ ಪೈಕಿ 23 ಕ್ಷೇತ್ರಗಳಲ್ಲಿ ಈ ಬಾರಿ ಬಿಜೆಪಿ ಠೇವಣಿ ಕಳೆದುಕೊಂಡಿದೆ. ಒಟ್ಟು 11 ಜಿಲ್ಲೆಗಳಲ್ಲಿ ಅಂ-ದರೆ ಬೆಂಗಳೂರು(ಗ್ರಾ), ಚಾಮರಾಜನಗರ, ಚಿಕ್ಕಬಳ್ಳಾಪುರ, ದಾವಣಗೆರೆ, ಗದಗ, ಹಾಸನ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ಯಾದಗಿರಿ ಜಿಲ್ಲೆಗಳಲ್ಲಿ ತಲಾ ಒಂದು ಸ್ಥಾನವನ್ನೂ ಬಿಜೆಪಿಗೆ ಗೆಲ್ಲಲಾಗಿಲ್ಲ. ಜಗದೀಶ್ ಶೆಟ್ಟರ್ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿದ್ದ 12 ಮಂದಿ ಹಾಗೂ ಹಿಂದೆ ಮಂತ್ರಿಗಳಾಗಿದ್ದು ನಂತರ ಕೆಜೆಪಿ ಸೇರಿದ 8 ಜನ ಮಂತ್ರಿಗಳು ಸೋತಿದ್ದಾರೆ.



ಎಲ್ಲಾ ಜನಾಂಗದ ಶಾಂತಿಯ ತೋಟವಾಗಿರುವ ಕರ್ನಾಟಕದ ನೆಲದಲ್ಲಿ "ಹಿಂದುತ್ವ" ಎಂಬ ವಿಷವೃಕ್ಷದ ವಿಷಪೂರಿತ ಬೇರುಗಳು ಆಳಕ್ಕೆ ಇಳಿಯುವ ಮೊದಲೇ ಅದನ್ನು ಕಿತ್ತುಹಾಕಲು ನಡೆದ ಪ್ರಯತ್ನ ಸ್ವಾಗತಾರ್ಹವಾಗಿದೆ. ರಾಜ್ಯದಲ್ಲಿ ಶಾಂತಿ ಸಾಮರಸ್ಯ ಉಳಿದು ವಿವಿಧ ಮತಧರ್ಮಗಳಿಗೆ ಸೇರಿದ ಜನ ಪರಸ್ಪರ ಪ್ರೀತಿ, ವಿಶ್ವಾಸದಿಂದ ಬಾಳಬೇಕು ಎಂದು ಬಯಸುವವರೆಲ್ಲರೂ ಬಿಜೆಪಿಯ ಈ ಸೋಲನ್ನು ಸ್ವಾಗತಿಸದೆ ಇರಲಾರರು.

"ಹಿಂದುತ್ವದ ಪ್ರಯೋಗ ಶಾಲೆ" ಎಂಬ ಕುಖ್ಯಾತಿಗೆ ಒಳಗಾಗಿದ್ದ ಕರಾವಳಿ ಜಿಲ್ಲೆಗಳ ಮತದಾರರು ಕೋಮುವಾದಿ ಬಿಜೆಪಿಗೆ ಸರಿಯಾದ ಪಾಠ ಕಲಿಸಿದ್ದಾರೆ. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಒಟ್ಟು 19 ಸ್ಥಾನಗಳಲ್ಲಿ ಕಳೆದ ಬಾರಿ 10 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ ಈ ಬಾರಿ 3 ಸ್ಥಾನಗಳನ್ನು ಅಲ್ಪ ಅಂತರದಲ್ಲಿ ಗೆದ್ದು-ಕೊಂಡಿದೆ. ಕಳೆದ ಐದಾರು ವರ್ಷಗಳಿಂದ ಆರೆಸ್ಸೆಸ್ ಡಾನ್ ಆಗಿ ಕರಾವಳಿ ಜನತೆಯನ್ನು ಕಾಡುತ್ತಿದ್ದ ಕಲ್ಲಡ್ಕ ಪ್ರಭಾಕರ ಭಟ್ಟನ ಮೂತಿಗೆ ಸರಿಯಾಗಿ ಮಂಗಳಾರತಿ ಆಗಿದೆ. ದೇಶಕ್ಕೆಲ್ಲಾ ಉಪದೇಶ ಮಾಡುತ್ತಾ, ಸಂಘ ಪರಿವಾರದ ಪುಂಡರ ಪುಂಡಾಟಿ-ಕೆಯ ವಿರುದ್ಧ ಬಾಯಿ ಬಿಡದ, ಪಂಕ್ತಿಭೇದ, ಮಡೆಸ್ನಾನದಂತಹ ಅನಿಷ್ಟ ಪದ್ಧತಿಗಳನ್ನು ಬೆಂಬಲಿಸುತ್ತಾ ಬಂದಿರುವ ಪೇಜಾವರ ಮಠಾಧೀಶರಿಗೂ ಉಡುಪಿ ಮತದಾರರು ನೀತಿ ಪಾಠ ಬೋಧಿಸಿದ್ದಾರೆ. ಕರಾವಳಿ ಜಿಲ್ಲೆಗಳಲ್ಲಿ ಬಿಜೆಪಿಯ ಹೀನಾಯ ಸೋಲಿಗೆ ಕೆಜೆಪಿ ಕಾರಣವಲ್ಲ, ಇಲ್ಲಿ ಕೆಜೆಪಿ ಪ್ರಭಾವವೇ ಇರಲಿಲ್ಲ.



ಬಿಜೆಪಿ ಸರ್ಕಾರದ ಅಘೋಷಿತ ಬೆಂಬಲದಿಂದ ಸಂಘ ಪರಿವಾರದ ಗುಂಡಾಗಳು ಕ್ರೈಸ್ತ ಚರ್ಚುಗಳ ಮೇಲೆ ಹಾಗೂ ಮುಸ್ಲಿಂ ಮಸೀದಿಗಳ ಮೇಲೆ ಆಗಾಗ ನಡೆಸುತ್ತಿದ್ದ ದಾಳಿಗಳಿಂದಾಗಿ ಸಮಾಜದಲ್ಲಿ ಶಾಂತಿ ಸೌಹಾರ್ದತೆಗೆ ಧ-ಕ್ಕೆ ಆಗುತ್ತಿದ್ದುದನ್ನು ಹೃದಯವಂತಿಕೆಯುಳ್ಳ ಬಹುಸಂಖ್ಯಾತ ಹಿಂದುಗಳೇ ಒಪ್ಪುತ್ತಿರಲಿಲ್ಲ. ವಿಭಿನ್ನ ಕೋಮಿನ ಯುವಕ, ಯುವತಿಯರು ಪರಸ್ಪರ ಮಾತನಾಡುವುದನ್ನು, ಒಟ್ಟಿಗೆ ಪ್ರಯಾಣಮಾಡುವುದನ್ನು ತಡೆಯಲು ಕಾನೂನು ಕೈಗೆತ್ತಿಕೊಳ್ಳುವ ನೈತಿಕ ಪೊಲೀಸ್‌ಗಿರಿಯಿಂದ ಇಲ್ಲಿಯ ಸದಭಿಪ್ರಾಯದ ಜನತೆ ಬೇಸತ್ತಿದ್ದರು. ದೇಶೀಯ ಸಂಸ್ಕೃತಿಯ ರಕ್ಷಣೆಯ ಹೆಸರಿನಲ್ಲಿ ಇದೇ ಪುಂಡರು ಪಬ್‌ಗಳಿಗೆ, ಹೋಂಸ್ಟೇಗಳಿಗೆ ನುಗ್ಗಿ, ಯುವತಿಯರನ್ನು ಎಳೆದಾಡಿ, ಅವರ ಬಟ್ಟೆಗಳನ್ನು ಹರಿದು ಹಾಕಿ, ಅವರ ಮಾನಭಂಗ ಮಾಡಲು ಪ್ರಯತ್ನಿಸಿದ ಘಟನೆಗಳಿಂದ ಕರಾವಳಿ ಜಿಲ್ಲೆಗಳ ಜನ ಅವಮಾನಕ್ಕೊಳಗಾಗಿದ್ದರು. ಇದೆಲ್ಲದಕ್ಕೂ ತೆರೆಯೆಳೆಯಲು ಅವರು ಚುನಾವಣೆಗಾಗಿ ಕಾಯುತ್ತಿದ್ದರು. ಕರಾವಳಿ ಜಿಲ್ಲೆಗಳಿಗೆ ಕೆಟ್ಟ ಹೆಸರು ಬರಲು ಕಾರಣವಾಗಿದ್ದ ಬಿಜೆಪಿ ಸರ್ಕಾರದ ವಿರುದ್ಧ ಇದುವರೆಗೂ ಬಿಜೆಪಿಯನ್ನು ಬೆಂಬಲಿಸುತ್ತಾ ಬಂದ ಜನಗಳೇ ಸ್ಪಷ್ಟವಾದ ತೀರ್ಪನ್ನು ನೀಡಿದ್ದಾರೆ. ಬಿಜೆಪಿ ಪಿಡುಗನ್ನು ತೊಲಗಿಸಿದ ರಾಜ್ಯದ ಮತದಾರರು ನಿಜವಾಗಿಯೂ ಅಭಿನಂದನಾರ್ಹರು.

ಗುಜರಾತ್ ನರಮೇಧದ ಖ್ಯಾತಿಯ ನರೇಂದ್ರಮೋದಿಯವರನ್ನು ಕರೆಯಿಸಿ ಬೆಂಗಳೂರು, ಮಂಗಳೂರು ಮತ್ತು ಬೆಳಗಾವಿಯಲ್ಲಿ ಭಾಷಣ ಮಾಡಿಸಲಾಗಿತ್ತು. ಆದರೆ ಅವರ ಪ್ರಚೋದನಕಾರಿ ಭಾಷಣಗಳಿಂದ ಯಾವ ಚಮತ್ಕಾರವೂ ನಡೆಯಲಿಲ್ಲ.

ಚುನಾವಣಾ ಪ್ರಚಾರದಲ್ಲಿ ಮೋದಿ ಭಾಗವಹಿಸಿದ್ದು ಬಿಜೆಪಿಗೆ ಲಾಭಕ್ಕಿಂತ ನಷ್ಟವನ್ನೇ ಉಂಟುಮಾಡಿದೆ ಎನ್ನಬಹುದು. ಕರ್ನಾಟಕದ ಮತದಾರರ ಮೇಲೆ ಪ್ರಭಾವ ಬೀರಲು ವಿಫಲವಾದ ಮೋದಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನಗಳನ್ನು ಗೆಲ್ಲಿಸಿಕೊಟ್ಟು ಪ್ರಧಾನ ಮಂತ್ರಿಯಾಗುವ ಹಗಲುಗನಸು ಸಹ ಭಗ್ನವಾಗಿದೆ. ಕರ್ನಾಟಕದಲ್ಲಿ ಬಿಜೆಪಿಯ ಸೋಲಿನೊಂದಿಗೆ ದಕ್ಷಿಣದ ದ್ವಾರಬಾಗಿಲು ಸದ್ಯಕ್ಕೆ ಮುಚ್ಚಿದೆ. ಆದರೆ ಬಿಜೆಪಿಯನ್ನು ಸೋಲಿಸುವುದು ಅಷ್ಟೇನು ಸುಲಭದ ಕೆಲಸ ಆಗಿರಲಿಲ್ಲ. ಆ ಕೆಲಸವನ್ನು ರಾಜ್ಯದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದ ಯಡಿಯೂರಪ್ಪನವರೇ ಮಾಡಿರುವುದು ಗಮನಾರ್ಹ. ಯಡಿಯೂರಪ್ಪನವರ ಉದ್ದೇಶ ಏನೇ ಇರಲಿ, ಬಿಜೆಪಿ ಎಂಬ ವಿಷವೃಕ್ಷಕ್ಕೆ ಬಲವಾದ ಕೊಡಲಿಯೇಟು ನೀಡಿದ್ದಾರೆ. ಮುಂದಿನ ಬೆಳವಣಿಗೆಗಳನ್ನು ಕಾದು ನೋಡಬೇಕಾಗಿದೆಯಷ್ಟೇ. ಬಿಜೆಪಿ ಸೋತಿದೆ ಆದರೆ ನಾಶವಾಗಿಲ್ಲ. ಈ ಬಾರಿ 40 ಸ್ಥಾನಗಳನ್ನು ಮಾತ್ರ ಅದು ಗೆದ್ದಿದ್ದರೂ 57 ಕ್ಷೇತ್ರಗಳಲ್ಲಿ ಅದು ಎರಡನೇ ಸ್ಥಾನ ಪಡೆದುಕೊಂಡಿದೆ. ಕೇಂದ್ರದ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳ ಲಾಭ ಪಡೆಯಲು ಅದು ಗಂಭೀರವಾಗಿ ಪ್ರಯತ್ನಮಾಡಲಿದೆ. ಯಡಿಯೂರಪ್ಪನವರನ್ನು ವಾಪಸ್ ಕರೆತರಲು ಬಿಜೆಪಿ ಪ್ರಯತ್ನ ಮಾಡಬಹುದು. ಬಿಜೆಪಿಗೆ ಆರೆಸ್ಸೆಸ್ ಬೆಂಬಲ ಇರುವವರೆಗೂ ಅದರ ಅಪಾಯವನ್ನು ಕಡೆಗಣಿಸಲಾಗದು. ಅದರ ಫ್ಯಾಸಿಸ್ಟ್ ಧೋರಣೆಗಳ ವಿರುದ್ಧ ನಿರಂತರವಾದ ಸೈದ್ಧಾಂತಿಕ ಸಂಘರ್ಷ ನಡೆಯಬೇಕಾಗಿದೆ.

ಪುಟ 11 ಕ್ಕೆ

ಮಾವೋವಾದಿ ಹಿಂಸಾಚಾರ : ರಾಜಕೀಯವಾಗಿ ಸೈದ್ಧಾಂತಿಕವಾಗಿ ಎದುರಿಸಬೇಕು

ಮಾವೋವಾದಿಗಳು ಎಂದು ಹೇಳಿಕೊಳ್ಳುವವರ ಬಂದೂಕು ಮತ್ತು ಹಿಂಸಾಚಾರವನ್ನು ಅವಲಂಬಿಸುವ ದಾರಿಯ ಸಂದರ್ಭದಲ್ಲಿ ದೃಢ ಆಡಳಿತಾತ್ಮಕ ಕ್ರಮವಹಿಸುವುದಲ್ಲದೆ ಅನ್ಯಮಾರ್ಗವಿಲ್ಲ. ಆದರೆ ಅದೇ ವೇಳೆಗೆ, ಸಾಮಾನ್ಯ ಜನರು ಪ್ರಭುತ್ವದ ದಮನಕ್ಕೆ ಬಲಿಯಾಗದಂತೆ ನೋಡಿಕೊಳ್ಳುವುದೂ ಅನಿವಾರ್ಯ. ಇದನ್ನು ಕೇವಲ ಕಾನೂನು-ವ್ಯವಸ್ಥೆಯ ಸಮಸ್ಯೆಯಾಗಿ ಎದುರಿಸಲು ಸಾಧ್ಯವಿಲ್ಲ. ಎಲ್ಲಕ್ಕೂ ಮಿಗಿಲಾಗಿ, ಪ್ರಜಾಪ್ರಭುತ್ವವಾದಿ ಶಕ್ತಿಗಳು ಜನಗಳನ್ನು ಅಣಿನೆರೆಸಿ ಮಾವೋವಾದಿಗಳನ್ನು ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿ ಎದುರಿಸಬೇಕಾಗಿದೆ.

ಸೀತಾರಾಮ ಯೆಚೂರಿ

ಮಾವೋವಾದಿಗಳು ಛತ್ತೀಸ್‌ಗಡದ ಜಗ್ದಾಲ್ಪುರ ಜಿಲ್ಲೆಯ ದರ್ಭಾ ಎಂಬಲ್ಲಿ ಸಾಗಿದ್ದ ಕಾಂಗ್ರೆಸ್ ಮುಖಂಡರ ವಾಹನಗಳ ಸಾಲಿನ ಮೇಲೆ ದಾಳಿ ನಡೆಸಿ 24 ಮಂದಿಯನ್ನು ಸಾಯಿಸಿದ್ದಾರೆ. ಸಾಯಿಸಲ್ಪಟ್ಟವರಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ನಂದಕಿಶೋರ್ ಪಟೇಲ್ ಮತ್ತು ಮಹೇಂದ್ರ ಕರ್ಮ ಕೂಡ ಇದ್ದರು. ಸಾವಿಗೀಡಾದ ಇತರರೆಂದರೆ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಪೋಲೀಸ್ ಸಿಬ್ಬಂದಿ. ಮಾಜಿ ಕೇಂದ್ರ ಮಂತ್ರಿ ವಿ.ಸಿ.ಶುಕ್ಲ ಗಂಭೀರವಾಗಿ ಗಾಯಗೊಂಡಿದ್ದಾರೆ. ತಾವು ಉದ್ದೇಶಪೂರ್ವಕವಾಗಿಯೇ ಈ ಕಾಂಗ್ರೆಸ್ ಮುಖಂಡರನ್ನು ಕೊಲ್ಲಲು ಗುರಿಯಿಟ್ಟಿದ್ದೆವು ಎಂದು ಮಾವೋವಾದಿಗಳು ಸಾರಿದ್ದಾರೆ.

ದರ್ಭಾ ದಾಳಿ ಸಿಪಿಐ(ಮಾವೋವಾದಿ) ಅಂಗೀಕರಿಸಿರುವ ಹಿಂಸಾಚಾರದ ರಾಜಕೀಯದ ಮತ್ತು ಹತ್ಯಾಕಾರಿ ಕಾರ್ಯತಂತ್ರಗಳ ಇತ್ತೀಚಿನ ಉದಾಹರಣೆ. ಇತ್ತೀಚೆಗೆ ಹಲವು ವರ್ಷಗಳಿಂದ ಮಾವೋವಾದಿಗಳು ದಾಂತೆವಾಡ-ಬಸ್ತಾರ್ ಪ್ರದೇಶದಲ್ಲಿ ದಟ್ಟ ಅರಣ್ಯಗಳನ್ನು ತಮ್ಮ ನೆಲೆಯಾಗಿ ಬಳಸುತ್ತಿದ್ದಾರೆ. ಅವರಿಗೆ ಪ್ರತಿಯಾಗಿ ಪೋಲೀಸ್ ಮತ್ತು ಅರೆಸೈನಿಕ ಪಡೆಗಳು ಇಲ್ಲಿ ಸತತವಾಗಿ ಕಾರ್ಯಾಚರಣೆಗಳಲ್ಲಿ ತೊಡಗಿವೆ. ಇದರಿಂದಾಗಿ ಇಲ್ಲಿನ ಬುಡಕಟ್ಟು ಜನಗಳು ಭದ್ರತಾ ಪಡೆಗಳ ತೀವ್ರ ದಮನಕ್ಕೆ ಒಳಗಾಗಿದ್ದಾರೆ, ಈ ಪಡೆಗಳವರು ಸಾಮಾನ್ಯ ಬುಡಕಟ್ಟು ಜನಗಳು ಮತ್ತು ಮಾವೋವಾದಿ ತಂಡಗಳ ನಡುವೆ ವ್ಯತ್ಯಾಸ ಕಾಣುವಲ್ಲಿ ಅಸಮರ್ಥರಾಗಿದ್ದಾರೆ. ಇತ್ತೀಚೆಗೆ ಬಿಜಪುರ್ ಜಿಲ್ಲೆಯ ಒಂದು ಹಳ್ಳಿಯಲ್ಲಿ ಭದ್ರತಾ ಪಡೆಗಳು ಗುಂಡು ಹಾರಿಸಿದಾಗ ಎಂಟು ಮಂದಿ ಸತ್ತಿದ್ದಾರೆ. ಇವರಲ್ಲಿ ನಾಲ್ವರು ವಯಸ್ಕರೂ ಅಲ್ಲ, ಕಿರಿ ವಯಸ್ಸಿನವರು. ಬಸ್ತಾರ್ ಪ್ರದೇಶದ ಬುಡಕಟ್ಟು ಜನಗಳು ಮಾವೋವಾದಿಗಳ ಲೂಟಿ ಒಂದೆಡೆ ಮತ್ತು ಇನ್ನೊಂದೆಡೆ, ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ರಾಜ್ಯ ಮತ್ತು ಕೇಂದ್ರ ಸರಕಾರಗಳ ಬೆಂಬಲದಿಂದ ಪ್ರಾಯೋಜಿಸಿರುವ ಸಲ್ವ ಜುಡುಮ್ ಹರಿಯಬಿಟ್ಟ ಪ್ರತಿ-ಹಿಂಸಾಚಾರಗಳು ಎರಡನ್ನೂ ಅನುಭವಿಸಬೇಕಾಗಿದೆ.



ಛತೀಸ್‌ಗಢ-ಬಾಂಬ್ ಸ್ಫೋಟದ ತೀವ್ರತೆ

ಟೊಳ್ಳು ಆರ್ಭಟ

ಮಾವೋವಾದಿಗಳು ಛತ್ತೀಸ್‌ಗಡ, ಝಾರ್ಖಂಡ್, ಒಡಿಷ, ಬಿಹಾರದ ಕೆಲ ಭಾಗಗಳು, ಆಂಧ್ರಪ್ರದೇಶ, ಪಶ್ಚಿಮ ಬಂಗಾಲ ಮತ್ತು ಮಹಾರಾಷ್ಟ್ರದ ಬುಡಕಟ್ಟು ಮತ್ತು ಅರಣ್ಯಪ್ರದೇಶಗಳಲ್ಲಿ ಸಕ್ರಿಯರಾಗಿದ್ದಾರೆ. ಅವರು ತಮ್ಮ ಸಶಸ್ತ್ರ ಕಾರ್ಯಾಚರಣೆಗಳ ಮೂಲಕ ಬುಡಕಟ್ಟು ಜನಗಳನ್ನು ಪ್ರಭುತ್ವದ ವಿರುದ್ಧ ಎತ್ತಿಕಟ್ಟಿ ಅವರ ಮೇಲೆ ಪ್ರಭುತ್ವದ ದಮನದ ಎಲ್ಲ ಒತ್ತಡಕ್ಕೆ ಆಹ್ವಾನ ನೀಡಿದ್ದಾರೆ. ಮಾವೋವಾದಿಗಳು ಭದ್ರತಾ ಪಡೆಗಳ ಮೇಲೆಯಷ್ಟೇ ಗುರಿಯಿಟ್ಟಿರುವುದಲ್ಲ, ರಾಜಕೀಯ ಕಾರ್ಯಕರ್ತರು ಮತ್ತು ತಮ್ಮೊಂದಿಗೆ ಸಹಕರಿಸದ ಬಹಳಷ್ಟು ಜನಗಳ ಮೇಲೂ ದಾಳಿ ಮಾಡಿದ್ದಾರೆ, ಕೊಂದು ಹಾಕಿದ್ದಾರೆ.



ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿಸಿರುವುದು

ಮಾವೋವಾದಿ ಗ್ಯಾಂಗುಗಳು 2009ರಿಂದ 2011ರ ನಡುವೆ 210 ಸಿಪಿಐ(ಎಂ) ಕಾರ್ಯಕರ್ತರು ಮತ್ತು ಬೆಂಬಲಿಗರನ್ನು ಕೊಂದಿವೆ. ಅವರು ಆಗ ಮುಖ್ಯಮಂತ್ರಿಯಾಗಿದ್ದ ಬುದ್ಧದೇಬ್ ಭಟ್ಟಾಚಾರ್ಯರ ಹತ್ಯೆಯ ಪ್ರಯತ್ನವನ್ನೂ ಮಾಡಿದ್ದಾರೆ. ಇದು ಆಳುವ ವರ್ಗಗಳು ಮತ್ತು ಪ್ರಭುತ್ವದ ವಿರುದ್ಧ ಅವರ ಕ್ರಾಂತಿಕಾರಿ ಆರ್ಭಟದ ಟೊಳ್ಳುತನವನ್ನು ಬಯಲಿಗೆಳೆದಿದೆ. ನಿಜಸಂಗತಿಯೆಂದರೆ, ಮಾವೋವಾದಿಗಳು ಎಡ ದುಸ್ಸಾಹಸವಾದದ ಒಂದು ಅವನತಿ ಹೊಂದಿರುವ ಸ್ವರೂಪ. ಅವರು ಪ್ರಜಾಪ್ರಭುತ್ವ ಆಂದೋಲನವನ್ನು ಛಿದ್ರಗೊಳಿಸಲು ಸಹಾಯ ಮಾಡಬಹುದು, ಮತ್ತು ಬಲಪಂಥೀಯ ಶಕ್ತಿಗಳಿಗೆ ನೆರವಾಗಬಹುದಷ್ಟೇ. ಪಶ್ಚಿಮ ಬಂಗಾಲದಲ್ಲಿ ತೃಣಮೂಲ ಕಾಂಗ್ರೆಸಿಗೆ ನೆರವಾಗುವಲ್ಲಿ ಅವರು ಒಂದು ನೇರ ಪಾತ್ರ ವಹಿಸಿದಾಗ ಇದು ಕಣ್ಣು ಕುಕ್ಕುವ ರೀತಿಯಲ್ಲಿ ಸಾಬೀತಾಯಿತು.

ಮಾವೋವಾದಿಗಳು ಪೋಷಿಸುವ ಅರಾಜಕ ಹಿಂಸಾಚಾರ ಜನಸಾಮಾನ್ಯರ ವಿರುದ್ಧ ವಿವಿದ ಭಯೋತ್ಪಾದಕ ಕೃತ್ಯಗಳಿಗೆ ಕಾರಣವಾಗಿದೆ. ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ರೈಲ ಹಳಿ ತಪ್ಪಿಸಿ 149 ಪ್ರಯಾಣಿಕರು ಪ್ರಾಣ ಕಳಕೊಳ್ಳುವಂತಾಗಿದೆ. ಎರಡು ವರ್ಷಗಳ ಹಿಂದೆ ದಾಂತೆವಾಡದಲ್ಲಿ ಮಾವೋವಾದಿಗಳು ಸ್ಫೋಟಿಸಿದ ಬಸ್ಸಿನಲ್ಲಿದ್ದ ಪ್ರಯಾಣಿಕರು ಭೀಕರ ಸಾವನ್ನಪ್ಪಿದರು. ಹೀಗೆ ಮಾವೋವಾದಿಗಳು ತಾವು ಯಾವ ಜನರ ಪರವಾಗಿದ್ದೇವೆ ಎಂದು ಹೇಳಿಕೊಳ್ಳುತ್ತಾರೋ ಅವರ ಮೇಲೆಯೇ ದಬ್ಬಾಳಿಕೆ ನಡೆಸುತ್ತಾರೆ.

ಬಿಜೆಪಿ, ಕಾಂಗ್ರೆಸ್‌ಗಳೂ ಹೊಣೆ

ಕಾಂಗ್ರೆಸಿನ ಯಾತ್ರಾ ಕಾರ್ಯಕ್ರಮಕ್ಕೆ ಒದಗಿಸಿದ ಭದ್ರತಾ ವ್ಯವಸ್ಥೆಗಳು ಕೆಟ್ಟದಾಗಿದ್ದು ಅದಕ್ಕೆ ಛತ್ತೀಸ್‌ಗಡದ ರಾಜ್ಯ ಸರಕಾರವನ್ನು ಹೊಣೆಯಾಗಿಸಬೇಕಾಗಿದೆ. ಇದೇ ಬಿಜೆಪಿ ರಾಜ್ಯ ಸರಕಾರ 'ಸಲ್ವ ಜುಡುಮ್' ಕಾರ್ಯಕ್ರಮಕ್ಕೂ ಹೊಣೆಗಾರನಾಗಿದೆ. ಈ ಕಾರ್ಯಕ್ರಮ ಬುಡಕಟ್ಟು ಜನಗಳ ಬದುಕುಗಳನ್ನು ಮೂರಾಬಟ್ಟೆ ಮಾಡಿದೆ, ಈ ಕಾರ್ಯಕ್ರಮದ ಶಾಂತಿಪಾಲಕರೆನಿಸಿಕೊಂಡವರು ಹಲವರ ಹತ್ಯೆಗಳಿಗೆ ಕಾರಣರಾಗಿದ್ದಾರೆ. ಈ ಹಿಂದುಳಿದ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಯ ಹೆಸರಿನಲ್ಲಿ, ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಖಾಸಗಿ ಕಂಪನಿಗಳು ಗಣಿಗಾರಿಕೆ ನಡೆಸಲು ಮತ್ತು ಈ ಪ್ರದೇಶದ ಇತರ ಸಂಪನ್ಮೂಲಗಳನ್ನು ಲೂಟಿ ಹೊಡೆಯಲು ಅವಕಾಶ ಕಲ್ಪಿಸಿ ಕೊಟ್ಟಿವೆ. ಇವು ಬುಡಕಟ್ಟು ಜನಗಳನ್ನು ಸ್ಥಳಾಂತರಗೊಳಿಸಿವೆ, ಅವರು ತಮ್ಮ ಜೀವನಾಧಾರಗಳನ್ನು ಕಳೆದುಕೊಳ್ಳುವಂತೆ ಮಾಡಿವೆ. ಇದಕ್ಕೆ ಪ್ರತಿಯಾಗಿ ಮಾವೋವಾದಿಗಳು ಸರಕಾರೀ ಸಿಬ್ಬಂದಿಗಳ ಮೇಲೆ ಗುರಿಯಿಟ್ಟು ಈ ಪ್ರದೇಶದಲ್ಲಿ ನಡೆಯಬಹುದಾಗಿದ್ದ ಅಲ್ಪ-ಸ್ವಲ್ಪ ಕಲ್ಯಾಣ ಕಾರ್ಯಗಳನ್ನೂ ಛಿದ್ರಗೊಳಿಸಿದ್ದಾರೆ.

ಬಂದೂಕು ಮತ್ತು ಹಿಂಸಾಚಾರವನ್ನು ಅವಲಂಬಿಸುವ ಮಾವೋವಾದಿ ದಾರಿಯ ಸಂದರ್ಭದಲ್ಲಿ ಇಂತಹ ಚಟುವಟಿಕೆಗಳನ್ನು ನಿಲ್ಲಿಸಲು ದೃಢ ಆಡಳಿತಾತ್ಮಕ ಕ್ರಮವಹಿಸುವುದಲ್ಲದೆ ಅನ್ಯಮಾರ್ಗವಿಲ್ಲ. ಅದೇ ವೇಳೆಗೆ, ಸಾಮಾನ್ಯ ಜನರು ಪ್ರಭುತ್ವದ ದಮನಕ್ಕೆ ಬಲಿಯಾಗದಂತೆ ನೋಡಿಕೊಳ್ಳುವುದೂ ಅನಿವಾರ್ಯ. ಜನಗಳಿಗೆ ಮೂಲಭೂತ ಸೇವೆಗಳು ಮತ್ತು ಸೌಲಭ್ಯಗಳನ್ನು ಆಡಳಿತ ಲಭ್ಯಗೊಳಿಸಬೇಕಾಗಿದೆ. ಈ ಮಾವೋವಾದಿಗಳು ಎಂದು ಹೇಳಿಕೊಳ್ಳುವವರ ಹಿಂಸಾಚಾರವನ್ನು ಕೇವಲ ಕಾನೂನು-ವ್ಯವಸ್ಥೆಯ ಸಮಸ್ಯೆಯಾಗಿ ಎದುರಿಸಲು ಸಾಧ್ಯವಿಲ್ಲ. ಎಲ್ಲಕ್ಕೂ ಮಿಗಿಲಾಗಿ, ಪ್ರಜಾಪ್ರಭುತ್ವವಾದಿ ಶಕ್ತಿಗಳು ಜನಗಳನ್ನು ಅಣಿನೆರೆಸಿ ಮಾವೋವಾದಿಗಳನ್ನು ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿ ಎದುರಿಸಬೇಕಾಗಿದೆ.

ಕೋಮುವಾದ ಸತ್ತಿಲ್ಲ....

ಪುಟ 8 ರಿಂದ

ಬಿಜೆಪಿಯ ಐದು ವರ್ಷಗಳ ದುರಾಡಳಿತ ಮತ್ತು ಭ್ರಷ್ಟಾಚಾರದ ಎದುರಲ್ಲಿ ಒಂದು ವಿರೋಧಪಕ್ಷವಾಗಿ ಕೆಲಸಮಾಡಲು ವಿಫಲವಾದ ಕಾಂಗ್ರೆಸ್ ಕೈಗೆ ಅಧಿಕಾರ ಹಸ್ತಾಂತರವಾಗಿದೆ. 2008ರ ಚುನಾವಣೆಯಲ್ಲಿ ಕೇವಲ 80 ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆಸ್ ಈ ಬಾರಿ 122 ಸ್ಥಾನಗಳನ್ನು ಗೆದ್ದು ಸ್ಪಷ್ಟ ಬಹುಮತ ಪಡೆದಿದೆ.

ಕಾಂಗ್ರೆಸಿನ ಈ ಜಯ ನಿರೀಕ್ಷಿತವಾಗಿತ್ತು. ಮತದಾರರ ಎದುರು ಬೇರೆ ಪರ್ಯಾಯ ಇಲ್ಲದಿದ್ದುದರಿಂದ ಕಾಂಗ್ರೆಸ್ ಅವರ ಅನಿವಾರ್ಯ ಆಯ್ಕೆಯಾಗಿದೆ. ಆಡಳಿತ ವಿರೋಧಿ ಭಾರೀ ಅಲೆಯೊಂದರಲ್ಲಿ ಆಡಳಿತರೂಢ ಬಿಜೆಪಿ ತರಗೆಲೆಯಂತೆ ಕೊಚ್ಚಿಕೊಂಡುಹೋದಾಗ ಕಾಂಗ್ರೆಸಿಗೆ ಅನಾಯಾಸವಾಗಿ 121 ಸ್ಥಾನಗಳು ದಕ್ಕಿವೆ, ಇದು ರಾಜ್ಯದ ಜನತೆಯಲ್ಲಿ ಬಿಜೆಪಿ ಆಡಳಿತದ ಬಗ್ಗೆ ತುಂಬಿಕೊಂಡಿದ್ದ ಅತೃಪ್ತಿಯ ಪ್ರಮಾಣವನ್ನು ತೋರಿಸುತ್ತದೆಯೇ ಹೊರತು ಕಾಂಗ್ರೆಸ್‌ಪರವಾದ ಅಲೆಯನ್ನಲ್ಲ. ಕಾಂಗ್ರೆಸ್ ಪರವಾದ ಹೇಳಿಕೊಳ್ಳಬಹುದಾದ ಅಲೆ ಇರಲೇ ಇಲ್ಲ. ಕಾಂಗ್ರೆಸ್ ಪರವಾದ ಅಷ್ಟೊಂದು ದೊಡ್ಡ ಅಲೆ ಇದ್ದಿದ್ದರೆ, ಕೆಪಿಸಿಸಿ ಅದ-ಕ್ಷ ಡಾ. ಜಿ. ಪರಮೇಶ್ವರ್ ಸೋಲುತ್ತಿರಲಿಲ್ಲ. ಸುಮಾರು 63 ಅಭ್ಯರ್ಥಿಗಳು ಎರಡನೇ ಸ್ಥಾನಕ್ಕೆ ತೃಪ್ತಿಪಡಬೇಕಾಗುತ್ತಿರಲಿಲ್ಲ. ಸುಮಾರು 38 ಸ್ಥಾನಗಳಲ್ಲಿ ಸೋಲು ಅನುಭವಿಸಬೇಕಾಗುತ್ತಿರಲಿಲ್ಲ.

ಬಿಜೆಪಿ ಸುಮಾರು ಶೇ. 14ರಷ್ಟು ಮತಗಳನ್ನು ಕಳೆದುಕೊಂಡಿದೆ. ಬಿಜೆಪಿಯಿಂದ ದೂರ ಸರಿದ ಮತಗಳನ್ನು ಗಣನೀಯ ಪ್ರಮಾಣದಲ್ಲಿ ಸೆಳೆದುಕೊಳ್ಳಲು ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ. ಬಿಜೆಪಿಯಿಂದ ದೂರ ಸರಿದ ಮತಗಳಲ್ಲಿ ಒಂದು ದೊಡ್ಡ ಪಾಲನ್ನು ಕೆಜೆಪಿ ಮತ್ತು ಬಿಎಸ್‌ಆರ್ ಕಾಂಗ್ರೆಸ್ ಹಂಚಿಕೊಂಡಿದೆ. ಸುಮಾರು 23 ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕೆಜೆಪಿ ನಡುವೆ ಮತಗಳ ವಿಭಜನೆ ಆಗಿರುವುದರಿಂದ ಕಾಂಗ್ರೆಸಿಗೆ ಲಾಭವಾಗಿದೆ. ಒಟ್ಟಾರೆಯಾಗಿ ಬಿಜೆಪಿಗೆ ಆಗಿರುವ ಹಾನಿಯಿಂದ ಕಾಂಗ್ರೆಸಿಗೆ ಲಾಭವಾಗಿದೆ.

ತಲೆಕೆಳಗಾದ ಕೆಜೆಪಿ ನಿರೀಕ್ಷೆ :

ಮೇ 14 ರಂದು ನಾನು ಸರ್ಕಾರ ರಚಿಸುತ್ತೇನೆ ಮತ್ತು ಮತ್ತೊಮ್ಮೆ ನಾನು ರಾಜ್ಯದ ಮುಖ್ಯಮಂತ್ರಿ ಆಗುತ್ತೇನೆ 'ಎಂದು ಬಿ.ಎಸ್. ಯಡಿಯೂರಪ್ಪ ಚುನಾವಣಾ ಪ್ರಚಾರ ಭಾಷಣದಲ್ಲಿ ಹೇಳಿದ್ದರು. ಆದರೆ ರಾಜ್ಯದ ಜನ ಅವರ ಘೋಷಣೆಯನ್ನು ಕೇಳಿಯೂ ಕೇಳದವರಂತೆ ಯಡಿಯೂರಪ್ಪನವರ ಕೆಜೆಪಿಯನ್ನು ತಿರಸ್ಕರಿಸಿದ್ದಾರೆ. ಸರ್ಕಾರದ ಕಿಂಗ್ ಆಗುವ ಅಥವಾ ಕಿಂಗ್ ಮೇಕರ್ ಆಗುವ ಅವರ ಲೆಕ್ಕಾಚಾರ ತಲೆಕೆಳಗಾಯಿತು. ಕರ್ನಾಟಕ ಜನತಾ ಪಕ್ಷ ಸ್ಪರ್ಧಿಸಿದ 217 ಕ್ಷೇತ್ರಗಳ ಪೈಕಿ ತನ್ನ ಶಿಕಾರಿಪುರ ಕ್ಷೇತ್ರವೂ ಸೇರಿದಂತೆ ಕೇವಲ 6 ಕ್ಷೇತ್ರಗಳಲ್ಲಿ ಮಾತ್ರ ಗೆಲ್ಲಲು ಸಾಧ್ಯವಾಗುವುದರೊಂದಿಗೆ ನಿರೀಕ್ಷೆಗಳೆಲ್ಲವೂ ಹುಸಿಯಾದವು. ತಾನು ರಾಜ್ಯದ ಲಿಂಗಾಯತರ ಅವಿವಾದಿತ ನಾಯಕ ಎಂಬ ಅವರ ಪ್ರತಿಬಿಂಬ ಒಡೆದು ಚೂರುಚೂರಾಯಿತು. ಲಿಂಗಾಯಿತರೇ ದೊಡ್ಡ ಸಂಖ್ಯೆಯಲ್ಲಿರುವ ಮುಂಬೈ ಕರ್ನಾಟಕ ಮತ್ತು ಮಧ್ಯ ಕರ್ನಾಟಕ ಪ್ರದೇಶಗಳಲ್ಲಿ ಕೆಜೆಪಿ ನೆಲಕಚ್ಚಿತು. ಈ ಎರಡು ಪ್ರದೇಶಗಳ ಒಟ್ಟು 77 ಸ್ಥಾನಗಳ ಪೈಕಿ ಕೆಜೆಪಿಗೆ ಸಿಕ್ಕಿದ್ದು ಕೇವಲ ಮೂರು ಸ್ಥಾನಗಳು ಮಾತ್ರ, ಯಡಿಯೂರಪ್ಪನವರ ಸ್ವಂತ ಜಿಲ್ಲೆಯಲ್ಲಿಯೂ ಅವರ ಒಂದು ಸ್ಥಾನವನ್ನು ಮಾತ್ರ.

ರಾಜ್ಯದ ಸುಮಾರು 35 ಕ್ಷೇತ್ರಗಳಲ್ಲಿ ಕೆಜೆಪಿ ಎರಡನೇ ಸ್ಥಾನ ಪಡೆದಿದ್ದರೂ ಸುಮಾರು 24 ಜಿಲ್ಲೆಗಳಲ್ಲಿ ಅದು ಖಾತೆ ತೆರೆಯಲಿಲ್ಲ. ಗೆದ್ದವರು ತೆಂಗಿನಕಾಯಿ ಚಿನ್ಹೆಯ ಮೇಲೆ ಸ್ಪರ್ಧಿಸಿದ್ದರೂ ಅವರು ತಮ್ಮ ಸ್ವಂತ ಸಾಮರ್ಥ್ಯದಿಂದಲೇಗೆದ್ದವರಾಗಿದ್ದಾರೆ.ಸಿ.ಎಂ. ಉದಾಸಿ, ಶೋಭಾ ಕರಂದ್ಲಾಜೆಯವರಂತಹ ಯಡಿಯೂರಪ್ಪನವರ ನಿಕಪಟವರ್ತಿಗಳೂ ಸೇರಿದಂತೆ ಬಿಜೆಪಿ ಬಿಟ್ಟು ಕೆಜೆಪಿ ಸೇರಿದ 15 ಶಾಸಕರೂ ಸೋತಿದ್ದಾರೆ. ಬಿಜೆಪಿಯಲ್ಲಿ ಅನ್ಯಾಯಕ್ಕೆ ಒಳಗಾಗಿದ್ದೇನೆ ಎಂದು ಬಿಂಬಿಸಿ ಲಿಂಗಾಯತರಲ್ಲಿ ಇನ್ನೊಂದು ಅನುಕಂಪದ ಅಲೆ ಸೃಷ್ಟಿಯಾಗಲಿದೆ ಎಂಬ ನಿರೀಕ್ಷೆಯಲ್ಲಿದ್ದ ಯಡಿಯೂರಪ್ಪಗೆ ತೀವ್ರ ಅಘಾತವಾಗಿದೆ. ಬಿಜೆಪಿಯನ್ನು ಬಿಟ್ಟು ಬಂದ ತಕ್ಷಣ ಹಿಂದಿನ ಬಹುಕೋಟಿ ಭ್ರಷ್ಟಾಚಾರದ ಪ್ರಕರಣಗಳನ್ನು ಜನಮರೆತು ಬಿಡುತ್ತಾರೆ ಅಥವ ಕ್ಷಮಿಸಿಬಿಡುತ್ತಾರೆ ಎಂಬ ನಿರೀಕ್ಷೆಗಳೂ ಸುಳ್ಳಾಗಿವೆ. ಅದಕ್ಕೂ ಮುಖ್ಯವಾಗಿ, ಒಬ್ಬ ವ್ಯಕ್ತಿಯ ವ್ಯಕ್ತಿಗತ ಮಹತ್ವಾಕಾಂಕ್ಷೆಗಳ ಸಾಧನೆಗಾಗಿ ಕಟ್ಟುವ ಪ್ರಾದೇಶಿಕ ಪಕ್ಷಗಳನ್ನು ರಾಜ್ಯದ ಜನತೆ ಪುರಸ್ಕರಿಸುವುದಿಲ್ಲ ಎಂದು ಮತ್ತೊಮ್ಮೆ ಸಾಬೀತಾಗಿದೆ.

ಮತದಾರರ ಮನ್ನಣೆ ಪಡೆಯಲಾಗದ ಬಿಎಸ್‌ಆರ್ ಕಾಂಗ್ರೆಸ್ :

ಮಾಜಿ ಸಚಿವ ಬಿ. ಶ್ರೀರಾಮುಲು ಅವರ ಬಿಎಸ್‌ಆರ್ ಕಾಂಗ್ರೆಸ್ ಪಕ್ಷಕ್ಕೂ ಮತದಾರರರೂ ಮನ್ನಡೆ ನೀಡಿಲ್ಲ. ಸುಮಾರು 180 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಬಿಎಸ್ಸಾರ್ ಕಾಂಗ್ರೆಸ್ ನಾಲ್ಕು ಸ್ಥಾನಗಳಿಗೆ ತೃಪ್ತಿಪಡುವಂತಾಗಿದೆ. ಪಕ್ಷ ಸಂಘಟನೆಗೆ ರಾಜ್ಯವ್ಯಾಪಿ ಪಾದಯಾತ್ರೆ, ಸಮಾವೇಶಗಳು, ಉಪವಾಸಗಳನ್ನು ನಡೆಸುತ್ತಾ ಬಂದಿದ್ದ ಶ್ರೀರಾಮುಲು ಆಕರ್ಷಿಸುತ್ತಿದ್ದ ಜನರತ ಮತಗಳನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ. ಮತದಾರರು ಬಿಎಸ್ಸಾರ್ ಪಕ್ಷವನ್ನು ಗಂಭೀರವಾಗಿ ಪರಿಗಣಿಸದಂತೇ ಕಾಣುವುದಿಲ್ಲ.

ಅಕ್ರಮ ಗಣಿಗಾರಿಕೆಯ ಖಳನಾಯಕ ಜನಾರ್ಧನರೆಡ್ಡಿ ಚುನಾವಣೆ ವೇಳೆಗೆ ಜೈಲಿನಿಂದ ಹೊರಬಂರುತ್ತಾನೆಂಬ ನಿರೀ-ಕ್ಷೆ ಹುಸಿಯಾಯಿತು. ಜಿಲ್ಲಾಡಳಿತದ ಬಿಗಿ ವ್ಯವಸ್ಥೆಯಿಂದ ಚುನಾವಣಾ ವೆಚ್ಚಕ್ಕೆ ಹಣದ ಮೂಲವೇ ಬತ್ತಿ ಹೋಗುವಂತಾಯಿತು. ಬಿಜೆಪಿ ಟಿಕೇಟ್‌ನೊಂದಿಗೆ ಸ್ಫರ್ಧಿಸಿದ್ದ ಕರುಣಾಕರ ರೆಡ್ಡಿ ಹರಪ್ಪನಹಳ್ಳಿ ಕ್ಷೇತ್ರದಲ್ಲಿ ಸೋಲುವಂತಾಯಿತು. ಸೋಮಶೇಖರರೆಡ್ಡಿ ಚುನಾವಣಾ ಕಣಕ್ಕೆ ಇಳಿಯಲೇ ಇಲ್ಲ. 30 ಸ್ಥಾನಗಳ ನಿರೀಕ್ಷೆಯಲ್ಲಿದ್ದ ಶ್ರೀರಾಮುಲು ಕೇವಲ 4ಸ್ಥಾನಗಳನ್ನು ಗಳಿಸಿ ತೀವ್ರ ಮುಖಭಂಗ ಅನುಭವಿಸುವಂತಾಯಿತು. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಮೂರು ಸ್ಥಾನಗಳನ್ನು ಗೆಲ್ಲುವ ಮೂಲಕ (ಪಕ್ಷೇತರರಾಗಿ ಗೆದ್ದ ಕೂಡ್ಲಿಗಿ ಕ್ಷೇತ್ರವೂ ಸೇರಿದಂತೆ) ರೆಡ್ಡಿ ಸಹೋದರರು ಜಿಲ್ಲೆಯಲ್ಲಿ ಹಿಡಿತವನ್ನು ಉಳಿಸಿಕೊಂಡಿದ್ದಾರೆ.

ಎಸ್.ಡಿ.ಪಿ.ಐ.ನ ಆತಂಕಕಾರಿ ಮುನ್ನಡೆ :

ಸೋಶಿಯಲ್ ಡೆಮಾಕ್ರಾಟಿಕ್ ಪಾರ್ಟಿ ಆಪ್ ಇಂಡಿಯಾ ಹೆಸರಿನಲ್ಲಿ ಮುಸ್ಲಿಂ ಯುವಕರ ನಡುವೆ ಆಕ್ರಮಣಕಾರಿ ಪ್ರವೃತ್ತಿಯನ್ನು ಬೆಳೆಸುತ್ತಿರುವ ತೀವ್ರ ಬಲಪಂಥೀಯ ಪಕ್ಷ ಈ ಬಾರಿಯ ಚುನಾವಣೆಯಲ್ಲಿ 25 ಸ್ಥಾನಗಳಲ್ಲಿ ಸ್ಪರ್ಧೆಮಾಡಿ ಸುಮಾರು ಒಂದು ಲಕ್ಷ ಮತಗಳನ್ನು ಪಡೆದಿರುವುದು, ಅಲ್ಲದೆ ಮೈಸೂರು ಜಿಲ್ಲೆಯ ನರಸಿಂಹರಾಜ ಕ್ಷೇತ್ರದಲ್ಲಿ ಅದರ ಅಭ್ಯರ್ಥಿ 29, 667 ಮತಗಳನ್ನು ಪಡೆದು ಎರಡನೇ ಸ್ಥಾನ ಪಡೆದಿರುವುದು ಆತಂಕದ ಸಂಗತಿಯಾಗಿದೆ. ಎಸ್.ಡಿ.ಪಿ.ಐ ಮುಸ್ಲಿಂಮರ ನಡುವೆ ಬಿಜೆಪಿಯ ಪ್ರತಿರೂಪವಾಗಿದ್ದು ಮುಸಲ್ಮಾನರಲ್ಲಿ ಹಿಂದುಗಳ ವಿರುದ್ಧ ದೌರ್ಜನ್ಯಕ್ಕೆ ಕುಮ್ಮಕ್ಕುಕೊಡುತ್ತಿದೆ. ರಾಜ್ಯದ ಕೆಲವು ನಕ್ಷಲೀಯರ ಪರ ಬುದ್ಧಿಜೀವಿಗಳ ಬೆಂಬಲವೂ ಅದಕ್ಕಿದೆ. ದ.ಕ. ಜಿಲ್ಲೆಯಲ್ಲಿ ಇದರ ಬೆಳವಣಿಗೆಯಿಂದಾಗಿ ಮುಸ್ಲಿಂ ಯುವಕರು ಕಮ್ಯೂನಿಸ್ಟ್ ಚಳುವಳಿಗೆ ಆಕರ್ಷಿತರಾಗಿ ಬರುವುದು ಕಮ್ಮಿಯಾಗುತ್ತಿದೆ. ತಮ್ಮ ತಮ್ಮ ಗುರಿಸಾಧನೆಗಾಗಿ ಎಸ್‌ಡಿಪಿಐ ಮತ್ತು ಆರೆಸ್ಸೆಸ್ ಶಕ್ತಿಗಳು ಗುಟ್ಟಾಗಿ ಕೈಜೋಡಿಸಿ ಕಾರ್ಯನಿರ್ವಹಿಸುತ್ತದೆ ಎಂಬ ಗುಮಾನಿಯೂ ಇದೆ. ಕೋಮು ಸೌಹಾರ್ದತೆಯನ್ನು ನಾಶಮಾಡುವಲ್ಲಿ ಆರೆಸ್ಸೆಸ್ ಯಾವ ಪಾತ್ರವನ್ನು ನಿರ್ವಹಿಸುತ್ತಿದೆಯೋ ಅದೇ ಪಾತ್ರವನ್ನು ಎಸ್‌ಡಿಪಿಐ ಮುಸಲ್ಮಾನರ ನಡುವೆ ನಿರ್ವಹಿಸುತ್ತದೆ. ಮುಸ್ಲಿಂಮರು ದೊಡ್ಡ ಸಂಖ್ಯೆಯಲ್ಲಿರುವ ಕ್ಷೇತ್ರಗಳಲ್ಲಿ ಅದು ತನ್ನ ಅಭ್ಯರ್ಥಿಗಳನ್ನು ಈ ಬಾರಿ ಕಣಕ್ಕಿಳಿಸಿತ್ತು. ಈ ವಿದ್ಯಾಮಾನವನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಜಾತಿ ಲೆಕ್ಕಾಚಾರ :

ಈ ಚುನಾವಣೆಯಲ್ಲಿಯೂ ಜಾತಿ ಲೆಕ್ಕಾಚಾರ ಪ್ರಮುಖ ಪಾತ್ರ ವಹಿಸಿದೆ. ಕಾಂಗ್ರೆಸ್ ಹಿಂದುಳಿದ, ದಲಿತ ಮತ್ತು ಅಲ್ಪಸಂಖ್ಯಾತರ ಮತಗಳನ್ನು ಗರಿಷ್ಠ ಪ್ರಮಾಣದಲ್ಲಿ ಸೆಳೆಯಲು ವ್ಯವಸ್ಥಿತವಾಗಿ ಪ್ರಯತ್ನ ಪಟ್ಟಿದೆ. ಕಾಂಗ್ರೆಸ್‌ನಿಂದ ದೂರ ಸರಿದಿದ್ದ ಲಿಂಗಾಯಿತರನ್ನು ಮರಳಿ ಕಾಂಗ್ರೆಸಿಗೆ ಕರೆತರಲು ವಿಶೇಷ ಪ್ರಯತ್ನ ಮಾಡಲಾಯಿತು. ಭೂ ಮಾಲಿಕರಾಗಿರುವ ಲಿಂಗಾಯಿತರು ಪಾರಂಪರಿಕವಾಗಿ ಕಾಂಗ್ರೆಸ್ ಬೆಂಬಲಿಗರೇ ಆಗಿದ್ದವರು, 1990 ರಲ್ಲಿ ಮುಖ್ಯಮಂತ್ರಿ ವಿರೇಂದ್ರ ಪಾಟೀಲರನ್ನು ಏಕಾಏಕಿಯಾಗಿ ಆ ಸ್ಥಾನದಿಂದ ಪದಚ್ಯುತಗೊಳಿಸಿದ ಕಾಂಗ್ರೆಸ್ ಹೈಕಮಾಂಡ್ ಕ್ರಮವನ್ನು ವಿರೋಧಿಸಿ ಲಿಂಗಾಯಿತರು ಕಾಂಗ್ರೆಸ್‌ನಿಂದ ದೂರ ಸರಿದಿದ್ದರು.

ಈ ನಡುವೆ ಜನತಾ ದಳದ ಮುಖಂಡ ಲಿಂಗಾಯತ ಸಮುದಾಯಕ್ಕೆ ಸೇರಿದ ಜೆ.ಹೆಚ್. ಪಟೇಲ್‌ರನ್ನು ಮುಖ್ಯಮಂತ್ರಿ ಮಾಡಲು ಇದೇ ಸಮುದಾಯ ಕೈಜೋಡಿಸಿತ್ತು. ಕೊನೆಗೆ, ಯಡಿಯೂರಪ್ಪನ ತಮ್ಮ ಜನಾಂಗಕ್ಕೊಬ್ಬ ಮುಖಂಡನನ್ನು ಗುರುತಿಸಿದ ಅವರು ಬಿಜೆಪಿಯನ್ನು ಅಧಿಕಾರಕ್ಕೆ ತಂದು ಯಡಿಯೂರಪ್ಪನವರನ್ನು ಮುಖ್ಯಮಂತ್ರಿಯನ್ನಾಗಿಯೂ ಮಾಡಿದರು. ರಾಜ್ಯದ ಜನಸಂಖ್ಯೆಯ ಶೇಕಡ 21 ರಷ್ಟಿರುವ ಲಿಂಗಾಯತರನ್ನು ದೂರವಿಟ್ಟು ರಾಜ್ಯದಲ್ಲಿ ಅಧಿಕಾರಕ್ಕೆ ಬರಲಾಗದು ಎಂದು ಕಾಂಗ್ರೆಸ್ಸಿಗರು ಅರ್ಥಮಾಡಿಕೊಂಡಿದ್ದರು. ಯಡಿಯೂರಪ್ಪ ಅಧಃಪತನದಿಂದ ರಾಜ್ಯದ ಲಿಂಗಾಯತರು ಗೊಂದಲಕ್ಕಿಡಾಗಿರುವುದನ್ನು ಗಮನಿಸಿದ ಕಾಂಗ್ರೆಸ್ಸಿಗರು ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿಯವರನ್ನು 1012 ರ ಎಪ್ರಿಲ್ ತಿಂಗಳಲ್ಲೆ ತುಮಕೂರಿನ ಸಿದ್ಧಗಂಗಾ ಮಠಕ್ಕೆ ಕರೆತಂದು ಲಿಂಗಾಯತರು ಕಾಂಗ್ರೆಸ್‌ನಿಂದ ಅವಮಾನಕ್ಕೀಡಾದ ಕಹಿ ಘಟನೆಗ ತೆರೆ ಎಳೆಯುವ ಪ್ರಯತ್ನ ಮಾಡಿದ ಹೀಗೆ ಬಿಜೆಪಿಯಲ್ಲಿ ಉಳಿಯಲಾಗದ, ಕೆಜೆಪಿಗೆ ಹೋಗಲು ಒಪ್ಪದ ಲಿಂಗಾಯತರ ಗಣನೀಯ ಮತಗಳನ್ನು ಕಾಂಗ್ರೆಸ್ ತನ್ನತ್ತ ಸೆಳೆಯಲು ಯಶಸ್ವಿಯಾಯಿತು.

ಈ ಹಿನ್ನೆಲೆಯಲ್ಲಿ ಈ ಬಾರಿ ಲಿಂಗಾಯತರ ಮತಗಳು ವಿಭಜನೆಯಾದವು. ಕಾಂಗ್ರೆಸ್, ಬಿಜೆಪಿ ಮತ್ತು ಕೆಜೆಪಿ ನಡುವೆ ಲಿಂಗಾಯತ ಮತಗಳು ಹಂಚಿಹೋದದ್ದರಿಂದ ಬಿಜೆಪಿ, ಕೆಜೆಪಿ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಲು ಸಾಧ್ಯವಾಗಲಿಲ್ಲ. ಯಡಿಯೂರಪ್ಪ ಈ ಪರಿಸ್ಥಿತಿಯನ್ನು ಮೊದಲೇ ಊಹಿಸಿದಂತಿತ್ತು. ಆದ್ದರಿಂದಲೇ ಅವರು ಮುಸ್ಲಿಂ ಹಾಗೂ ಇತರ ಸಮುದಾಯಗಳನ್ನು ಸೆಳೆಯಲು ಪ್ರಯತ್ನಪಟ್ಟಿದ್ದರು.

ಜೆಡಿಎಸ್ ಇತರ ಸಮುದಾಯಗಳ ನಡುವೆ ಪ್ರಭಾವವನ್ನು ಬೆಳೆಸಲು ಪ್ರ ಪಡುತ್ತಿರುವಾಗಲೇ ಒಕ್ಕಲಿಗರ ನಡುವಿನ ತನ್ನ ನೆಲೆಯನ್ನು ಗಟ್ಟಿಗೊಳಿಸಲು ಮರೆಯಲಿಲ್ಲ. ಹೀಗಾಗಿ ಮೈಸೂರು ಪ್ರಾಂತ್ಯದಲ್ಲಿ ಒಕ್ಕಲಿಗರು ಜೆಡಿಎಸ್ ಪಕ್ಷವನ್ನು ಬಲವಾಗಿ ಬೆಂಬಲಿಸಿದರು. ಕಾಂಗ್ರೆಸ್ ಪಕ್ಷದ ಒಕ್ಕಲಿಗ ನಾಯಕರನ್ನೂ ಅವರು ಬೆಂಬಲಿಸದೆ ಇರಲಿಲ್ಲ.

ದಲಿತ ಸಮುದಾಯದ ಮತದಾರರೂ ಸಹ ಪಕ್ಷ ಭೇದವನ್ನು ಬದಿಗಿಟ್ಟು ತಮ್ಮ ಪಂಗಡ, ಒಳಪಂಗಡದ ಅಭ್ಯರ್ಥಿಗಳನ್ನು ಗೆಲ್ಲಿಸಲು ಪ್ರಯತ್ನಿಪಟ್ಟಿರುವುದು ಗುಟ್ಟಿನ ವಿಷಯ ಆಗಿರಲಿಲ್ಲ.

ರಾಜ್ಯದಲ್ಲಿ ಕೋಮುವಾದಿ ಬಿಜೆಪಿ ಸೋತಿರಬಹುದು ಆದರೆ ಅದು ನಿರ್ನಾಮ ಆಗಿಲ್ಲ. ಲೋಕಸಭಾ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಕೋಮುವಾದಿ ಶಕ್ತಿಗಳು ಹೆಡೆ ಎತ್ತಲು ಪ್ರಯತ್ನಿಸದೆ ಇರಲಾರವು. ಕೋಮುವಾದದ ವಿರುದ್ಧ ಹಾಗೂ ಎಸ್‌ಡಿಪಿಐ ಅಂತಹ ಅಲ್ಪಸಂಖ್ಯಾತ ಆಕ್ರಮಣಕಾರಿ ಸಂಘಟನೆಗಳ ವಿರುದ್ಧ ಸೈದ್ಧಾಂತಿಕ ಹಾಗೂ ಪ್ರತ್ಯಕ್ಷ ಹೋರಾಟಗಳನ್ನು ಮುಂದುವರೆಸಬೇಕು.

ಹೌರಾ– ಲೋಕಸಭಾ ಕ್ಷೇತ್ರ ಉಪಚುನಾವಣೆ: ಸಿಪಿಐ(ಎಂ) ಪ್ರಚಾರಕ್ಕೆ ಅಡ್ಡಿ–ಆಯೋಗಕ್ಕೆ ದೂರು

ಪಶ್ಚಿಮ ಬಂಗಾಳದ ಹೌರಾ ಲೋಕಸಭಾ ಕ್ಷೇತ್ರಕ್ಕೆ ನಡೆಯುತ್ತಿರುವ ಉಪಚುನಾವಣೆಯನ್ನು ಶಾಂತಿಯುತ, ಮುಕ್ತ ವಾತಾವರಣದಲ್ಲಿ ನಡೆಸುವಂತೆ ಚುನಾವಣಾ ಆಯೋಗಕ್ಕೆ ಸಿಪಿಐ(ಎಂ) ಒತ್ತಾಯಿಸಿದೆ. ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರು ಕ್ಷೇತ್ರದಲ್ಲಿ ಭಯಗ್ರಸ್ತ, ಭೀತಿಯ ವಾತಾವರಣ ಉಂಟು ಮಾಡುತ್ತಿರುವ ಕಡೆಗೆ ಚುನಾವಣಾ ಆಯೋಗದ ಗಮನ ಸೆಳೆದಿರುವ ಸಿಪಿಐ(ಎಂ) ಕ್ಷೇತ್ರದಲ್ಲಿ ಶಾಂತಿಯುತ ಚುನಾವಣೆ ನಡೆಸುವಂತೆ ಒತ್ತಾಯಿಸಿ ಆಯೋಗಕ್ಕೆ ಮನವಿ ಸಲ್ಲಿಸಿದೆ.

ಜೂನ್ 2ರಂದು ಮತದಾನ ನಡೆಯುತ್ತಿದೆ. ಆದರೆ ಕ್ಷೇತ್ರದ ಹಲವು ಪ್ರದೇಶಗಳಲ್ಲಿ ಎಡಪಕ್ಷದ ಅಭ್ಯರ್ಥಿ ಶ್ರೀದೀಪ್ ಭಟ್ಟಾಚಾರ್ಯ ಚುನಾವಣಾ ಪ್ರಚಾರ ನಡೆಸಲು ತೃಣಮೂಲ ಕಾಂಗ್ರೆಸ್ ಗೂಂಡಾಗಳು ಅಡ್ಡಿ ಪಡಿಸುತ್ತಿದ್ದಾರೆ. ಪಕ್ಷದ ಬ್ಯಾನರ್‌ಗಳನ್ನು ಹರಿದುಹಾಕಲು, ಗೋಡೆಬರಹ ವಿಕೃತಿಗೊಳಿಸಲು ಟಿಎಂಸಿ ಗೂಂಡಾಗಳನ್ನು ಬಿಟ್ಟಿದೆ. ಇಡೀ ವಾತಾವರಣವನ್ನು ಭೀತಿಗೊಳಿಸಲು ಗೂಂಡಾಗಳು ಸಿಪಿಐ(ಎಂ) ಕಾರ್ಯಕರ್ತರ ಹಾಗೂ ಬೆಂಗಲಿಗರ ಮನೆ ಮನೆಗೂ ತೆರಳಿ ಅವರನ್ನು ಬೆದರಿಸುವ ಕೆಲಸ ಮಾಡತೊಡಗಿದ್ದಾರೆ.



ಬ್ಯಾಲಿ ಕ್ಷೇತ್ರದಲ್ಲಿ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ಸಾಧ್ಯವಿಲ್ಲ ಎಂಬಂಥ ವಾತಾವರಣ ಮೂಡಿದ್ದು, ಜನರು ಭಯಭೀತಗೊಂಡಿದ್ದಾರೆ ಎಂದು ಸಿಪಿಐ(ಎಂ) ಚುನಾವಣಾ ಆಯೋಗಕ್ಕೆ ನೀಡಿರುವ ದೂರಿನಲ್ಲಿ ಹೇಳಿದೆ. ಟಿಎಂಸಿ ಇಲ್ಲಿ ಸಿಪಿಐ(ಎಂ)ನ ಒಂದೇ ಒಂದು ಸಭೆ ನಡೆಸಲು ಕೂಡ ಬಿಟ್ಟಿಲ್ಲ.

ಲೋಕಸಭಾ ಕ್ಷೇತ್ರದ 1812 ಬೂತ್‌ಗಳಲ್ಲಿ 1320 ಬೂತ್‌ಗಳು ಸೂಕ್ಷ್ಮ ಇಲ್ಲವೇ ಅತಿ ಸೂಕ್ಷ್ಮ ಮತದಾನ ಕೇಂದ್ರಗಳಾಗಿವೆ. ಬ್ಯಾಲಿ ಮತ್ತು ಹೌರಾ ವಿಧಾನಸಭಾ ಕ್ಷೇತ್ರದ ಬಹುತೇಕ ಎಲ್ಲ ಮತದಾನ ಕೇಂದ್ರಗಳು ಅತಿ ಸೂಕ್ಷ್ಮ ಕೇಂದ್ರಗಳಾಗಿವೆ. ಈ ಸನ್ನಿವೇಷವನ್ನು ಆಯೋಗ ಗಂಭೀರವಾಗಿ ಪರಿಗಣಿಸಬೇಕು ಹಾಗೂ ಶಾಂತಿಯುತ, ಮುಕ್ತದಾನ ಚುನಾವಣೆಗೆ ಅವಕಾಶ ಮಾಡಿಕೊಡುವಂತೆ ಎಡರಂಗದ ಅಧ್ಯಕ್ಷ ಬಿಮನ್ ಬಸು ಒತ್ತಾಯಿಸಿದ್ದಾರೆ.

ಇಷ್ಟೆಲ್ಲ ತಡೆಗಳ ನಡುವೆಯೂ, ಅಭ್ಯರ್ಥಿ ಪಾದಯಾತ್ರೆ, ಮತದಾರರೊಂದಿಗೆ ಮುಖಾಮುಖಿ ಚರ್ಚೆ ಹೊರತುಪಡಿಸಿ ಎಡಪಕ್ಷಗಳು ಮನೆ ಮನೆ ಪ್ರಚಾರ ಮುಗಿಸಿವೆ. ಬಡ ವರ್ಗದವರಲ್ಲಿ ತೃಣಮೂಲ ಸರ್ಕಾರದ ಆಡಳಿತದ ವಿರುದ್ಧ ಅತೃಪ್ತಿ ಎದ್ದು ಕಾಣುತ್ತಿದೆ.

ಹೌರಾದ ಜನಪ್ರಿಯ ಬೆಂಗಾಲ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದಾಗಲಿಂದಲೂ ಸಿಪಿಐ(ಎಂ) ಅಭ್ಯರ್ಥಿ ಶ್ರೀದೀಪ್ ಭಟ್ಟಾಚಾರ್ಯ ಜನಪರ ಹೋರಾಟಗಳು ಹಾಗೂ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು. ಎಸ್‌ಎಫ್‌ಐ ರಾಜ್ಯ ಮುಖಂಡರು ಅಲ್ಲದೇ ರಾಜ್ಯದ ವಿಜ್ಞಾನ ಆಂದೋಲನದ ಕೇಂದ್ರ ವ್ಯಕ್ತಿಯಾಗಿಯೂ ಅವರು ಗುರುಸಿಕೊಂಡಿದ್ದರು.

ಸದ್ಯ, ಹೌರಾ ಸಿಪಿಐ(ಎಂ) ಜಿಲ್ಲಾ ಘಟಕದ ಕಾರ್ಯದರ್ಶಿಯಾಗಿರುವ ಶ್ರೀದೀಪ್ ಕಾರ್ಮಿಕರ ನಡುವೆ ಜನಾನುರಾಗಿ ನಾಯಕರಾಗಿದ್ದಾರೆ.

ನೇರ ನಗದು! ಅಲ್ಲಲ್ಲ,...

ಪುಟ 3 ರಿಂದ

ಮೊದಲನೆಯದಾಗಿ, ಗ್ರಾಹಕರು ಮಾರುಕಟ್ಟೆ ಧರವನ್ನು ನೀಡಬೇಕು ಎಂದರೆ ಎಷ್ಟೇ ಏರಿಕೆಯಾದರೂ ಪೆಟ್ರೋಲ್, ಡಿಸೆಲ್ ಗಳಂತೆ ಹೆಚ್ಚಿನ ಧರವನ್ನು ಕೊಡಲೇ ಬೇಕು. ಅದರ ಹೊರೆ ಜನರ ತಲೆ ಮೇಲೆಯೇ. ಇಲ್ಲಿ ಆಡಳಿತಾತ್ಮಕ ಸಮಸ್ಯೆಗಳೂ ಅನೇಕಾನೇಕ. ಯಾಕೆಂದರೆ ಸರಕಾರ ನೇರ ನಗದು ವರ್ಗಾವಣೆಯ ವ್ಯಾಪ್ತಿಗೆ ಇದೀಗ ಪಡಿತರ ರೇಷನ್, ಪೆನ್ಷನ್, ಸ್ಕಾಲರ್ ಶಿಪ್, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಸಾಮಾಜಿಕ ಕಲ್ಯಾಣ ಯೋಜನೆಗಳಂತಹ ಒಟ್ಟು 29 ಸ್ಕೀಮುಗಳನ್ನು ಈ ಹಂತದಲ್ಲಿ ತರುತ್ತಿದೆ. ಒಟ್ಟು 42 ನ್ನೂ ತರುವ ಯೋಜನೆಯನ್ನು ಕೇಂದ್ರ ಸರಕಾರ ಇರಿಸಿದೆ. ಇಂತಹವರಿಗೆ ಬ್ಯಾಂಕ್ ಅಕೌಂಟ್ ಅನಿವಾರ್ಯ. ಆದರೆ ನಮ್ಮ ಗ್ರಾಮೀಣ ಪ್ರದೇಶಗಳನ್ನೂ ಒಳಗೊಂಡು ಕೋಟ್ಯಾಂತರ ಜನರಿಗೆ ಅಂತಹ ಅಕೌಂಟ್ ಇಲ್ಲ. ಅಕೌಂಟ್ ತೆಗೆಯುವುದು ಬಡ, ಸಾಮಾನ್ಯ ಜನರಿಗೆ ಅಸಾಧ್ಯವೇ ಆಗಿದೆ. ಬಿಪಿಎಲ್. ಕುಟುಂಬಗಳಿಗೆ ಖಾತೆ ಇರುವುದೇ ಇಲ್ಲ. ಮೇಲಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕ್ ಗಳೂ ವಿರಳ. ನಮ್ಮ ಗ್ರಾಹಕರ ಪ್ರಮಾಣಕ್ಕೆ ಹೋಲಿಸಿದರೆ ವಹಿವಾಟು ಒತ್ತಡ ಬ್ಯಾಂಕ್ ಗಳ ಮೇಲೆ ನೂರಾರು ಪಟ್ಟು ಹೆಚ್ಚಲಿದೆ. ಮಾತ್ರವಲ್ಲ ಈ ಸೌಲಭ್ಯ ಪಡೆಯಲು ಆದಾರ್ ಕಾರ್ಡ್ ಕಡ್ಡಾಯಗೊಳಿಸಲಾಗಿದೆ. ಆದರೆ ಈ ಕಾರ್ಡ್ ಸಿಕ್ಕಿರುವುದು ಅತ್ಯಲ್ಪ ಮಾತ್ರ. ಅದರ ವ್ಯಾಪ್ತಿಯಿಂದ ಹೊರಗುಳಿದಿರುವವರೇ ಅತ್ಯಧಿಕ. ಉದಾಹರಣೆಗೆ: ತುಮಕೂರು ಜಿಲ್ಲೆಯಲ್ಲೇ ಗ್ಯಾಸ್ ಬಳಕೆ ಗ್ರಾಹಕರು 2 ಲಕ್ಷದ 58 ಸಾವಿರ. ಆದರೆ ಆದಾರ್ ಇರುವವರು 1 ಲಕ್ಷ 40 ಸಾವಿರದ,104 . ಉಳಿದವರ ಗತಿ?

ಒಂದೆಡೆ ಫಲ ಪಡೆಯಲು ಮೂಲ ಅಗತ್ಯಗಳಿಲ್ಲದೇ ಪರದಾಟ. ಮತ್ತೊಂದೆಡೆಯಲ್ಲಿ' ವಾಸ್ತವದಲ್ಲಿ ಬೆಲೆಏರಿಕೆ ದಿನಗಳಲ್ಲಿ ಹೊರೆ ಇನ್ನಷ್ಟೂ ಗ್ರಾಹಕರ ಮೇಲೆ ಹೆಚ್ಚುತ್ತಾ ಒಂದು ದಿನ ಸಬ್ಸಿಡಿಯೇ ನಿಂತು ಹೋಗುವುದು ಅದರ ಉದ್ದೇಶ. ಈಗಂತೂ ಯೋಜನೆಯಿಂದ ಪಿಂಚಣಿದಾರರು, ಸ್ಕಾಲರ್ ಶಿಪ್ ಪಡೆಯುವವರು, ಇತರೆ ಯೋಜನೆಗಳ ಫಲಾನುಭವಿಗಳ ಪಡಿಪಾಟಲು ನೋಡಿದರೆ ಸಾಕು .ಇದು ಎಂತಹ ಯಾತನೆಯ ಸ್ಕೀಮು ಎಂದು ತಿಳಿಯುವುದು. ಹಲವಾರು ತಿಂಗಳು ಕಳೆದರೂ ಹಣವೇ ಖಾತೆಗೆ ಜಮಾ ಆಗದೇ ಓಡಾಡುತ್ತಲೇ ಇರಬೇಕಾಗಿದೆ. ಸರಕಾರವೇ ಒಂದೆಡೆ ಅಂದಾಜಿಸಿದಂತೆ ತನಗೆ ಈ ಯೋಜನೆ ಜಾರಿಯಿಂದ 8 ರಿಂದ 10 ಸಾವಿರ ಕೋಟಿ ರೂಪಾಯಿಗಳ ಉಳಿತಾಯವಾಗಲಿದೆಯಂತೆ! ಆದರೆ ಜನಸಾಮಾನ್ಯರಿಗೆ ಆಗಲಿರುವ ಸುಲಿಗೆಯ ಹೊರೆ ಲಕ್ಷಾಂತರ ಕೋಟಿ! ಕಾರ್ಪೋರೇಟ್ ಕಂಪನಿಗಳಿಗೆ 5.5 ಲಕ ಕೋಟಿಗೂ ಅಧಿಕ ಹಣ ರಿಯಾಯಿತಿನೀಡಿದ್ದೂ ಸಾಲದೆಂದೆ ಈ ಲೂಟಿಯೇ?

ಉದಾರೀಕರಣದ ನೀತಿಗಳನ್ನು ಜಾರಿಗೊಳಿಸುತ್ತಿರುವ ಕಾಂಗ್ರೆಸ್ ಸರಕಾರ ವಿಶ್ವ ಹಣಕಾಸು ಸಂಸ್ಥೆಗಳ ಸಾಲ ಶರತ್ತುಗಳಂತೆ ಜನಸಾಮಾನ್ಯರ ಅತ್ಯಗತ್ಯಗಳಿಗೆ ನೀಡುವ ಸಬ್ಸಿಡಿಯನ್ನು ರದ್ದು ಪಡಿಸಬೇಕೆಂದು ಕೈಗೊಂಡ ನಿರ್ಧಾರದ ಫಲವಿದು.


ಇಂತಹುದೇ ನೀತಿಗಳನ್ನು ಲ್ಯಾಟೀನ್ ಅಮೇರಿಕಾದ ಕೆಲವು ದೇಶಗಳಲ್ಲಿ ಜಾರಿಗೆ ತರಲಾಗಿದೆ. ಅಲ್ಲಿ ನೇರ ನಗದು ವರ್ಗಾವಣೆ ಯನ್ನು ಬಡ ಮಹಿಳೆಯ ಹೆಸರಿಗೆ ಮಾಡಲಾಗುವುದು. ಮಕ್ಕಳು ಶಾಲೆಗೆ ಹೋಗಬೇಕೆಂಬ, ಕುಟುಂಬದ ಆರೋಗ್ಯದ ರಕ್ಷಣೆಯ ಹಾಗೂ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಬೇಕೆಂಬಂತಹ ಶರತ್ತುಗಳನ್ನು ವಿಧಿಸಲಾಗಿದೆ. ನೋಡಲೇನು ಇವು ಆಕರ್ಷಕವಾಗಿ ಕಾಣಬಹುದು. ಆದರೆ ಇವೇ ಕಾರಣ ಬಳಸಿ ನೀಡುತ್ತಿದ್ದ ಹಣಕ್ಕೆ ತಡೆಯನ್ನೂ ಹಾಕಬಹುದು.ಇಲ್ಲಿ ಸೌಲಭ್ಯಗಳು ಅವರ ಹಕ್ಕು ಎಂಬುದರ ಬದಲಿಗೆ ಭಿಕ್ಷೆ ಎಂಬ ಧೋರಣೆ ಕಾಣುತ್ತದೆ. ಉದಾರೀಕರಣದ ನೀತಿಗಳಿಂದ ಆ ದೇಶಗಳನ್ನು ಪುಟ್ಟಾಪೂರಾ ಸುಲಿದ ಅಮೇರಿಕಾದಂತಹ ಸಾಮ್ರಾಜ್ಯಶಾಹೀ ದೇಶಗಳು ಇದೀಗ ಭಾರತವನ್ನೂ ಅದೇ ಅವನತಿ ಹಾದಿಗೆ ತಳ್ಳುತ್ತಿವೆ.ಸದ್ಯಕ್ಕಂತೂ ನಮ್ಮ ದೇಶದಲ್ಲಿ ಶರತ್ತು ಹಾಕಿಲ್ಲ. ಆದರೆ ಒಂದು ನಿಯಂತ್ರಣಕ್ಕೆ ಜನ ಬಂದಾದ ಮೇಲೆ ಹಾಕಲಾರದೆಯೂ ಇರುವುದಿಲ್ಲ.

ಈ ನೇರ ನಗದು ವರ್ಗಾವಣೆಯು ಈ ವರುಷದ ಕೊನೆಯೊಳಗೆ ಎಲ್ಲಾ ಜಿಲ್ಲೆಗಳಿಗೂ ತರುವ ನಿರ್ಧಾರವನ್ನು ಚಿದಂಬರಂ ಪ್ರಕಟಿಸಿದ್ದಾರೆ. ಯೋಜನೆಯ ರಾಜಕೀಯ ಪರಿಣಾಮಗಳನ್ನು ಅಧ್ಯಯನ ಮಾಡಿರುವ ವಿಶ್ವಬ್ಯಾಂಕ್ ಅಧಿಕಾರದಲ್ಲಿರುವ ಪಕ್ಷದತ್ತ ಜನರ ಅಭಿಮತ ಹೆಚ್ಚಿರುತ್ತದೆ ಎಂದು ಹೇಳಿರುವುದೂ ಅವರಿಗೆ ಸ್ಫೂರ್ತಿಯೇ? ಸಬ್ಸಿಡಿಯ ಅನುಕೂಲಗಳ ಬದಲು ಚುನಾವಣೆಯ ಮುಂಗಡದಲ್ಲಿಯೇ ಮನಮೋಹನ, ಚಿದಂಬರಿಗೆ ನಂಬಿಕೆಯೇ?!

ರಾಜ್ಯದಲ್ಲಿ ಈ ನೀತಿಗಳನ್ನು ಜಾರಿಗೆ ತರಬಾರದು. ಈ ಬಗ್ಗೆ ರಾಜ್ಯ ಸರಕಾರ ತನ್ನದೇ ತೀರ್ಮಾನ ಕೈಗೊಳ್ಳಬಹುದೆಂಬ ಅವಕಾಶವಿದೆ. ಅದರತ್ತ ಈ ಸರಕಾರ ಕ್ರಮವಹಿಸಬೇಕು. ಬಡವರ, ಕೋಟ್ಯಾಂತರ ಜನ ಸಾಮಾನ್ಯರ ಬದುಕಿನ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಬೇಕು.

ಸಿಪಿಐ(ಎಂ) ಶಾಸಕ ಅಜಿತ್ ಸರ್ಕಾರ ಹತ್ಯೆ: ಪಪ್ಪು ಯಾದವ್ ಖುಲಾಸೆ ನ್ಯಾಯದ ಅಣಕ

ಅಂದು ಜೂನ್ 14, 1998. ಬಿಹಾರ ವಿಧಾನಸಭಾ ಸದಸ್ಯ ಹಾಗೂ ಸಿಪಿಐ(ಎಂ)



ಅಜಿತ್ ...

ನಾಯಕರಾಗಿದ್ದ ಅಜಿತ್ ಸರ್ಕಾರ್ ಬರ್ಬರವಾಗಿ ಹತ್ಯೆಯಾದಾಗ ಇಡೀ ದೇಶವೇ ಬೆಚ್ಚಿ ಬಿದ್ದಿತ್ತು.

ಅಜಿತ್ ಸರ್ಕಾರ್ ಸಿಪಿಐ(ಎಂ)ನ ಪ್ರಭಾವಶಾಲಿ ಯುವ ನಾಯಕರಾಗಿದ್ದರು. ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ ಮೂಲಕ ಜನಪರ ಚಳುವಳಿ ಪ್ರವೇಶಿಸಿದ್ದ ಅವರು ನಂತರ ಸಿಪಿಐ(ಎಂ) ಪಕ್ಷದ ನಾಯಕರಾದರು. ಅವರು ಡಿವೈಎಫ್‌ಐನ ರಾಷ್ಟ್ರೀಯ ಮುಖಂಡರೂ ಆಗಿದ್ದರು. ಪೂರ್ಣಿಯಾ ವಿಧಾನಸಭಾ ಕ್ಷೇತ್ರದ ಮೂಲಕ 1980ರಲ್ಲಿ ಆಗಿನ ಪ್ರಭಾವಿ ನಾಯಕ ಶಾರದಾ ಪ್ರಸಾದ್ ಸಿಂಗ್ ಅವರನ್ನು ಸೋಲಿಸಿ ಶಾಸಕರಾದ ಅಜಿತ್ ಸರ್ಕಾರ್, 1985ರಲ್ಲಿ, 1990ರಲ್ಲಿ ಮತ್ತು 1995ರಲ್ಲಿ ಸತತವಾಗಿ ವಿಧಾನಸಭೆಗೆ ಪುನರಾಯ್ಕೆಗೊಂಡರು.

18 ವರ್ಷಗಳ ಕಾಲ ಶಾಸಕರಾಗಿ ಪೂರ್ಣಿಯಾ ಮಾತ್ರವಲ್ಲ ಬಿಹಾರದ ರೈತ–ಕಾರ್ಮಿಕರ ಪರ ಮತ್ತು ಜನರ ಪರ ಸದಾ ದನಿ ಎತ್ತುತ್ತಿದ್ದ ಅಜಿತ್ ಸರ್ಕಾರ್ ಅವರನ್ನು ಕುಖ್ಯಾತ ಕ್ರಿಮಿನಲ್ ರಾಜಕಾರಣಿ ಆರ್‌ಜೆಡಿ ಪಕ್ಷದ ಪಪ್ಪು ಯಾದವ್ ಬರ್ಬರವಾಗಿ ಗುಂಡಿಕ್ಕಿ ಹತ್ಯೆ ಮಾಡಿದ್ದ. ಅಜಿತ್ ಸರ್ಕಾರ್ ಜೊತೆ ಅವರ ಕಾರಿನ ಚಾಲಕ ಮತ್ತು ಸಿಪಿಐ(ಎಂ) ಕಾರ್ಯಕರ್ತರೊಬ್ಬರೂ ಬಲಿಯಾದರು.

1999ರಲ್ಲಿ ಪಪ್ಪು ಯಾದವ್ ಸೆರೆಯಾದ. ಆರಂಭದಲ್ಲಿ ಬಿಹಾರ ಪೋಲೀಸರು, ಬಳಿಕ ಸಿಬಿಐ ತನಿಖೆ ನಡೆಸಿ ಆತನನ್ನು ಸಿಕ್ಕಿಂನ ಬೇವೂರ್ ಜೈಲಿಗೆ ಹಾಕಲಾಯಿತು. ಅಲ್ಲಿಯೂ ಆತನ ದರ್ಪ ಮುಂದುವರಿದಿತ್ತು. ಜೈಲಿನಿಂದಲೇ ಸುಮಾರು 640 ಮೊಬೈಲ್ ಕರೆಗಳನ್ನು ಮಾಡಿದ್ದ. ಅವೆಲ್ಲವೂ ಬಿಹಾರದ ಗಣ್ಯರಿಗೆ ಮಾಡಿದ ಕರೆಗಳಾಗಿದ್ದವು.


ಪಪ್ಪು ಯಾದವ್

ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಆತನನ್ನು ತಿಹಾರ್ ಜೈಲಿಗೆ ಹಾಕಿ ಮೊಬೈಲ್ ಜಾಮರ್‌ನ್ನು ಹಾಕಲಾಗಿತ್ತು.

ಆದರೆ, ಆಘಾತಕಾರಿ ಬೆಳವಣಿಗೆಯೊಂದರಲ್ಲಿ ಪಾಟ್ನ ಹೈಕೋರ್ಟ್ ಸಾಕ್ಷ್ಯಗಳ ಕೊರತೆಯ ಕಾರಣ ನೀಡಿ ಎಲ್ಲ ಮೂರು ಮಂದಿ ಅಪರಾಧಿಗಳನ್ನೂ ಖುಲಾಸೆಗೊಳಿಸಿದೆ. ಸುಮಾರು 15 ವರ್ಷಗಳ ಹಿಂದಿನ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಪು ನೀಡಿದ ಪಾಟ್ನಾ ವಿಭಾಗೀಯ ಪೀಠ, ಪಪ್ಪು ಯಾದವ್ ಮತ್ತು ಇಬ್ಬರನ್ನು ಜೈಲಿನಿಂದ ಬಿಡುಗಡೆ ಮಾಡುವಂತೆ ಆದೇಶ ನೀಡಿದೆ.

ಈ ಬೆಳವಣಿಗೆಯ ಬಗ್ಗೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ವಿಷಾದ ವ್ಯಕ್ತಪಡಿಸಿವೆ. ಪಪ್ಪು ಯಾದವ್ ಬಿಡುಗಡೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮುಂದೆ ಅರ್ಜಿಯನ್ನು ಸಲ್ಲಿಸುವಂತೆ ಅವು ಸಿಬಿಐಗೆ ಆಗ್ರಹ ಮಾಡಿವೆ.

ಈ ತೀರ್ಪು ನ್ಯಾಯ ವ್ಯವಸ್ಥೆಗೆ ಮಾಡಿದ ಅಣಕ ಎಂದು ಬಣ್ಣಿಸಿರುವ ಸಿಪಿಐ(ಎಂ) ಪಾಲಿಟ್‌ಬ್ಯೂರೋ, ಕೆಳಸ್ತರದ ನ್ಯಾಯಾಲಯ ಈ ಪ್ರಕರಣದಲ್ಲಿ 'ಸಂಶಯಕ್ಕೆ ಅವಕಾಶವೇ ಇಲ್ಲದ ಸಾಕ್ಷ್ಯಾಧಾರ'ಗಳನ್ನು ಗುರುತಿಸಿತ್ತು. ಪಪ್ಪು ಯಾದವ್ ಆಜೀವ ಶಿಕ್ಷೆಗೆ ಗುರಿಯಾಗಿದ್ದ. ಹಲವಾರು ಸಂದರ್ಭಗಳಲ್ಲಿ ಈತನಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಲು ನಿರಾಕರಿಸಿತ್ತು. ಈಗ 'ಅನುಮಾನಗಳ ಲಾಭವನ್ನು ಆರೋಪಿಗಳಿಗೆ ನೀಡಿ' ಪಪ್ಪು ಯಾದವ್ ಮತ್ತಿಬ್ಬರು ಅಪರಾಧಿಗಳ ಬಿಡುಗಡೆಗೆ ಹೈಕೋರ್ಟ್ ಆದೇಶ ನೀಡಿದೆ. ಆದರೆ, ಇದನ್ನು ಸಿಬಿಐ ಗಂಭೀರವಾಗಿ ಪರಿಗಣಿಸಿ ತ್ವರಿತವಾಗಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು, ಈ ಪ್ರಕರಣದಲ್ಲಿ ನ್ಯಾಯವನ್ನು ನಿರಾಕರಿಸುವಂತೆ ಆಗಬಾರದು ಎಂದು ಸಿಪಿಐ(ಎಂ) ಸಿಬಿಐಯನ್ನು ಒತ್ತಾಯಿಸಿದೆ.

ಆಂಧ್ರ ಗಂಭೀರ ವಿದ್ಯುತ್ ಬಿಕ್ಕಟ್ಟು......

ಪುಟ 7 ರಿಂದ

ಸಾರ್ವಜನಿಕ ವಲಯದ ಒಎನ್‌ಜಿಸಿಯಂತಹ ಸರ್ಕಾರಿ ಸಂಸ್ಥೆಗಳು ಈ ಕ್ಷೇತ್ರಕ್ಕೆ ಬಾರದಂತೆ ತಡೆಯುತ್ತವೆ. ಅನಿಲ ಆ ಧಾರಿತ ಯೋಜನೆಗೆ ಅನಿಲ ದೊರೆಯುವುದಿಲ್ಲ. ಸರ್ಕಾರಗಳೂ ಬಂಡವಾಳಗಾರರ ಹಿತ ಕಾಯುವ ಸಲುವಾಗಿ ಅಗತ್ಯ ಕ್ರಮವಹಿಸದೇ ತೆಪ್ಪಗಿರುತ್ತವೆ. ಪರಿಣಾಮ: ವಿದ್ಯುತ್ ಉತ್ಪಾದನಾ ಸಾಮರ್ಥ್ಯವಿದ್ದರೂ ಉತ್ಪಾದನೆ ಆಗುವುದಿಲ್ಲ. ಆಂಧ್ರ ಪ್ರದೇಶ ಒಂದರಲ್ಲೇ ಪ್ರಸ್ತುತ 23 ಸಾವಿರ ಮೆಗಾವಾಟ್‌ನಷ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಯೋಜನೆಗಳು ಸಂಪೂರ್ಣಗೊಳ್ಳದೇ ಬಾಕಿ ಇವೆ. ಸಾರ್ವಜನಿಕ ವಲಯದ ಈ ವಿದ್ಯುತ್ ಘಟಕಗಳನ್ನು ಪೂರ್ಣಗೊಳಿಸಲು ಅಗತ್ಯವಾಗಿ ಹಣಕಾಸು ನೀಡಿಕೆ ಬಗೆಗೆ ಸರ್ಕಾರಗಳು ತಲೆ ಕೆಡಿಸಿಕೊಂಡಿಲ್ಲ.

ಈ ಮಧ್ಯೆ ವಿದ್ಯುತ್ ವಿತರಣೆಯನ್ನು ಹಂತ ಹಂತವಾಗಿ ಖಾಸಗೀಕರಣಗೊಳಿಸಬೇಕೆಂಬ ಕೇಂದ್ರ ಸರ್ಕಾರದ ಷರತ್ತನ್ನು ಒಪ್ಪಿಕೊಂಡು ಆಂಧ್ರ ಸರ್ಕಾರ ಒಪ್ಪಂದಕ್ಕೆ ಸಹಿ ಮಾಡಿದೆ ಎಂಬ ವರದಿಗಳಿವೆ.

ಆಂಧ್ರದ ರಾಮಾಗುಂಡಮ್‌ನಲ್ಲಿನ ಉಷ್ಣ ವಿದ್ಯುತ್ ಯೋಜನೆಯ 600 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆ ಒಂದೂವರೆ ದಶಕಗಳ ನಂತರವೂ ಪೂರ್ಣಗೊಂಡಿಲ್ಲ. ಕೇಂದ್ರ ಸರ್ಕಾರ ಈ ವಿಷಯದಲ್ಲಿ ಏನೇನೂ ಮಾಡಿಲ್ಲ. ಎ.ಪಿ.ಜೆನ್ಕೊ ಎಂಬ ಆಂ ಧ್ರ ಪ್ರದೇಶದ ವಿದ್ಯುತ್ ಕಂಪನಿಗೂ ಅವಶ್ಯ ಕಲ್ಲಿದ್ದಲಿನ ಪೂರೈಕೆ ಇಲ್ಲದಿರುವುದರಿಂದ ಅದೂ ಉತ್ಪಾದನೆ ಮಾಡಲು ಸಾಧ್ಯವಾಗಿಲ್ಲ. ಎ.ಪಿ.ಜೆನ್ಕೊದ ಸಾಮರ್ಥ್ಯದ ಬಳಕೆ ಶೇ. 84 ರಷ್ಟಿದ್ದು ಅದು ಎನ್‌ಟಿಪಿಸಿಯ ನಂತರದ ಸ್ಥಾನದಲ್ಲಿದೆ. ಆದರೆ ಕಾಂಗ್ರೆಸ್ ಸರ್ಕಾರ ಖಾಸಗಿ ಉತ್ಪಾದಕರಿಗೆ ಪ್ರೋತ್ಸಾಹ ನೀಡುತ್ತಿದೆ. ಇವು ಸರ್ಕಾರಗಳ ವರ್ತನೆಗಳ ಕೆಲವು ಉದಾಹರಣೆಗಳು ಮಾತ್ರ. ಚಳುವಳಿ


ಆಂಧ್ರ ಪ್ರದೇಶದಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಮುಂತಾದ ಎಡಪಕ್ಷಗಳ ನೇತೃತ್ವದಲ್ಲಿ ವಿದ್ಯುತ್ ಬೆಲೆ ಏರಿಕೆಯ ವಿರುದ್ಧ ತೀವ್ರ ತರವಾದ ಹೋರಾಟದ ಹಿನ್ನೆಲೆಯೇ ಇದೆ. 2000–01 ರಲ್ಲಿ ವಿದ್ಯುತ್ ಕ್ಷೇತ್ರದ ಖಾಸಗೀಕರಣ ಮತ್ತು ಜನಗಳ ಮೇಲೆ 815 ಕೋಟಿ ರೂಪಾಯಿಗಳ ವಿದ್ಯುತ್ ದರ ಹೇರಿಕೆಯ ವಿರುದ್ಧದ ಹೋರಾಟದಲ್ಲಿ ಅಂದಿನ ಟಿಡಿಪಿ ಸರ್ಕಾರದ ಗೋಲಿಬಾರ್‌ನಲ್ಲಿ ಪೋಲಿಸರ ಗುಂಡಿಗೆ ಎದೆಕೊಟ್ಟು ಮೂವರು ಯುವಕರು ಪ್ರಾಣತ್ಯಾಗ ಮಾಡಿದರು. ಎಷ್ಟೋ ಜನರಿಗೆ ಗಂಭೀರ ಗಾಯಗಳಾದವು. 25 ಸಾವಿರ ಜನರನ್ನು ಬಂಧಿಸಿ ಸರ್ಕಾರ ಜೈಲಿಗೆ ತಳ್ಳಿತ್ತು. ಈ ಹೋರಾಟಗಳಿಂದಾಗಿ ನಂತರದ ಎಂಟು ವರ್ಷಗಳ ಕಾಲ ವಿದ್ಯುತ್ ದರ ಒಂದು ದಶಕಗಳಿಂದ ಇರಲಿಲ್ಲ. ನಂತರದ ಎರಡು ವರ್ಷಗಳ ಕಾಲ ಕೂಡ ವಿದ್ಯುತ್ ಬೆಲೆ ತೀವ್ರವಾಗಿ ಏರಿರಲಿಲ್ಲ. ಕಳೆದೆರಡು ವರ್ಷಗಳಿಂದ ಸರ್ಕಾರ ಬೆಲೆ ಏರಿಸಲು ವಿವಿಧ ಹುನ್ನಾರಗಳನ್ನು ಮಾಡುತ್ತಿದೆ. ಈಗ ವಿದ್ಯುತ್ ಕಡಿತವಂತೂ ದಿನನಿತ್ಯದ ರಗಳೆಯಾಗಿದೆ. ಸರ್ಕಾರಗಳ ತಪ್ಪು ನೀತಿಗಳಿಂದಾಗುವ ದುಷ್ಪರಿಣಾಮಗಳನ್ನು ಸುಲಭವಾಗಿ ಜನಸಾಮಾನ್ಯರ ಬೆನ್ನಿಗೆ ಕಟ್ಟಲು ಪ್ರಯತ್ನಿಸಲಾಗುತ್ತಿದೆ. ಈ ಎಲ್ಲ ನೀತಿಗಳ ವಿರುದ್ಧ ಎಡ ಪಕ್ಷಗಳ ತೀವ್ರವಾದ ಹೋರಾಟಗಳನ್ನು ನಡೆಸುತ್ತಿವೆ. ಹೋರಾಟಕ್ಕೆ ಜನರ ಬೆಂಬಲವೂ ದೊರೆಯುತ್ತಿದೆ.

ಸರ್ಕಾರಗಳ ವಿದ್ಯುತ್ ನೀತಿಯಲ್ಲಿ ಅಮೂಲಾಗ್ರ ಬದಲಾವಣೆಗೆ ಒತ್ತಾಯಿಸಿ ವಿದ್ಯುತ್ ದರಏರಿಕೆ ಮತ್ತು ಖಾಸಗೀಕರಣದ ನೀತಿಗಳಿಗೆ ಪರ್ಯಾಯವನ್ನು ಸೂಚಿಸಿ ಈ ವರ್ಷದ ಏಪ್ರಿಲ್‌ನಲ್ಲಿ ಎಡಪಕ್ಷಗಳ ಮುಖಂಡರು ಉಪವಾಸ ಸತ್ಯಾಗ್ರಹ ನಡೆಸಿದರು. ಬೇಡಿಕೆಗಳನ್ನು ಪರಿಗಣಿಸದ ಸರ್ಕಾರಗಳ ದಮನಕಾರಿ ನೀತಿಗಳನ್ನು ಹೋರಾಟಗಳ ಮೂಲಕ ಹಿಮ್ಮೆಟ್ಟಿಸುವ ಪ್ರಯತ್ನ ಮಾಡಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ವಿ.ರಾಘವುಲು, ಸಿಪಿಐ ಪಕ್ಷದ ಮುಖಂಡ ನಾರಾಯಣ ಮುಂತಾದವರನ್ನು ಬಂಧಿಸಿತು.

ಈ ದಮನದ ವಿರುದ್ಧ ಏಪ್ರಿಲ್ 9 ರಂದು ಆಂಧ್ರ ಪ್ರದೇಶ ಬಂದ್‌ಗೆ ಎಡಪಕ್ಷಗಳು ಕರೆ ನೀಡಿದವು. ಬಂದ್ ಸಂಪೂರ್ಣ ಯಶಸ್ವಿಯಾಯಿತು. ಆಂಧ್ರದ ಉಳಿದ ವಿರೋಧ ಪಕ್ಷಗಳು ಕೂಡ ಬಂದ್‌ಗೆ ಬೆಂಬಲ ಘೋಷಿಸಿದ್ದವು. ಹೋರಾಟ ಮುಂದುವರಿಯುತ್ತಿದೆ. ಸರ್ಕಾರ ಈ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದ ಅವಧಿಯ ಕೊರತೆ ತುಂಬಿಕೊಳ್ಳುವ ಹೆಸರಿನಲ್ಲಿ ಒಟ್ಟು 720 ಕೋಟಿ ರೂಪಾಯಿಗಳಷ್ಟು 'ಇಂಧನದ ಮೇಲಿನ ಸರ್‌ಚಾರ್ಜ್ ಹೊಂದಾಣಿಕೆ ಶುಲ್ಕ'(ಎಫ್‌ಎಸ್‌ಎಸ್) ವನ್ನು ಹೇರಿದೆ. ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಖಾಸಗಿ ವಿದ್ಯುತ್ ಖರೀದಿಸಿದ್ದರಿಂದ ಸುಮಾರು 11,000 ಕೋಟಿ ರೂಗಳಷ್ಟು ಹೊರೆಯಾಗಿದು ಅದನ್ನು ಜನಗಳೇ ಹೊರಬೇಕೆಂದು ಮುಖ್ಯಮಂತ್ರಿ ಕಿರಣಕುಮಾರ ರಾಗಹಾಡುತ್ತಿದ್ದಾರೆ.

ಈ ನೀತಿ ವಿರೋಧಿಸಿ ಮೊನ್ನೆ ಏಪ್ರಿಲ್. ರಂದು ಎಡಪಕ್ಷಗಳು ರಾಜ್ಯದಾದ್ಯಂತ ಸರ್ಕಾರಿ ಕಚೇರಿಗಳನ್ನು ಮುತ್ತಿಗೆ ಹಾಕಿವೆ. ಇಂತಹ ಹೋರಾಟ ಬಲಗೊಳ್ಳಬೇಕಿದೆ. ದೇಶದ ಒಟ್ಟು ವಿದ್ಯುತ್ ನೀತಿಯ ಚೌಕಟ್ಟು ಆರ್ಥಿಕ ನೀತಿಯ ಚೌಕಟ್ಟನ್ನೇ ಬದಲಿಸಬೇಕಿದೆ. ಅದು ಮಾತ್ರವೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರವಾಗಿದೆ.

ಈಗ ನಬಾರ್ಡ್ ಖಾಸಗೀಕರಣದ ಹುನ್ನಾರ 'ಅಭಿವೃದ್ಧಿ ಬ್ಯಾಂಕಿಂಗ್' ಪರಿಕಲ್ಪನೆಯ ಮೇಲೊಂದು ದಾಳಿ



ವೇದರಾಜ ಎನ್.ಕೆ.


ಕಳೆದ ಎರಡು ದಶಕಗಳ 'ಆರ್ಥಿಕ ಸುಧಾರಣೆ'ಗಳ ಅವಧಿಯಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ಖಾಸಗೀಕರಿಸುವ ಕ್ರಮಗಳು ನಡೆದವು. ವಿದೇಶಿ ಬ್ಯಾಂಕುಗಳ ಪ್ರವೇಶಕ್ಕೆ ಅನುವು ಮಾಡಿಕೊಡುವುದೂ ಆಯ್ತು. ಕೃಷಿ ಮತ್ತು ಅಂತಹ ಆದ್ಯತಾ ವಲಯಗಳಿಗೆ ಸಾಲನೀಡಿಕೆಯ ನಿಯಮಗಳನ್ನು ಸಡಿಲುಗೊಳಿಸುವ ಕ್ರಮಗಳನ್ನು ಕೈಗೊಳ್ಳಲಾಯಿತು. ಇವೆಲ್ಲವುಗಳ ನಂತರ, ಈಗ ಅವಕ್ಕೆಲ್ಲ 'ಶಿಖರಪ್ರಾಯ'ವಾಗಿ ಗ್ರಾಮೀಣ ಮತ್ತು ಕೃಷಿವಲಯದಲ್ಲಿ ನಬಾರ್ಡ್‌ನ ಪ್ರಧಾನ ಪಾತ್ರವನ್ನು ಸಮಾಪ್ತಿಗೊಳಿಸುವ ಕ್ರಮಕ್ಕೆ ಯುಪಿಎ–2 ಸರಕಾರ ಮುಂದಾಗಿದೆ. ಇದು ದೇಶವನ್ನು ಮುಕ್ಕಾಲು ಶತಮಾನದಷ್ಟು ಹಿಂದಕ್ಕೆ ತಳ್ಳಿ, ರೈತರನ್ನು ಮತ್ತೆ ಆಗಿನ ದುರ್ಗತಿಗೆ ನೂಕುವ ಕ್ರಮ ಎಂದು ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಟೀಕಿಸಿದ್ದಾರೆ.

1981ರಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ [illegible] ಸಾಲ ಒದಗಿಸುವ ಪ್ರಧಾನ ಸಂಸ್ಥೆಯಾಗಿ ರಿಝರ್ವ್ ಬ್ಯಾಂಕಿನೊಳಗಿಂದ 'ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್'– 'ನಬಾರ್ಡ್' ಅನ್ನು ರಚಿಸಲಾಯಿತು. ಈಗ 'ನಬಾರ್ಡ್ ಕಾನೂನು–1981'ಕ್ಕೆ ತಿದ್ದುಪಡಿ ತರುವ ಒಂದು ಮಸೂದೆ ಸಂಸತ್ತಿನ ಮುಂದೆ ಬರಲಿದೆಯಂತೆ. ಈ ಮಸೂದೆಯ ಮೂರು ಅಂಶಗಳು ಹೀಗಿವೆ: ಒಂದು, ನಬಾರ್ಡ್‌ನ ಶೇರು ಬಂಡವಾಳವನ್ನು 5,000 ಕೋಟಿ ರೂ.ಗಳಿಂದ 20,000 ಕೋಟಿ ರೂ. ಗಳಿಗೇರಿಸುವುದು ಹಾಗೂ ಈ ಹೊಸ ಶೇರುಗಳನ್ನು ಖಾಸಗಿ ಬಂಡವಾಳಿಗರು ಖರೀದಿಸಲು ಅವಕಾಶ ಕಲ್ಪಿಸುವುದು. ಎರಡು, ನಬಾರ್ಡ್‌ನಲ್ಲಿನ ರಿಝರ್ವ್ ಬ್ಯಾಂಕ್ ಶೇರುಗಳನ್ನು ಭಾರತ ಸರಕಾರ ವಹಿಸಿಕೊಳ್ಳುವುದು. ಮೂರು, ನಬಾರ್ಡ್ ಕೃಷಿ ವಲಯಕ್ಕೆ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿರುವ ಸರಕಾರೀ ಸಂಸ್ಥೆಗಳಿಗೆ ಮಾತ್ರವಲ್ಲ, ಭಾರತ ಸರಕಾರದ ಮಂಜೂರಾತಿ ಪಡೆದ ಸಂಸ್ಥೆಗಳಿಗೆ ಕೂಡ ಸಾಲ ಒ[illegible]ಬೇಕು.

ಇದರಲ್ಲಿ ಮೊದಲನೆಯ ಅಂಶದ ಅರ್ಥ ನಬಾರ್ಡ್‌ನ ಖಾಸಗೀಕರಣದ ಪ್ರಕ್ರಿಯೆಯ ಆರಂಭ; ಎರಡನೆಯದು [illegible]ರ್ಡ್‌ನ ರಚನೆಯ ತರ್ಕವನ್ನೇ ಬುಡಮೇಲು ಮಾಡುವಂತದ್ದು; ಮತ್ತು ಮೂರನೆಯ ಅಂಶದಲ್ಲಿ ಹೇಳಿರುವ ಸರಕಾರದ ಮಂಜೂರಾತಿ ಪಡೆದ ಸಂಸ್ಥೆಗಳ ಪಟ್ಟಿಯಲ್ಲಿ ದೊಡ್ಡ ಖಾಸಗಿ ಸಂಸ್ಥೆಗಳೂ ಸೇರಿರುತ್ತವೆ. ಇದನ್ನೇ ಸಂಕ್ಷಿಪ್ತವಾಗಿ ಹೇಳುವುದಾದರೆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಅಗ್ಗದರದಲ್ಲಿ ಸಾಲ ನೀಡುವ ಪ್ರಧಾನ ಸಂಸ್ಥೆಯೆಂಬ ನಬಾರ್ಡ್‌ನ ವಿಶೇಷ ಪಾತ್ರವನ್ನು ಕೊನೆಗೊಳಿಸುವುದು ಮತ್ತು ಅದನ್ನು ಖಾಸಗಿ ಬಂಡವಾಳದ ಒಡೆತನದ ಹಾಗೂ ಖಾಸಗಿ ಬಂಡವಾಳಿಗರಿಗೆ ಸಾಲ ಒದಗಿಸುವ ಸಂಸ್ಥೆಯಾಗಿ ಪರಿವರ್ತಿಸುವುದು. ಇದು ಈ ತಿದ್ದುಪಡಿಯ ಅರ್ಥ. ಇದು ಅಭಿವೃದ್ಧಿ ಬ್ಯಾಂಕಿಂಗ್ ಎಂಬ ಪರಿಕಲ್ಪನೆಯ ಮೇಲಿನ ಒಂದು ದಾಳಿ ಎಂದು ವಿಶ್ಲೇಷಿಸುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್.

ಹಣಕಾಸು ವಲಯದ ಖಾಸಗೀಕರಣ, ವಿದೇಶಿ ಒಡೆತನಕ್ಕೆ ತೆರೆಯುವುದೆಂದರೇ ರೈತ ಕೃಷಿಗೆ ಸಾಂಸ್ಥಿಕ ಸಾಲ ಹರಿಯದಂತೆ ಒಡ್ಡುವ ಅಡ್ಡಿ. ಇಂತಹ ಕ್ರಮಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚಾಗಿ ಮತ್ತು ತ್ವರಿತವಾಗಿ ಬರುತ್ತಿವೆ ಎನ್ನುತ್ತಾರೆ ಅವರು. ಈ [illegible]ನಲ್ಲಿ ನಬಾರ್ಡ್ ಕಾನೂನಿಗೆ ತಿದ್ದುಪಡಿ ಇನ್ನೊಂದು ದೈತ್ಯ ಹೆಜ್ಜೆ. ಈ ಕ್ರಮವು 'ದೇಶವನ್ನು ರೈತರು ದುಬಾರಿ ಬಡ್ಡಿಯ ಲೇವಾದೇವಿ ವ್ಯವಸ್ಥೆಯಲ್ಲಿ ನರಳುತ್ತಿದ್ದ ಸ್ವಾತಂತ್ರ್ಯಪೂರ್ವದ ಕಾಲಕ್ಕೆ ಹಿಂದಕ್ಕೊಯ್ಯುತ್ತದೆ. ಇದು ನಮ್ಮನ್ನು ಮುಕ್ಕಾಲು ಶತಮಾನದಷ್ಟು ಹಿಂದಕ್ಕೊಯ್ಯುವ ಕ್ರಮ' ಎಂದು ಅವರು ಟೀಕಿಸಿರುವುದು ಇದೇ ಹಿನ್ನೆಲೆಯಲ್ಲಿ.

'ವಾಸ್ತವವಾಗಿ ಇದು ಇನ್ನೊಂದು ನವ–ಉದಾರವಾದಿ ದಾಳಿ. 'ಅಭಿವೃದ್ಧಿ ಬ್ಯಾಂಕಿಂಗ್' ಎಂಬುದು ಕಾರ್ಪೊರೇಟ್–ಹಣಕಾಸು ಹಿತಾಸಕ್ತಿಗಳಿಗೆ ಎಳ್ಳಷ್ಟೂ ಒಲ್ಲದ ಪರಿಕಲ್ಪನೆ. ಏಕೆಂದರೆ ಅಭಿವೃದ್ಧಿಯ ಅಜೆಂಡಾ ಅನುಸರಿಸುತ್ತಿರುವ ಒಂದು ಆರ್ಥಿಕದ ಹಣಕಾಸು ಮಾರುಕಟ್ಟೆಯಲ್ಲಿ 'ಗರಿಷ್ಠ ಲಾಭ'ದ ಗಳಿಕೆಯನ್ನೇ ಗುರಿಯನ್ನಾಗಿರಿಸಿಕೊಂಡು ಕಾರ್ಯನಿರ್ವಹಿಸುವ ಬ್ಯಾಂಕಿಂಗ್ ಸಂಸ್ಥೆಗಳು ಸಾಲುವುದಿಲ್ಲ.



'ಗರಿಷ್ಠ ಲಾಭ'ದ ಅಂಶವನ್ನು ಬದಿಗಿಟ್ಟು, ಕೃಷಿ ಮುಂತಾದ ಕೆಲವು ನಿರ್ದಿಷ್ಟ ಉದ್ದೇಶಗಳಿಗೇ ಮೀಸಲಾದ ವಿಶೇಷವಾದ ಹಣಕಾಸು ಸಂಸ್ಥೆಗಳ(ಅಭಿವೃದ್ಧಿ ಬ್ಯಾಂಕುಗಳ) ಅಗತ್ಯವಿದೆ ಎಂಬ ವಿಚಾರವೇ 'ಮುಕ್ತ ಮಾರುಕಟ್ಟೆ'ಯ ಪರಿಕಲ್ಪನೆಗೆ ವಿರುದ್ಧವಾದುದು. ಆ ಮೂಲಕ ಅದು ನವ–ಉದಾರವಾದಕ್ಕೂ ಸವಾಲೊಡ್ಡುವ ಸಂಗತಿ' ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್.

ಇಷ್ಟೇ ಅಲ್ಲ, ಇಂತಹ 'ಅಭಿವೃದ್ಧಿ ಬ್ಯಾಂಕಿಂಗ್' ಸಂಸ್ಥೆಗಳು ಲಾಭಕ್ಕಾಗಿ ಇರುವ ವಾಣಿಜ್ಯ ಬ್ಯಾಂಕುಗಳ ವ್ಯವಹಾರ ಕ್ಷೇತ್ರವನ್ನು ಕುಗ್ಗಿಸುತ್ತವೆ. ಅಂದರೆ ಲಾಭದ ಅವಕಾಶಗಳನ್ನು ಮೊಟಕುಗೊಳಿಸುತ್ತವೆ. ಇದು ಎರಡನೆಯ ಅಂಶ. ಇನ್ನು ಮೂರನೇ ಅಂಶವನ್ನು ಗಮನಿಸಿ. 'ಅಭಿವೃದ್ಧಿ ಬ್ಯಾಂಕಿಂಗ್' ಸರಕಾರದ ಬೆಂಬಲವಿಲ್ಲದೆ ಉಳಿಯಲಾರದು. ಅಂದರೆ ಪ್ರಭುತ್ವದ ಸ್ವತಂತ್ರ ಮಧ್ಯಪ್ರವೇಶ ಅಭಿವೃದ್ಧಿಯ ವಿಚಾರದಲ್ಲಿ ಅಗತ್ಯ ಎಂದಾಗುತ್ತದೆ. ಆದರೆ ನವ–ಉದಾರವಾದಿಗಳ ಪ್ರಕಾರ ಸರಕಾರ/ಪ್ರಭುತ್ವ ಹಣಕಾಸು ಬಂಡವಾಳಕ್ಕೆ ಸೌಕರ್ಯ ಒದಗಿಸುವುದನ್ನು ಬಿಟ್ಟು ಬೇರಾವ ಆರ್ಥಿಕ ಪಾತ್ರವನ್ನೂ ವಹಿಸಬಾರದು! ನಾಲ್ಕನೆಯ ಅಂಶ ನೋಡಿ. 'ಅಭಿವೃದ್ಧಿ ಬ್ಯಾಂಕಿಂಗ್'ನ ಪರಿಕಲ್ಪನೆಯ ಅರ್ಥ ನಮ್ಮಂತಹ ರೈತರು ಮುಂತಾದ ಹತ್ತು–ಹಲವು ಪ್ರಕಾರಗಳ ಸಣ್ಣ–ಸಣ್ಣ ಉತ್ಪಾದಕರು ಇರುವ ಆರ್ಥಿಕದಲ್ಲಿ ಸರಕಾರ ದೊಡ್ಡ ಕಾರ್ಪೊರೇಟ್‌ಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗಿಂತ ಹೆಚ್ಚಾಗಿ ಇಂತಹ ಸಣ್ಣ ಉತ್ಪಾದಕರನ್ನು ಬೆಂಬಲಿಸಬೇಕು ಎಂದಾಗುತ್ತದೆ. ಹೀಗಿರುವಾಗ, 'ಲೂಟಿಕೋರ ಬಂಡವಾಳ'ದ ಶೇಖರಣೆಗೆ ಮತ್ತು ಕೇಂದ್ರೀಕರಣಕ್ಕೆ ಒತ್ತು ನೀಡುವ ನವ–ಉದಾರ ವಾದಿಗಳು ಇದನ್ನು ಹೇಗೆ ತಾನೇ ಸಹಿಸಲು ಸಾಧ್ಯ?

ಆದ್ದರಿಂದಲೇ, ಆರಂಭದಿಂದಲೂ ವಿಶ್ವಬ್ಯಾಂಕ್ ಸೇರಿದಂತೆ ನವ–ಉದಾರವಾದದ ಪ್ರತಿಪಾದಕರೆಲ್ಲರೂ ಈ ಪರಿಕಲ್ಪನೆಯ ಮೇಲೆ ದಾಳಿ ನಡೆಸುತ್ತಲೇ ಬಂದಿದ್ದಾರೆ. ಈ ದಾರಿಯನ್ನು ಬಲವಾಗಿ ಅಪ್ಪಿಕೊಂಡಿರುವ ಯುಪಿಎ–2 ಸರಕಾರ ಕೂಡ ಅದೇ ದಾರಿ ಹಿಡಿದಿದ್ದರೆ ಆಶ್ಚರ್ಯವೇನಿಲ್ಲ. ಈ ಪ್ರಕ್ರಿಯೆಯಲ್ಲಿ ದೇಶವನ್ನು ಮುಕ್ಕಾಲು ಶತಮಾನದಷ್ಟು ಹಿಂದಕ್ಕೆ ತಳ್ಳಿ ರೈತರನ್ನು ಮತ್ತೆ ದುರ್ಗತಿಗೀಡು ಮಾಡಿದರೂ ಇವರಿಗೆ ಚಿಂತೆ ಇಲ್ಲ !! ಅದರೆ ದೇಶದ ಪ್ರಜಾಪ್ರಭುತ್ವವಾದಿಗಳು ಇದನ್ನು ಬಲವಾಗಿ ವಿರೋಧಿಸದೇ ಇರಲು ಸಾಧ್ಯವಿಲ್ಲ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್.

ಪುಟ 15 ಕ್ಕೆ

ರೈತರ ಪ್ರಶ್ನೆಗಳ ಪರಿಶೀಲನೆಯ ಸಮಿತಿಗಳಲ್ಲಿ ರೈತ ಪ್ರತಿನಿಧಿಗಳಿಗೇ ಸ್ಥಾನವಿಲ್ಲ!

ಯುಪಿಎ–2 ಸರಕಾರದ ಕೃಷಿ ಇಲಾಖೆ ಮೂರು ಸಮಿತಿಗಳನ್ನು ನೇಮಿಸಿದೆ. ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗಳ ನಿಗದಿಯ ವಿಧಿ–ವಿಧಾನಗಳು, ಮುಕ್ತ ವ್ಯಾಪಾರ ಒಪ್ಪಂದಗಳಲ್ಲಿ ಕೃಷಿ ಹಾಗೂ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಮತ್ತು ಬೇಸಾಯದ ಬದುಕುಗಳ ಪ್ರಶ್ನೆಗಳ ಪರಿಶೀಲನೆಗೆ ಈ ಮೂರು ಸಮಿತಿಗಳನ್ನು ನೇಮಿಸಲಾಗಿದೆ. ಇವುಗಳನ್ನು ನೇಮಿಸಿರುವುದು ರೈತ ಸಂಘಟನೆಗಳ ಒತ್ತಾಯ ಮತ್ತು ಹೋರಾಟಗಳಿಂದಾಗಿ. ಆದರೆ ಈ ಯಾವ ಸಮಿತಿಯಲ್ಲೂ ರೈತ ಸಂಘಟನೆಗಳ ಪ್ರಾತಿನಿಧ್ಯವೇ ಇಲ್ಲ !!

ಕೃಷಿ ಖರ್ಚುಗಳು ಮತ್ತು ಬೆಲೆಗಳ ಆಯೋಗ(ಸಿಎಸಿಪಿ) ಅಂಕಿ–ಅಂಶಗಳ ನಿರ್ದೇಶನಾಲಯದ ಮಾಹಿತಿಗಳ ಆಧಾರದಲ್ಲಿ ಮಾಡುವ ಲೆಕ್ಕಾಚಾರಗಳು ದೋಷಪೂರ್ಣವಾಗಿವೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಸರಕಾರ ಮತ್ತು ಈ ಆಯೋಗದ ಎದುರು ಪ್ರತಿ ಹಿಂಗಾರು–ಮುಂಗಾರು ಬೆಳೆಗಳ ನಿಗದಿಗೆ ಮೊದಲು ಆಕ್ಷೇಪ ಎತ್ತುತ್ತಾ ಬಂದಿದೆ.

ಕೃಷಿಯ ಮೇಲೆ ಮುಕ್ತ ವ್ಯಾಪಾರ ಒಪ್ಪಂದಗಳ ದುಷ್ಪರಿಣಾಮಗಳ ಬಗ್ಗೆಯೂ ಎಐಕೆಎಸ್ ನಿರಂತರವಾಗಿ ದನಿ ಎತ್ತುತ್ತ ಬಂದಿದೆ. ಮುಂಬರುವ 'ಭಾರತ–ಯುರೋಪಿಯನ್ ಒಕ್ಕೂಟ ಮುಕ್ತ ಒಪ್ಪಂದ'ದ ಬಗ್ಗೆ ಒಂದು ರಾಷ್ಟ್ರೀಯ ದುಂಡು ಮೇಜಿನ ಚರ್ಚೆಯನ್ನೂ ನಡೆಸಿದೆ. ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ನಿಂದ ಕೃಷಿಯ ಮೇಲಾಗುವ ಪರಿಣಾಮಗಳ ಬಗ್ಗೆ ಒಂದು ವಿವರವಾದ ವಿಮರ್ಶೆಯನ್ನೂ ಅದು ಸರಕಾರದ ಮುಂದಿಟ್ಟಿದೆ. ಆದರೂ ಈ ಪ್ರಶ್ನೆಗಳ ಪರಿಶೀಲನೆಗೆ ಮುಂದಾಗಿರುವಾಗ ಎರಡು ಕೋಟಿಗೂ ಹೆಚ್ಚು ಸದಸ್ಯಬಲವಿರುವ ರಾಷ್ಟ್ರೀಯ ಮಟ್ಟದ ಸಂಘಟನೆಯನ್ನು ಇದರಿಂದ ಹೊರಗಿಟ್ಟಿರುವುದು ಏನನ್ನು ಸೂಚಿಸುತ್ತದೆ? ರಾಷ್ಟ್ರವ್ಯಾಪಿಯಾದ ವಿಮರ್ಶಾತ್ಮಕ ದನಿಗಳನ್ನು ಹೊರಗಿಟ್ಟು ವಸ್ತುನಿಷ್ಠ ಪರಿಶೀಲನೆ ಸಾಧ್ಯವೇ? ಬಹುಶಃ ಯುಪಿಎ–2 ಸರಕಾರಕ್ಕೆ ಇಂತಹ ವಸ್ತುನಿಷ್ಠ ಪರಿಶೀಲನೆ ಬೇಕಾಗಿಲ್ಲ. ಆದರೆ ಕೋಟ್ಯಂತರ ರೈತರಿಗೆ ಬೇಕಾಗಿದೆ.

ಆದ್ದರಿಂದ ದೇಶದ ಅತಿ ದೊಡ್ಡ ರೈತ ಸಂಘಟನೆಯಾದ ಎಐಕೆಎಸ್ ಮತ್ತು ಇತರ ರೈತ ಸಂಘಟನೆಗಳಿಗೆ ಈ ಸಮಿತಿಗಳಲ್ಲಿ ಪ್ರಾತಿನಿಧ್ಯ ನೀಡಬೇಕು ಎಂದು ಎಐಕೆಎಸ್ ಆಗ್ರಹಿಸಿದೆ. ಅಲ್ಲದೆ ಸರಕಾರ ಈಗ ಕೃಷಿಯಲ್ಲಿಯೂ 'ಪಿಪಿಪಿ' ಅಂದರೆ ಖಾಸಗಿ–ಸಾರ್ವಜನಿಕ ಪಾಲುದಾರಿಕೆಯ ಮಾತಾಡುತ್ತಿದೆ. ಇದು ಕಾರ್ಪೊರೇಟ್‌ಗಳಿಗೆ ಕೃಷಿ ವಲಯವನ್ನು ಒಪ್ಪಿಸುವ ಹುನ್ನಾರ ಎಂದು ಎಐಕೆಎಸ್ ಭಾವಿಸುತ್ತಿದೆ. ಈ ಬಗ್ಗೆಯೂ ಒಂದು ವ್ಯಾಪಕ ಪ್ರಾತಿನಿಧ್ಯದ ಸಮಿತಿಯನ್ನು ರಚಿಸಬೇಕು ಎಂದೂ ಎಐಕೆಎಸ್ ಆಗ್ರಹಿಸಿದೆ.

ಜಗದಗಲ


ಶರತ್‌ಚಂದ್ರ

ವೆನೆಜುವೆಲಾ : ಮದುರೊ ಸರ್ಕಾರದ ಬುಡಮೇಲಿಗೆ ಅಮೆರಿಕ ಶತಪ್ರಯತ್ನ

ವೆನೆಝುವೆಲಾದಲ್ಲಿ ಅಧ್ಯಕ್ಷೀಯ ಚುನಾವಣೆ ಫಲಿತಾಂಶ ಬಂದು ಹಲವು ವಾರಗಳು ಕಳೆದಿದ್ದರೂ ಅಲ್ಲಿನ ಅಮೆರಿಕ ಬೆಂಬಲಿತ ವಿರೋಧ ಪಕ್ಷಗಳ ರಂಗ ತನ್ನ ಸೋಲು ಇನ್ನೂ ಒಪ್ಪಿಕೊಂಡಿಲ್ಲ. ಚುನಾವಣೆ ಫಲಿತಾಂಶ ಬರುವ ಮೊದಲೇ 'ಚುನಾವಣೆ ನ್ಯಾಯಯುತವಾಗಿರುವುದಿಲ್ಲ' ಎಂದು ರಾಗ ಎಳೆದಿತ್ತು. ಚುನಾವಣೆ ಫಲಿತಾಂಶ ಬಂದ ನಂತರ ಹಲವು ಕಡೆ ರ್‍ಯಾಲಿಗಳು ಹಿಂಸಾತ್ಮಕ ದಾಳಿಗಳನ್ನು ಸಂಘಟಿಸಿತ್ತು. 18 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಮೂರು ರೇಶನ್ ಅಂಗಡಿಗಳ ಮೇಲೆ ಹಿಂಸಾತ್ಮಕ ದಾಳಿ ಮಾಡಲಾಗಿತ್ತು. ಕ್ಯೂಬನ್ ಡಾಕ್ಟರುಗಳು ಕೆಲಸ ಮಾಡುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ದಾಳಿಯ ಪ್ರಮುಖ ಗುರಿಗಳಾಗಿದ್ದವು. ಈ ದಾಳಿಗಳಲ್ಲಿ 7 ಜನ ಸತ್ತಿದ್ದಾರೆ. ಚುನಾವಣಾ ಕಮಿಶನ್ ಕಾನೂನು ಪ್ರಕಾರ ಶೇ.54 ಮತಗಳ ಅಡಿಟ್ ಮಾಡಿದರೂ 'ರಿಗ್ಗಿಂಗ್' ಆಪಾದನೆ ಮುಂದುವರೆಸಿದೆ.

ಲ್ಯಾಟಿನ್ ಅಮೆರಿಕದ ದೇಶಗಳ ಸರ್ಕಾರಗಳೂ ಮತ್ತು ಅವುಗಳ ಹಲವು ಕೂಟಗಳೂ ಸಂಘಟನೆಗಳೂ, ಅಲಿಪ್ತ ರಾಷ್ಟ್ರಗಳ ಸಂಘಟನೆ ಫಲಿತಾಂಶ ಒಪ್ಪಿಕೊಂಡು ಮದುರೊ ವೆನೆಝುವೆಲಾದ ಚುನಾಯಿತ ಅಧ್ಯಕ್ಷ ಎಂದು ಮಾನ್ಯತೆ ನೀಡಿವೆ. ಕೆಲವು ಅಮೆರಿಕನ್ ಮತ್ತು ಯುರೋಪಿಯನ್ನರು ಸೇರಿದಂತೆ ಚುನಾವಣಾ ಕಮಿಶನ್ ಆಹ್ವಾನಿಸಿದ್ದ 150 ಅಂತರ್ರಾಷ್ಟ್ರೀಯ ವೀಕ್ಷಕರು ಚುನಾವಣೆ ನ್ಯಾಯಯುತವಾಗಿತ್ತು ಎಂದಿದ್ದಾರೆ. ಅವರಲ್ಲಿ ಮಾಜಿ ಅಮೆರಿಕನ್ ಅಧ್ಯಕ್ಷ ಜಿಮ್ಮಿ ಕಾರ್ಟರ್ ಸೇರಿದ್ದಾರೆ. ಅವರು ಇಲೆಕ್ಟ್ರಾನಿಕ್ ಮತದಾನ ಮತ್ತು ಮುದ್ರಿತ ಮತಪತ್ರ ಎರಡೂ ಇದ್ದು ಅವೆರಡನ್ನು ತಾಳೆ ಹಾಕುವ ಪ್ರಕ್ರಿಯೆ ಇರುವ ವೆನೆಝುವೆಲಾದ ಚುನಾವಣಾ ವ್ಯವಸ್ಥೆ ಜಗತ್ತಿನಲ್ಲೇ ಅತ್ಯಂತ ನ್ಯಾಯಯುತ ವ್ಯವಸ್ಥೆ ಎಂದಿದ್ದಾರೆ. ತಾವು ವೀಕ್ಷಿಸಿರುವ 92 ಚುನಾವಣೆಗಳಲ್ಲಿ ಈ ಚುನಾವಣೆ ಅತ್ಯಂತ ನ್ಯಾಯಯುತ ಎಂದೂ ಕಾರ್ಟರ್ ಹೇಳಿದ್ದಾರೆ. ಆದರೂ ಅಮೆರಿಕನ್ ಸರ್ಕಾರ ಮಾತ್ರ ಸೋತ ವಿರೋಧ ಪಕ್ಷಗಳ ರಂಗದ 'ರಿಗ್ಗಿಂಗ್' ಆಪಾದನೆ ನಂಬುವ ಜಗತ್ತಿನ ಏಕಮಾತ್ರ ಸರ್ಕಾರವಾಗಿದೆ.

ಅಮೆರಿಕನ್ ಸರ್ಕಾರ 2002ರ ಮಿಲಿಟರಿ ಕ್ಷಿಪ್ರಕ್ರಾಂತಿ ವಿಫಲವಾದ ನಂತರ ಚವೇಝ್ ಸರ್ಕಾರವನ್ನು ಉರುಳಿಸಿ ಅವರ ನೀತಿಗಳ ಜಾರಿಗೊಳ್ಳುವುದನ್ನು ಮತ್ತು ಲ್ಯಾಟಿನ್ ಅಮೆರಿಕದ ತುಂಬಾ ಹರಡುವುದನ್ನು ನಿಲ್ಲಿಸಲು ಮಸಲತ್ತು ನಡೆಸುತ್ತಿದೆ. ಅದಕ್ಕೆ ಶತಪ್ರಯತ್ನ ಮಾಡುತ್ತಿದೆ. ಅದನ್ನು ಈಗ ಚವೇಝ್



ನಿಧನದ ನಂತರ ಇನ್ನಷ್ಟು ತೀವ್ರಗೊಳಿಸಿದೆ. ಬ್ರೆಜಿಲಿನ ಒಂದು ಪತ್ರಿಕಾ ತನಿಖಾ ವರದಿ ಪ್ರಕಾರ ಅಮೆರಿಕನ್ ಸರ್ಕಾರ ಈ ವರೆಗೆ ಒಂದುವರೆ ಕೋಟಿ ಡಾಲರುಗಳಷ್ಟು ಹಣ ಹರಿಸಿದೆ. ಎಲ್ಲಾ ಕ್ಷೇತ್ರಗಳಲ್ಲಿ ವಿರೋಧ ಪಕ್ಷಗಳನ್ನು ಗುಂಪುಗಳನ್ನು ಬಲಪಡಿಸುವುದು, ಆಳುವ ಪಕ್ಷದ ಸಾಮೂಹಿಕ ನೆಲೆಯನ್ನು ದುರ್ಬಲಗೊಳಿಸುವುದು, ಸರ್ಕಾರವನ್ನು ಅಂತರ್ರಾಷ್ಟ್ರೀಯವಾಗಿ ಒಂಟಿಯಾಗಿಸಲು ಪ್ರಯತ್ನಿಸುವುದು ಸೇರಿರುವ ಐದು ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿದೆ. ಆಳುವ ಪಕ್ಷದ ಕಾರ್ಯಕರ್ತರನ್ನು ಒಳಗೊಂಡು ಅವರಲ್ಲಿ ಗೊಂದಲ ಹರಡುವ 50 ಪ್ರಾಜೆಕ್ಟುಗಳನ್ನು ಹೂಡಿದೆ. ಮೂರು ಸಾವಿರಕ್ಕೂ ಹೆಚ್ಚು ಫೋರಂಗಳು, ಕಾರ್ಯಾಗಾರಗಳು, ತರಬೇತಿ ಶಿಬಿರಗಳನ್ನು ನಡೆಸಿ ಸರ್ಕಾರದ ಕಾರ್ಯಕ್ರಮಗಳ ವಿರುದ್ಧ ಅಪಪ್ರಚಾರ ನಡೆಸಿದೆ.

ವಿರೋಧ ಪಕ್ಷಗಳ ಅಭ್ಯರ್ಥಿ ಕಾಪ್ರಿಲೆಸ್ ಅವರ ಪಕ್ಷ ಸ್ಥಾಪನೆಯಿಂದ ಹಿಡಿದು ಅವರ ಎರಡೂ ಅಧ್ಯಕ್ಷೀಯ ಚುನಾವಣಾ ಪ್ರಚಾರಕ್ಕೆ ಪೂರ್ಣ ಹಣ ಸಹಾಯ ಅಮೆರಿಕವೇ ಒದಗಿಸಿದೆ. ಅವರ ಪ್ರಚಾರ ವ್ಯೂಹ-ತಂತ್ರಗಳನ್ನು ರೂಪಿಸುವಲ್ಲೂ ಸಂಯೋಜಿಸುವಲ್ಲೂ ಭಾಗವಹಿಸಿದೆ ಎಂದು ತನಿಖಾ ವರದಿ ಬಹಿರಂಗ ಪಡಿಸಿದೆ. 2002 ಮಿಲಿಟರಿ ಕ್ಷಿಪ್ರಕ್ರಾಂತಿಯನ್ನು ಕಾಪ್ರಿಲೆಸ್ ಬಹಿರಂಗವಾಗಿಯೇ ಬೆಂಬಲಿಸಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಇದಲ್ಲದೆ ವಿರೋಧ ಪಕ್ಷದ ಪರ ಚುನಾವಣಾ ಸಮೀಕ್ಷೆ, ವಿಶ್ಲೇಷಣೆಗಳಿಗೆ ಹಲವಾರು ಮಾಧ್ಯಮ ಮತ್ತು ಇತರ ಸಂಸ್ಥೆಗಳಿಗೆ ನೇರವಾಗಿ ಹಣ ಕೊಟ್ಟಿದೆ. ಆದರೆ ಇವೆಲ್ಲದರ ಫಲವಾಗಿ ಮದುರೊ ಅವರ ವಿಜಯದ ಅಂತರ ಕಡಿಮೆ ಮಾಡಲು ಸಾಧ್ಯವಾಯಿತು ಅಷ್ಟೇ. ಇದಕ್ಕೆ ಮುಖ್ಯ ಕಾರಣ ಮದುರೊ ಅವರು ಹೇಳಿದ ಹಾಗೆ ವೆನೆಜುವೆಲಾದ ಜನರ 'ಬಲ ಕುಗ್ಗಿಲ್ಲ, ಅವರು ಎಚ್ಚೆತ್ತಿದ್ದಾರೆ'. ಕಾಪ್ರಿಲೆಸ್ ತಮ್ಮ ಪ್ರಚಾರದಲ್ಲಿ ಎಡ ಪಂಥೀಯ ಬೊಲಿವಾರಿಯನ್ ಘೋಷಣೆಗಳನ್ನು ಕಾಪಿ ಮಾಡಲು ಪ್ರಯತ್ನಿಸಿದ್ದು ಕೆಲವರ ಗೊಂದಲಕ್ಕೆ ಈಡು ಮಾಡಿತು, ನಿಜ. ಆದರೆ ಅವರ ಹಿಂದೆ ಇರುವುದು ದೇಶದ ಶ್ರೀಮಂತರು ಮತ್ತು ಅಮೆರಿಕನ್ ಸರ್ಕಾರ. ಅಮೆರಿಕನ್ ಮಧ್ಯಪ್ರವೇಶ ಯಾವಾಗಲೂ ದಮನಕಾರಿ ಮತ್ತು ಕ್ರೂರವಾಗಿರುತ್ತದೆ. ಅದು ದೇಶದಲ್ಲಿ ಪ್ರಜಾಪ್ರಭುತ್ವವನ್ನು ಹೊಸಕಿ ಹಾಕುತ್ತದೆ ಎಂದು ಜನಕ್ಕೆ ಗೊತ್ತಿದೆ. ಬೊಲಿವಾರಿಯನ್ ಚಳುವಳಿಯ ಶಕ್ತಿಯ ಮೂಲ ಮತ್ತು ನೆಲೆ ಚವೇಝ್ ಅವರ ವೈಯಕ್ತಿಕ ವರ್ಚಸ್ಸು ಮಾತ್ರ ಎಂಬ ಅವರದೇ ಅಪಪ್ರಚಾರವನ್ನು ಅವರೇ ನಂಬಿದ್ದೂ ಅಮೆರಿಕದ ಅವರ ವ್ಯೂಹ ತಂತ್ರ ವಿಫಲವಾಗಲು ಕಾರಣವಾಯಿತು.

ಮದುರೊ ವಿಜಯದ ನಂತರ ವೆನೆಝುವೆಲಾದಲ್ಲಿ ಹಿಂಸಾಚಾರ ಅರಾಜಕತೆ ಸೃಷ್ಟಿಸಿ ನೇರ ಮಿಲಿಟರಿ ಹಸ್ತಕ್ಷೇಪ ಮಾಡಲು ತಯಾರಿ ನಡೆಸುತ್ತಿದೆ ಎಂದು ಹಲವು ವರದಿಗಳು ಹೇಳಿವೆ. ವೆನೆಝುವೆಲಾ ಮಾತ್ರವಲ್ಲ ಇತರ ಲ್ಯಾಟಿನ್ ಅಮೆರಿಕದ ದೇಶಗಳೂ ಈ ಆಪಾದನೆಗಳನ್ನು ಮಾಡಿದ್ದಾರೆ. ಆದರೆ ಈ ಎಲ್ಲಾ ಪಿತೂರಿ, ಹಿಂಸಾಚಾರ, ಬುಡಮೇಲು ಕೃತ್ಯಗಳನ್ನು ಎದುರಿಸಲು ಸರ್ಕಾರ, ಆಳುವ ಸೋಶಲಿಸ್ಟ್ ಪಕ್ಷ ಮತ್ತು ದುಡಿಯುವ ಜನತೆ ಸಿದ್ಧವಾಗಿದೆ ಎಂದು ಅಧ್ಯಕ್ಷ ಮುದುರೊ ಸಾರಿದ್ದಾರೆ. ಈ ಎಲ್ಲದರ ಮಧ್ಯೆ ಬೊಲಿವಾರಿಯನ್ ಕ್ರಾಂತಿ ಪ್ರಕ್ರಿಯೆ ಚವೇಝ್ ನಂತರವೂ ಮುಂದುವರೆಯುತ್ತಿ 2019ರ ಹೊತ್ತಿಗೆ ವೆನೆಝುವೆಲಾದಲ್ಲಿ 'ಶೂನ್ಯ ಬಡತನ' ಸಾಧಿಸುವ ಯೋಜನೆಯನ್ನು ಮದುರೊ ಪ್ರಕಟಿಸಿದ್ದಾರೆ.

ಭಾರತ-ಯುರೋಪ್ ಕೂಟ ಮುಕ್ತ ವ್ಯಾಪಾರ ಒಪ್ಪಂದ ನಿಲ್ಲಿಸಿ

ಸಿಪಿಐ(ಎಂ) ಕೇಂದ್ರ ಸಮಿತಿ ತನ್ನ ಇತ್ತೀಚಿಗಿನ ಸಭೆಯ ನಂತರ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಈ ಮೇಲಿನ ಒತ್ತಾಯ ಮಾಡಿದೆ :

ಈಗ ಚೌಕಾಸಿಯ ಹಂತದಲ್ಲಿರುವ ಇಂಡೋ-ಯುರೋಪಿಯನ್ ಕೂಟ ಮುಕ್ತ ವ್ಯಾಪಾರ ಒಪ್ಪಂದದ ಬಗೆಗಿನ ಎಲ್ಲಾ ಮಾತುಕತೆಗಳನ್ನು ನಿಲ್ಲಿಸಬೇಕು. ಕೃಷಿ, ಕೈಗಾರಿಕೆ ಮತ್ತು ಸೇವೆಗಳು ಸೇರಿದಂತೆ ಎಲ್ಲಾ ಆರ್ಥಿಕ ಚಟುವಟಿಕೆಯ ಕ್ಷೇತ್ರಗಳ ಮೇಲೂ ಈ ಒಪ್ಪಂದ ನಕಾರಾತ್ಮಕ ಪರಿಣಾಮಗಳನ್ನು ಬೀರಲಿದೆ. ಉದಾಹರಣೆಗೆ, ಯುರೋಪಿಯನ್ ಕೂಟದಿಂದ ಭಾರಿ ಸಬ್ಸಿಡಿ ಪಡೆದ ಡೈರಿ ಉತ್ಪನ್ನಗಳ ಆಮದಿನಿಂದ ಲಕ್ಷಾಂತರ ರೈತರು ಮತ್ತು ಹಾಲಿನ ಸಹಕಾರ ಸಂಘಗ ಜೀವನೋಪಾಯಕ್ಕೆ ತೀವ್ರ ಧಕ್ಕೆ ತರುತ್ತದೆ.

ಈ ಚೌಕಾಸಿಯನ್ನು ಅಂತಿಮಗೊಳಿಸು ಪ್ರಕ್ರಿಯೆಯನ್ನು ಕೈಬಿಡಬೇಕು ಎಂದು ಕೇಂದ್ರ ಸಮಿತಿ ಒತ್ತಾಯಿಸುತ್ತದೆ. ಅದಕ್ಕೆ ಮೊದಲು ಈ ಬಗೆಗಿನ ಪಾರ್ಲಿಮೆಂಟರಿ ಸ್ಥಿರ ಸಮಿತಿಯ ವರದಿಗೆ ಕಾಯಬೇಕು. ಈ ಒಪ್ಪಂದದಿಂದ ದುಷ್ಪರಿಣಾಮಗಳಿಗೆ ಒಳಗಾಗುವ ಜನವಿಭಾಗಗಳ ಜತೆ ಸಂ ನಡೆಸಬೇಕು. ಈ ವಿಷಯದ ಮೇಲೆ ಪಾರ್ಲಿಮೆಮಟಿನಲ್ಲಿ ಚರ್ಚೆಯಾಗಬೇಕು.

ನಬಾರ್ಡ್ ಖಾಸಗೀಕರಣದ ಹುನ್ನಾರ...

ಪುಟ 13 ರಿಂದ

ಜೀತದ ದುಡಿಮೆ ನಿರ್ಮೂಲಗೊಂಡಿದೆಯೆ?

ಯುಪಿಎ–2 ಜಾಹೀರಾತಿನ ಪ್ರಕಾರ ಭಾರತದಲ್ಲೀಗ ಜೀತದ ದುಡಿಮೆ ಎಂಬುದೇ ಇಲ್ಲ! ಯುಪಿಎ–2 ಸರಕಾರ ನಾಲ್ಕು ವರ್ಷಗಳನ್ನು ಹಾಗೂ ಎರಡು ಯುಪಿಎ ಸರಕಾರಗಳು ಸತತ 9 ವರ್ಷಗಳ ಆಳ್ವಿಕೆಯನ್ನು 'ಯಶಸ್ವಿ'ಯಾಗಿ ಪೂರ್ಣಗೊಳಿಸಿದ್ದನ್ನು ಆಚರಿಸುತ್ತಿದೆ. ಈ ನಿಟ್ಟಿನಲ್ಲಿ ಮುಂದಿನ ಸಾರ್ವತ್ರಿಕ ಚುನಾವಣೆಗೆ ಸಿದ್ಧತೆಯಾಗಿ ಜಾಹೀರಾತುಗಳ ಸರಣಿಯನ್ನು ಪ್ರಕಟಿಸಿದೆ. "ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನಿನ ಕೃಪೆ–ಇನ್ನಿಲ್ಲ ಜೀತದ ದುಡಿಮೆ" ಎಂಬುದು ಇಂತಹ ಒಂದು ಜಾಹೀರಾತಿನ ಒಕ್ಕಣಿಕೆ.

ಇದು ಸುಳ್ಳು ಎಂದು 'ಭಾರತದಲ್ಲಿ ಜೀತದ ದುಡಿಮೆ ನಿರ್ಮೂಲನೆಯ ಮೈತ್ರಿಕೂಟ' ಆಕ್ಷೇಪ ವ್ಯಕ್ತಪಡಿಸಿದೆ. ಹಲವು ವಲಯಗಳಲ್ಲಿ ಇನ್ನೂ ಜೀತಪದ್ಧತಿ ಮುಂದುವರೆಯುತ್ತಿದೆ. ಅದು ವಾಸ್ತವ ಸ್ಥಿತಿಯನ್ನು ಮರೆಮಾಚುವ ಇಂತಹ ಜಾಹೀರಾತುಗಳನ್ನು ಪ್ರಕಟಿಸುವುದು ಸರಿಯಲ್ಲ ಎಂದಿದೆ. ಬೇಸಾಯದ ವಲಯದಲ್ಲಿ ಮಾತ್ರವಲ್ಲ, ರೇಷ್ಮೆ ಉದ್ದಿಮೆ, ತೋಟಗಾರಿಕೆ, ಅಕ್ಕಿ ಗಿರಣಿಗಳು, ಇಟ್ಟಿಗೆ ಗೂಡುಗಳು, ಕಲ್ಲುಗಣಿಗಳು, ಕಾರ್ಪೆಟ್ ನೇಯ್ಗೆ ಮುಂತಾದ ವಲಯಗಳಲ್ಲಿ ಜೀತದಾಳುಗಳು ಇನ್ನೂ ಬೆವರು ಸುರಿಸುತ್ತಿದ್ದಾರೆ. ಇವರು ಸಾಮಾನ್ಯವಾಗಿ ಭೂಹೀನ ದಲಿತ, ಬುಡಕಟ್ಟು ವಿಭಾಗಗಳಿಗೆ ಸೇರಿದ ದಟ್ಟ ದರಿದ್ರರು. ಅವರಿಗೆ ರೇಗ ಕಾನೂನು ಎಂಬುದೊಂದು ಇದೆಯೆಂದೇ ಗೊತ್ತಿಲ್ಲ ಎಂದಿದೆ ಮೈತ್ರಿಕೂಟ. ಸ್ವತಃ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಒ) ಪ್ರಕಾರ ಜಗತ್ತಿನ ಜೀತದಾಳುಗಳಲ್ಲಿ 56 ಶೇ. ಭಾರತದಲ್ಲೇ ಇದ್ದಾರೆ ಎಂದು ಅಂದಾಜು ಮಾಡಿರುವತ್ತ ಅದು ಯುಪಿಎ ಸರಕಾರದ ಗಮನ ಸೆಳೆದಿದೆ.

"ರೇಗ ಗ್ರಾಮೀಣ ಬಡವರಿಗೆ ತುಸು ಪರಿಹಾರ ಒದಗಿಸುವ ಒಂದು ಒಳ್ಳೆಯ ಕಾರ್ಯಕ್ರಮವೆಂಬುದೇನೋ ನಿಜ. ಅದನ್ನು ಸರಿಯಾಗಿ ಜಾರಿಗೆ ತಂದರೆ ಬಹಳಷ್ಟು ಬದಲಾವಣೆಗಳನ್ನು ತರಬಲ್ಲದು. ಆದರೆ ಅದೇನೂ ಮಾಯಾದಂಡವಲ್ಲ. ಅದು ದುಡಿಮೆಗಾರರನ್ನು ಒಡೆಯರಾಗಿಯೇನೂ ಮಾಡಲಾರದು. ಹೀಗಿರುವಾಗ ಸರಕಾರದ ಇಂತಹ ಸಾರಾಸಗಟು ಹೇಳಿಕೆ ಸರಿಯಲ್ಲ." ಎಂದಿದೆ ಜೀತ ನಿರ್ಮೂಲನಾ ಮೈತ್ರಿಕೂಟ. ಮೊದಲು 'ಜೀತ ದುಡಿಮೆ ಪದ್ಧತಿ (ನಿರ್ಮೂಲನಾ) ಕಾನೂನು– 1976'ನ್ನು ಕಾಯಾ–ವಾಚಾ–ಮನಸಾ ಜಾರಿಗೊಳಿಸಿ ಎಂದು ಅದು ಆಗ್ರಹಿಸಿದೆ.

ಉಳ್ಳವರ ಪರವಾದ ತನ್ನ ನವ–ಉದಾರವಾದಿ ಧೋರಣೆಗಳನ್ನು ಮತ್ತು ಅದರ ಫಲವಾದ ಸಾಲು–ಸಾಲು ಹಗರಣಗಳನ್ನು ಮರೆಮಾಚಲು ಯುಪಿಎ–2 ಸರಕಾರ ಸಾಮಾಜಿಕ ರಂಗದಲ್ಲಿ ಕೆಲವು 'ತನ್ನ ಸಾಧನೆ'ಗಳ ಪ್ರಚಾರ–ಪ್ರದರ್ಶನದ ಮೇಲೆ ಗಮನ ಕೇಂದ್ರೀಕರಿಸಿದೆ. ಇದು 2003–04 ರಲ್ಲಿ ಸರ್ವತ್ರ ಗೇಲಿಗೆ ಒಳಗಾದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ 'ಇಂಡಿಯಾ ಶೈನಿಂಗ್' ಪ್ರಚಾರದಂತಲ್ಲ. ಇವೆಲ್ಲ 'ನಿಜಕಥೆ'ಗಳು ಎಂದು ಕೂಡ ಯುಪಿಎ ವಕ್ತಾರರುಗಳು ಹೇಳಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬಹುದು. ●

ಪುರುಷ ಪ್ರಧಾನ ಮೌಲ್ಯಗಳಿಗೆ....

ಪುಟ 2 ರಿಂದ

ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಬೇಕು. ಆ ಮೂಲಕ ನಮ್ಮ ಸಂಘಟನೆ ಲಿಂಗ ಸಂವೇದನೆಯುಳ್ಳ ಲಿಂಗ ಸಮಾನತೆಯ ಧೋರಣೆಯುಳ್ಳ ಯುವಜನ ಸಂಘಟನೆ ಎಂಬುದನ್ನು ನಿರೂಪಿಸಬೇಕು. ಹೀಗಾಗಿ ಘಟಕ ಮಟ್ಟದಿಂದ ರಾಜ್ಯಮಟ್ಟದವರೆಗೆ ಸಮಾವೇಶಗಳನ್ನು ಸೆಪ್ಟೆಂಬರ್ 2013ರೊಳಗೆ ನಡೆಸಿ ಉಪ ಸಮಿತಿಗಳನ್ನು ರಚಿಸಬೇಕು. ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ಹಾಗೂ ಜೆಎಂಎಸ್ ಜೊತೆಯಲ್ಲಿ ಜಂಟಿಯಾಗಿ ಸಮನ್ವಯ ಸಮಿತಿಗಳನ್ನು ರಚಿಸಿ 5 ಪ್ರಮುಖ ಅಂಶಗಳನ್ನು ಪ್ರಚಾರಪಡಿಸಲು ಮುಂದಾಗುವುದು.

1. ವರದಕ್ಷಿಣೆ ವಿರುದ್ಧ 2. ಸಮಾನ ಶಿಕ್ಷಣಕ್ಕಾಗಿ 3. ಲೈಂಗಿಕ ದೌರ್ಜನ್ಯಗಳ ವಿರುದ್ಧ 4. ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ 5. ಸಾಂಸ್ಕೃತಿಕ–ಕ್ರೀಡಾ ಕಾರ್ಯಕ್ರಮಗಳನ್ನು ಆಯೋಜಿಸುವುದು.

ಅಖಿಲ ಭಾರತ ಸಮಾವೇಶ ಅಂಗೀಕರಿಸಿರುವ ನಿರ್ಣಯಗಳನ್ನು ಜಾರಿಗೊಳಿಸುವ ತೀರ್ಮಾನದೊಂದಿಗೆ ನೂತನ ಅಖಿಲ ಭಾರತ ಯುವತಿಯರ ಉಪ ಸಮಿತಿ ಸಂಚಾಲಕರಾಗಿ ಪ್ರೀತಿ ಶೇಖರ್‌ರವರು ಆಯ್ಕೆಯಾಗಿದ್ದಾರೆ. ಉಪಸಮಿತಿಯಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ದಾವಣಗೆರೆಯ ಪ್ರಜ್ಞಾವರು ಆಯ್ಕೆಯಾಗಿದ್ದಾರೆ.

ಕರ್ನಾಟಕವನ್ನು ಪ್ರತಿನಿಧಿಸಿ ಹಾವೇರಿಯಿಂದ ಜ್ಯೋತಿ ಮಟ್ಟರಡ್ಡೇರ, ದಾವಣಗೆರೆಯಿಂದ ಪ್ರಜ್ಞಾ, ಬಳ್ಳಾರಿಯಿಂದ ಸೌಮ್ಯ, ಮಂಡ್ಯದಿಂದ ಭವಾನಿ, ಉತ್ತರ ಕನ್ನಡ ಜಿಲ್ಲೆಯಿಂದ ರತ್ನದೀಪ ಸೇರಿ ಒಟ್ಟು 5 ಪ್ರತಿನಿಧಿಗಳ ಜೊತೆಯಲ್ಲಿ ಡಿವೈಎಫ್‌ಐನ ರಾಜ್ಯಾಧ್ಯಕ್ಷರಾದ ಎನ್.ಎಲ್.ಭರತ್‌ರಾಜ್ ಹಾಗೂ ರಾಜ್ಯಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ●

ಕೋಟ್ಯಾಧೀಶರ.....

ಪುಟ 5 ರಿಂದ

ಅಪಾಯಕಾರಿ ಸಂಗತಿಗಳು

ಒಂದೆಡೆ ಉದಾರೀಕರಣದ ಆರ್ಥಿಕ ನೀತಿಗಳ ಜಾರಿ, 1990ರ ದಶಕದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಬಂದ ಉಬ್ಬರವು ರಿಯಲ್ ಎಸ್ಟೇಟ್ ದಂಧೆಗೆ ಇಂಬು ನೀಡಿ ವ್ಯಾಪಕವಾಗಿ ಬೆಳೆಯಿತು. ದಿಢೀರನೇ ಶ್ರೀಮಂತರಾದವರ ಸಂಖ್ಯೆಯೂ ಬೆಳೆಯಿತು. ಹಾಗೇ ಗಣಿ (ಅಕ್ರಮವೂ ಸೇರಿ) ಉದ್ಯಮವೂ ಸಹ. ಈ ಉದ್ಯಮಿಗಳು ಸರಕಾರದ ಮೇಲೆ ಹಿಡಿತ ಸಾಧಿಸಿ ತಮ್ಮ ದಂಧೆಯನ್ನು ಇನ್ನಷ್ಟು ಬೆಳೆಸಿಕೊಳ್ಳಲು ರಾಜಕೀಯ ಕ್ಷೇತ್ರದೊಳಗೆ ಪ್ರವೇಶಿಸಲು ತೊಡಗಿದರು. ತಮ್ಮ ಬೆಂಬಲಿಗರನ್ನೂ ಇಳಿಸಿದರು. ನಿಧಾನ ಗತಿಯಿಂದ ಆರಂಭಗೊಂಡು ಇಂದು ಇವರೇ ರಾಜಕೀಯ ಕ್ಷೇತ್ರವನ್ನು ಬಹುತೇಕವಾಗಿ ಆವರಿಸಿ ಬಿಟ್ಟಿದ್ದಾರೆ. ಕಾರ್ಪೋರೇಟ್ ರಾಜಕಾರಣದ ಅನೈತಿಕ ಅಕ್ರಮ ಮಾರ್ಗಗಳ ಮೂಲಕ ಸಾಮಾನ್ಯ ಜನರು, ದುರ್ಬಲ ವರ್ಗಗಳು, ದುಡಿಯುವ ವರ್ಗದ ನೈಜ ಪ್ರತಿನಿಧಿಗಳನ್ನು ವಿಧಾನಸಭೆಯ ಹತ್ತಿರವೂ ಸುಳಿಯದಂತೆ ದೂರ ಅಟ್ಟಿದ್ದಾರೆ. ತಮ್ಮ ಕಾರ್ಯಗಳ ಮೂಲಕ ಜನತೆಯನ್ನು ಗೆಲ್ಲಲಾಗದೇ ಹಣ, ಆಮಿಷಗಳ ಮೂಲಕ ಮತ ಸೆಳೆಯುವ ಅಸಹ್ಯಕರ, ಅಪಾಯಕಾರಿ ಪ್ರವೃತ್ತಿ ಬೆಳೆದು ನಿಂತಿದ್ದು ಅದು ಮಾಡುತ್ತಿರುವ ಅನಾಹುತಗಳನ್ನು ನಿತ್ಯವೂ ನೋಡುತ್ತಿದ್ದೇವೆ.

ತಲೆ ಎತ್ತಿರುವ ಕ್ರಿಮಿನಲ್ ಪ್ರವೃತ್ತಿ

ಮಾತ್ರವಲ್ಲ, ರಾಜಕೀಯ ಕ್ಷೇತ್ರದಲ್ಲಿ ಕ್ರಿಮಿನಲ್ ಹಿನ್ನೆಲೆಯುಳ್ಳ ಶಾಸಕರ ಸಂಖ್ಯೆಯೂ ಹೆಚ್ಚುತ್ತಿದೆ. ಈ 14 ನೇ ವಿಧಾನಸಭೆಯಲ್ಲಿನ 74 ಶಾಸಕರ ಮೇಲೆ ಕ್ರಿಮಿನಲ್ ಮೊಕದ್ದಮೆಗಳಿವೆ. ಅಲ್ಲದೇ 39 ಜನರ ಮೇಲೆ ಅತ್ಯಂತ ಗಂಭೀರವಾದ ಪ್ರಕರಣಗಳಿವೆ. 218 ಶಾಸಕರ ಪ್ರಮಾಣ ಪತ್ರಗಳ ಪರಿಶೀಲನೆಯಿಂದ ಈ ಅಂಶಗಳು ಹೊರಬಂದಿವೆ. ಗಂಭೀರ ಪ್ರಕರಣಗಳನ್ನು ಎದುರಿಸುತ್ತಿರುವವರಲ್ಲಿ **ಬಿಜೆಪಿ ಪಕ್ಷದ ಶೇ.25, ಬಿಎಸ್ಸಾರ್ ನ ಶೇ. 25, ಜೆಡಿ ಎಸ್ ನ ಶೇ.16, ಕಾಂಗ್ರೆಸ್ ನ ಶೇ14, ಶಾಸಕರು ಇದ್ದಾರೆ!**

ಕ್ರಿಮಿನಲ್ ಪ್ರಕರಣಗಳಲ್ಲಿ ಬಿಜೆಪಿಯ 13, ಜೆಡಿ(ಎಸ್)ನ 12, ಕಾಂಗ್ರೆಸ್‌ನ 37, ಕೆಜೆಪಿಯ 3, ಎಸ್.ಪಿ.ಯ 1 ಶಾಸಕರು ಇದ್ದಾರೆ. ಇವರೆಲ್ಲಾ ಬಹುತೇಕವಾಗಿ ಎಸಗಿದ ಕಾನೂನುಬಾಹಿರ, ಅಕ್ರಮಗಳಿಂದಾಗಿಯೇ ಕೇಸ್‌ಗಳನ್ನು ಅನಿವಾರ್ಯವಾಗಿ ಹಾಕಲ್ಪಟ್ಟವರು, ಜನರ ಪ್ರಶ್ನೆಗಳಿಗಾಗಿ ಹೋರಾಡಿ ಕೇಸ್ ಹಾಕಿಸಿಕೊಂಡದ್ದೇನಲ್ಲ ಎಂಬುದನ್ನು ಗಮನಿಸಬೇಕು.

ಸಂಸತ್ತಿನಲ್ಲಿನ ಸ್ಥಿತಿಯೂ ಭಿನ್ನವೇನಲ್ಲ. 2004 ರ ಲೋಕಸಭೆಯಲ್ಲಿ ಕ್ರಿಮಿನಲ್ ಹಿನ್ನೆಲೆಯುಳ್ಳವರು 128 ಸಂಸದರಿದ್ದರೆ, 2009ರಲ್ಲಿ 150. ಹಿಂದೆ 1993 ರಲ್ಲಿ ಕೇಂದ್ರ ಗೃಹ ಕಾರ್ಯದರ್ಶಿ ಎನ್.ಎನ್.ವೋರಾ ನೇತೃತ್ವದ ಸಮಿತಿಯು ಉದ್ದಿಮೆದಾರರು, ರಾಜಕಾರಣಿಗಳು, ಪಾತಕಿಗಳು ಮತ್ತು ಅಧಿಕಾರಶಾಹಿಗಳ ನಡುವಿನ ಅನೈತಿಕ ಮೈತ್ರಿಯನ್ನು ಬಯಲಿಗೆಳೆದ ವರದಿಯೊಂದನ್ನು ಸಿದ್ಧಪಡಿಸಿತ್ತು. ಆದರೆ ಅದು ಬಿಡುಗಡೆಗೊಂಡಿರಲಿಲ್ಲ. ಅಲ್ಲಿಂದ ಇಲ್ಲಿಯವರೆಗೆ ಈ ವಿದ್ಯಮಾನಗಳು ಹೆಚ್ಚುತ್ತಲೇ ಹೋಗಿವೆ ಹೊರತು ಸುಧಾರಿಸಲಿಲ್ಲ.

ಹೀಗೆ ಅಪಾರ ಅಕ್ರಮ ಆಸ್ತಿ ಹೊಂದಿರುವುದಲ್ಲದೇ ಇನ್ನಷ್ಟೂ ಆಸ್ತಿ ಮಾಡಬೇಕೆನ್ನುವ ಧಾವಂತವಿರುವ, ಅಲ್ಲದೇ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾದವರು ಬಹು ಸಂಖ್ಯೆಯಲ್ಲಿ ವಿಧಾನಸಭೆಯೊಳಗೆ ವಿವಿಧ ಪಕ್ಷಗಳ ಬ್ರ್ಯಾಂಡಿನಲ್ಲಿ ಸೀಟುಗಳನ್ನೆಲ್ಲಾ ಆಕ್ರಮಿಸಿಕೊಂಡು ಬಿಟ್ಟರೆ ಸಭ್ಯರಿಗೆ ಜಾಗವಾದರೂ ಎಲ್ಲಿ? ಇಂತಹವರು ಎಂತಹ ನೀತಿಗಳನ್ನು ಬಯಸುತ್ತಾರೆ, ಬೆಂಬಲಿಸುತ್ತಾರೆ? ಆದ್ದರಿಂದಲೇ ದೊಡ್ಡ ಉದ್ಯಮಿಗಳು, ಭ್ರಷ್ಟ ರಾಜಕಾರಣಿಗಳು, ಅಧಿಕಾರಶಾಹಿಗಳ ಕೂಟ ನಮ್ಮ ಸಾರ್ವಜನಿಕ ಸಂಪತ್ತು, ಪ್ರಾಕೃತಿಕ ಸಂಪತ್ತನ್ನು ಮುಕ್ತವಾಗಿ ಲೂಟಿ ಮಾಡಲು ಮುಂದಾಗಿದೆ. ಜಾಗತೀಕರಣ–ಉದಾರೀಕರಣದಲ್ಲಿ ಅಂತಹ ಅವಕಾಶವನ್ನು ನೀಡಲಾಗುತ್ತಿದೆ.

'ಉದಾರೀಕರಣದ ಪ್ರಕ್ರಿಯೆಯೇ ಅತೀ ಹೆಚ್ಚಿನ ಭ್ರಷ್ಟಾಚಾರಕ್ಕೆ ಮುಕ್ತ ಕುಮ್ಮಕ್ಕು ನೀಡಿರುವುದು. ಇಂತಹ ಬಂಡವಾಳವು ರಾಜಕೀಯ ಸಾರ್ವಭೌಮತ್ವವನ್ನು, ಪ್ರಜಾಪ್ರಭುತ್ವವನ್ನು ಕಡೆಗಣಿಸುತ್ತವೆ. ಅಕ್ರಮವಾಗಿ ಸೇರುತ್ತಲೇ ಇರುವ ಬಂಡವಾಳ ತಾನು ಮತ್ತಷ್ಟು ಮುಂದೆ ಸಾಗಲು ಯಾವುದೇ ಅಡೆ ತಡೆಗಳನ್ನು ಒಪ್ಪುವುದಿಲ್ಲ. ಹೀಗಾಗಿ ಅನಿರ್ಬಂಧಿತ, ಸ್ವೇಚ್ಛಾಚಾರವನ್ನು ಅದು ಬಯಸುತ್ತದೆ. ಅತೀ ಲಾಭವನ್ನು ಬಯಸುತ್ತದೆ'.

ಈ ಪ್ರಕ್ರಿಯೆಗಳು ಮತ್ತದರ ಪರಿಣಾಮ ಕ್ಯಾನ್ಸರ್ ತರಹ ಹಬ್ಬುತ್ತಿದೆ. ಸಂವಿಧಾನದ ರಕ್ಷಣೆಯ ವ್ಯವಸ್ಥೆಯನ್ನೇ ನಿಷ್ಕ್ರಿಯಗೊಳಿಸುತ್ತಾ ನಡೆದಿದೆ. ಭಾಗಶಃ ಅಧಿಕಾರಶಾಹಿಯನ್ನು ಹಾಳುಗೆಡಹಿದೆ. ಮಾಧ್ಯಮಗಳನ್ನು ಮಲಿನಗೊಳಿಸಿದೆ. ನ್ಯಾಯಾಂಗ ವ್ಯವಸ್ಥೆಗೂ ಕೈ ಚಾಚಿ ಬೆದರಿಕೆ ಒಡ್ಡಿದೆ. ಹೀಗೆ ಪ್ರಜಾಪ್ರಭುತ್ವದ ತಳಪಾಯವನ್ನೇ ಅಲಿಗಾಡಿಸುತ್ತಿದೆ.

ಕರ್ನಾಟಕದ ಎಲ್ಲಾ ಸಂಗತಿಗಳನ್ನು ಗಮನಿಸುವಾಗಲೂ ಇನ್ನು ಮುಂದಿನ ಬೆಳವಣಿಗೆಯ ಗತಿ ಆತಂಕಕಾರಿ. ಬಾಯಲ್ಲಿ ಏನೇ ಈ ಸರಕಾರ ಅಥವಾ ಆಳುವವರ್ಗಗಳ ವಿವಿಧ ಪಕ್ಷಗಳ ನಾಯಕರು ಏನೇ ಹೇಳಿದರೂ ವಿಧಾನಸೌಧವೆಂಬ ಪ್ರಜಾಸತ್ತಾತ್ಮಕ ವೇದಿಕೆಯಲ್ಲಿ ಕುಳಿತಿರುವ ಕೋಟ್ಯಾಧೀಶರು ಅಂತಿಮವಾಗಿ ತಮಗೆ ಬೇಕಾದುದನ್ನೇ ಮಾಡುತ್ತಾರೆ. ಆದ್ದರಿಂದ ಇಂತಹ ಪ್ರಭುಗಳು ಒಳಗಿರುವಾಗ ಹೊರ ನೂಕಲ್ಪಟ್ಟ ಪ್ರಜೆಗಳು ಜನಾಂದೋಲನಗಳ ಮೂಲಕ ಕೋಟ್ಯಾಧೀಶರ ಕೋಟೆ ಭೇದಿಸಿ ಪ್ರತಿನಿಧಿ ಪ್ರಭುಗಳನ್ನು ಬೀದಿಗೆಳೆಯಬೇಕಾಗುತ್ತದೆ. ಜನತೆಯ ಪ್ರಜಾಪ್ರಭುತ್ವವನ್ನು ರಕ್ಷಿಸಬೇಕಾಗುತ್ತದೆ. ●

RNI No. KARKAN /2006/17926 Posted on every S
Licensed to Post without prepayment License No. WPP

'ಹೆಡ್‌ಲೈನ್ಸ್–ಸೀ ವೋಟರ್' ಸಮೀಕ್ಷೆ:

ನರೇಂದ್ರ ಮೋದಿಗೆ ನಮೋ, ನಮೋ. ಎನ್ನುವುದು ಯಾಕೆ ?


– ಆರ್. ರಾಮಕೃಷ್ಣ.

'ಕೂಸಿಗೆ ಮುಂಚೆ ಕುಲಾವಿ ಹೊಲೆಸಿದರು' ಅಂತ ಒಂದು ಗಾದೆ ಮಾತಿದೆ. ಕಳೆದ ವಾರ 'ಹೆಡ್‌ಲೈನ್ಸ್ ಟು ಡೇ' ಎಂಬ ಇಂಗ್ಲೀಷ್ ಟಿವಿ ಚಾನೆಲ್ ಮತ್ತು 'ಸೀ ವೋಟರ್' ಎಂಬ ಸಂಸ್ಥೆಗಳ ಚುನಾವಣಾ ಪೂರ್ವ ಸಮೀಕ್ಷೆಯ ವಿವರಗಳು ಪ್ರಕಟವಾದವು. ಈ ಸಂಬಂಧದ ಹೆಡ್ ಲೈನ್ಸ್ ಟುಡೆ ಟಿವಿ ಕಾರ್ಯಕ್ರಮವನ್ನು ನೋಡಿದವರಿಗೆ ಈ ಗಾದೆ ನೆನಪಾಗಿರಬಹುದು.

ಯುಪಿಎ–2 ಸರ್ಕಾರಕ್ಕೆ ಈ ಮೇಗೆ 4 ವರ್ಷ ತುಂಬಿತು. ಈ ಸಂದರ್ಭದಲ್ಲಿ ಅಂದರೆ ಏಪ್ರಿಲ್–ಮೇ 2013ರಲ್ಲಿ ಚುನಾವಣೆ ನಡೆದಿದ್ದರೆ ದೇಶದ ಮತದಾರರ ಯಾವ ಫಲಿತಾಂಶ ನೀಡಿರುತ್ತಿದ್ದ ಎಂಬ ಜನಾಭಿಪ್ರಾಯ ಸಂಗ್ರಹದ ಪ್ರಯತ್ನ ಅದು. ಸಮೀಕ್ಷೆಯಲ್ಲಿ ಯಾವ ಯಾವ ಪಕ್ಷಗಳಿಗೆ ಯಾವ ರೀತಿಯ ಜನಬೆಂಬಲ ವ್ಯಕ್ತವಾಗಿದೆ ಏನು ಎತ್ತ ಎಂದು ಪರಿಶೀಲಿಸುವುದು ಈ ಬರಹದ ಉದ್ದೇಶ ಅಲ್ಲ. ಈ ಸಮೀಕ್ಷೆ ನಡೆಸಿ ಅದನ್ನು ಈ ಸಂಸ್ಥೆಗಳು ಯಾವ ಉದ್ದೇಶಕ್ಕೆ ಬಳಸುತ್ತಿವೆ ಅಂತ ಕೊಂಚ ನೋಡಬೇಕಿದೆ.

ಸಮೀಕ್ಷೆ ಪ್ರಕಾರ ಕಾಂಗ್ರೆಸ್ ನೇತೃತ್ವದ ಕೇಂದ್ರ ಯುಪಿಎ ಸರ್ಕಾರದ ಜನಪ್ರಿಯತೆ ತೀರಾ ಕುಸಿದಿದೆ. ಕಾಂಗ್ರೆಸ್ ಕೂಟ ಚುನಾವಣೆಯಲ್ಲಿ 95 ಲೋಕಸಭಾ ಸ್ಥಾನಗಳನ್ನು ಕಳೆದುಕೊಳ್ಳುತ್ತದೆ. ಅಂದರೆ ಅದು 132 ಸ್ಥಾನಗಳನ್ನು ಮಾತ್ರ ಪಡೆದುಕೊಳ್ಳುತ್ತದಂತೆ. ಆದರೆ ಕಾಂಗ್ರೆಸ್ ಕೂಟಕ್ಕೆ ಆಗುವ ನಷ್ಟವೆಲ್ಲ ಸೀದಾ ಬಿಜೆಪಿಗೆ ಮತ್ತು ಎನ್‌ಡಿಎಗೆ ಲಾಭವಾಗಿ ಒದಗುವುದಿಲ್ಲವಂತೆ. ಬಿಜೆಪಿ ಮತ್ತು ಎನ್‌ಡಿಎ ಕ್ರಮವಾಗಿ 137 ಮತ್ತು 179 ಸ್ಥಾನಗಳನ್ನು ಪಡೆದುಕೊಳ್ಳುತ್ತವಂತೆ.

ಮೂರನೇ ರಂಗದಲ್ಲಿ ಬರಬಹುದಾದ ವಿವಿಧ ಪ್ರಾದೇಶಿಕ ಮತ್ತು ರಾಷ್ಟ್ರೀಯ ಪಕ್ಷಗಳಿಗೆ ಒಟ್ಟಾರೆ ಸುಮಾರು 232 ಸ್ಥಾನಗಳು ಬರಬಹುದಂತೆ.



ಈ ಅಂಕಿ ಸಂಖ್ಯೆಗಳ ಗಣಿತದ ಕಸರತ್ತುಗಳಿಗೆ ಖಂಡಿತ ಇದು ಕಾಲವಲ್ಲ. ಆದರೆ ಸಮೀಕ್ಷೆಯ ಬಗೆಗೆ ಇಷ್ಟು ಮಾತ್ರ ಹೇಳಬಹುದು ಅನಿಸುತ್ತೆ. ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಕೂಟಗಳ ಕಡೆಗೆ ದೇಶದ ಜನರ ಒಲವು ಇಲ್ಲ ಎಂಬ ಸತ್ಯವನ್ನು ಸಮೀಕ್ಷೆಗೆ ಮರೆಮಾಚಲು ಆಗಿಲ್ಲ.

ಈ ಸಮೀಕ್ಷೆಯ ವಿವರ ಪ್ರಕಟಿಸಿ 'ಹೆಡ್‌ಲೈನ್ಸ್ ಟುಡೇ' ವಾಹಿನಿಯಲ್ಲಿ ನಡೆಸಲಾದ ಸು. ಎರಡು ಗಂಟೆಗಳ ಚರ್ಚೆಯ ಕೆಲವು ಮುಖ್ಯ ಅಂಶಗಳ ಬಗೆಗೆ ಇಲ್ಲಿ ಹೇಳಲೇ ಬೇಕು.

ನರೇಂದ್ರ ಮೋದಿ ಎನ್‌ಡಿಎ ಕೂಟದ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಬಿಟ್ಟರೆ ಈ ಅಂಕಿ–ಅಂಶಗಳೇ ಹಲವು ತಲೆಕೆಳಕಾಗುತ್ತವಂತೆ. ಅದರಿಂದ ಬಿಜೆಪಿ–ಎನ್‌ಡಿಎಗೆ ಹಾಲಿನ ನೊರೆ ಉಕ್ಕಿ ಬರುವಂತೆ ಜನಬೆಂಬಲ ಉಕ್ಕಿ ಬಂದು ಎನ್‌ಡಿಎಗೆ ಅಧಿಕಾರದ ಹಾದಿ ಸುಗಮವಾಗುತ್ತದಂತೆ.

'ಮುಂದಿನ ಲೋಕಸಭಾ ಚುನಾವಣೆಯ ನಂತರ ದೇಶದಲ್ಲಿ ಮೂರನೇ ರಂಗದ 'ಕಿಚಡಿ ಸರ್ಕಾರ' ಬಂದು 'ವಕ್ಕರಿಸುವ' ಸಾಧ್ಯತೆ ಕಾಣುತ್ತಿದೆ. ದೇಶದ ಪ್ರಗತಿ ಹಳ್ಳದ ಹಾದಿ ಹಿಡಿಯುತ್ತದೆ (ದೇಶದ ಪ್ರಗತಿಯ ಹಾದಿ ಈಗ ನೇರ ಸ್ವರ್ಗದ ಕಡೆಗೇ ಇದೆ!!) ಬಿಜೆಪಿಯವರೇ, ನೀವೆಂಥ



ಹೊಣೆಗೇಡಿಗಳು ? ನೀವು ಯಾಕೆ ಇನ್ನೂ ನರೇಂದ್ರ ಮೋದಿಯನ್ನು ಪ್ರ ಅಭ್ಯರ್ಥಿ ಅಂತ ಘೋಷಣೆ ಮಾಡಿಲ್ಲ ದಯವಿಟ್ಟು ಬೇಗ ಘೋಷಣೆ ಮಾ ದೇಶವನ್ನು ಕಾಪಾಡಿ.' ಅಂತ ಟಿ.ವಿ. ನಿರೂಪಕ ರಾಹುಲ್ ಕನ್ವಲ್ ಬಿಜೆಪಿ ಮುಖಂಡರಿಗೆ ಸ್ಟುಡಿಯೋದಿಂದಲೇ ಫೋನ್ ಮಾಡಿ ದುಂಬಾಲು ಬಿದ್ದು ವರಾತ ಇಟ್ಟು ಬಿಟ್ಟ, ಆಹಾ ಮಾಧ್ಯಮ ಸಂಹಿತೆಯೇ !! ಆಹಾ ನೈತಿಕತೆಯೇ

ನಿಗದಿಯಂತೆ ಲೋಕಸಭಾ ಚುನಾ ನಡೆದರೆ ಅದಕ್ಕೆ ಇನ್ನೂ ಒಂದು ವರ್ಷವಿದೆ. ಸಾವಿರಾರು ಮುಗ್ದರ, ಅಮಾಯಕರ ನರಮೇಧದ ಕಳಂಕದ ಮಸಿಯನ್ನು ಮುಖ ಮೈಯೆಲ್ಲಾ ಮೆತ್ತಿಕೊಂಡಿರುವ ಒಬ್ಬ ಮತಾಂಧನ ಪರವಾಗಿ ಈಗಲೇ ಈ ಪಾಟಿ ಉರಿಯೆಬ್ಬಿಸುವುದನ್ನು ನೋಡಿದರೆ ಇ ಚುನಾವಣೆ ಬರುವಾಗ ಇದು ಎಲ್ಲಿಗೆ ಹೋಗಿ ನಿಲ್ಲುತ್ತದೋ ? ಮಾಧ್ಯಮಗ ಈ 'ನರೇಂದ್ರ ಮೋದಿ ನಮೋ ನಮೋ ಮಂತ್ರವನ್ನು ಪ್ರಜ್ಞಾವಂತ ಜನತೆ ಕಟ್ಟೆಚ್ಚರದಿಂದ ಗಮನಿಸಬೇಕಿದೆ.



ಗುಜರಾತ್‌ನಲ್ಲಿ ಮಾರುತಿ ಸುಜುಕಿ ಕಂಪನಿಯ ಹೊಸ ಘಟಕಕ್ಕೆ ರೈತರ ಭೂಮಿ ಕಿತ್ತುಕೊಳ್ಳುವ ನೀತಿ ವಿರುದ್ಧ ರೈತರ ಬೃಹತ್ ಪ್ರತಿಭಟನೆ

ಪವಿತ್ರ ದಿನಚರಿ

ಕವನ

ಅಮೇರಿಕಾ ನೀನೆಷ್ಟು ಪವಿತ್ರ!
ಕ್ಷಣಕ್ಷಣವೂ ರುಧಿರ ಧಾರೆಯಲ್ಲೇ ಸ್ನಾನ
ಸಂಧ್ಯಾ ವಂದನೆ. . .. ಜಪತಪಾದಿ
ನಿನ್ನ ದಿನಚರಿಯೆಲ್ಲ ಅಪ್ಪಟ ತಪಸ್ಸು
ಅದೆಂಥ ಪ್ರಜಾಪ್ರಭುತ್ವ ನಿನ್ನ ಸಂಕಲ್ಪ!
ಶಾಂತಿಧೂತೆಯ ಹೆಡಮುರಿಗೆ ಕಟ್ಟಿ
ಹಠ ಬಿಡದ ನಿನ್ನ ಪಯಣಗಳೆಲ್ಲ
ಕಾರ್ಪೋರೇಟ್‌ಗಳಿಗೇ ತರ್ಪಣ!

ಇಸ್ರೇಲಿನ ಮುಂಜಾವ ಮಂಜಿನಲಿ
ಮುಖಮಾರ್ಜನ ಮುಗಿಸಿದೆ
ಪ್ಯಾಲಿಸ್ಟೇನ್ ಗುಬ್ಬಚ್ಚಿ ಸುತ್ತ ಹದ್ದುಗಳ
ಗಾಳಿಪಟ ಹಾರಿಸಿದೆ
ಹದ್ದು ಮೀರಿ ಗಾಜಾಪಟ್ಟಿಗೂ ಇಳಿವೆ
ಎಣ್ಣೆರಾಜಕೀಯದಲಿ ಆಟವೂ ನೋಟವೂ
ರಕ್ಷಣಾತ್ಮಕ ಪಾಠವೂ ಎಲ್ಲವೂ
ನೀನು ಪವಿತ್ರವಾಗಲು ಮಾತ್ರ,

ಹಾಗೇ, ಇರಾಕ್ ಮುಗಿಸಿದ್ದು ಮಧ್ಯಾಹ್ನ,
ಅಪರಾಹ್ನ ಅಫಘಾನಿಸ್ತಾನಿನಲ್ಲಿದ್ದೆಯಲ್ಲ.....
ಆಗಾಗ ಕೋರಿಯಾ, ಲೀಬ್ಯಾ,
ಆಫ್ರಿಕಾದತ್ತ ವಿಹಾರ ಹೊರಟು
ಸುಸ್ತಾಗಿ ವಿಶ್ರಾಂತಿಗೆ ವಿಶ್ವಬ್ಯಾಂಕಿನಲ್ಲಿದ್ದ
ಅಲ್ಲಿಂದಲೇ ಹಾರಾಡುವ ಬಂಡವಾಳ
ಬೋಧಿಸಿದೆ
ಕುರುಡು ಕಾಂಚಾಣವು ಹೊರಳಿ
ನಿನ್ನ ಪಾದದಡಿಯೇ ನರಳುವಂತೆ
ಮಾಡಿದೆ.

ನೀನು ಹೋದಲ್ಲೆಲ್ಲ ತಲೆಬಾಗಿದವರ
ಮೈಮನ ಸಂಪತ್ತ ಸೂರೆ ಹೊಡೆದೆ
ವ್ಯಭಿಚಾರವೇ ಮೈವೆತ್ತ
ಆಚಾರಕ್ಕೆರಗಿಸಿಕೊಂಡೆ
ಸೆಡ್ಡು ಹೊಡೆದವರ ಗುದ್ದಿ ಬಾಂಬಿನಳಿ
ಬಂದೂಕ ನಳಿಕೆಗಳಿಗೆ ಮುರಸೊತ್ತಿಲ್ಲದ್ದ
ನೀನು ಪವಿತ್ರ!! ಅಮೇರಿಕಾ ನೀನು
ಪವಿತ್ರ!!!

–ಯಮುನಾ ಗಾಂವ್ಕರ್ , ಕಾರವ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout BANGALORE-560086 Editor : NITHYANANDASWAMI